

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 26 ಜೂನ್ 23-29, 1997 ಬೆಲೆ ರೂ. 2.00

"ಅಡಗಿಸಿಟ್ಟ ಸಂಪತ್ತಿನ ಕೇವಲ ಶೇ. 30 ಸರಕಾರಕ್ಕೆ ಕೊಡಿ, ನಿಶ್ಚಿಂತರಾಗಿರಿ"

ಭಾರತದ ಅಪ್ರಾಮಾಣಿಕ ಸಿರಿವಂತ ನಾಗರೀಕರೇ ಕೇಳಿ!

ಈ ಅರ್ಥ ಬರುವ ಪೂರ್ಣ ಪುಟದ ಸರಕಾರೀ ಜಾಹೀರಾತುಗಳು ಈ ವಾರ ದೊಡ್ಡ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹೌದು, ಸಿರಿವಂತರ ಕಣ್ಮಣಿ ಚಿದಂಬರಂರವರ ಕೇಂದ್ರ ಹಣಕಾಸು ಇಲಾಖೆ ಜೂನ್ 18ರಂದು "ಸ್ವಯಂಪ್ರೇರಿತ ಆದಾಯ ಬಹಿರಂಗ ಯೋಜನೆ"(VDIS' 97)ಯನ್ನು ಪ್ರಕಟಪಡಿಸಿದೆ. ಜತೆಗೇ ಹಲವು ಸಂದೇಹಗಳನ್ನೂ ಈ ಪ್ರಕಟಣೆ ಎಬ್ಬಿಸಿದೆ.

ಮುರೂವರೆ ತಿಂಗಳ ಹಿಂದೆ ಕೇಂದ್ರ ಬಜೆಟ್ಟಿನಲ್ಲಿ ಆರ್ಥಿಕ ಅಪರಾಧಗಳಿಗೆ ಕ್ಷಮಾದಾನ ನೀಡುವ ಯೋಜನೆಯನ್ನು ಪ್ರಕಟಿಸಿದಾಗಲೂ ಈ ಬಗ್ಗೆ ಗಂಭೀರ ಸಂದೇಹಗಳನ್ನು ವ್ಯಕ್ತಪಡಿಸಲಾಗಿತ್ತು. ಈಗ ಅದು ನಿಜವಾಗಿದೆ ಎಂದು ಈ ಪ್ರಕಟಣೆಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. *ಹವಾಲಾ ವ್ಯವಹಾರಗಳು, ಹಾಗೂ ಕಪ್ಪು ಹಣವನ್ನು ಬಿಳುಪು ಮಾಡುವ ಇತರ ಹಲವಾರು ವ್ಯವಹಾರಗಳನ್ನು ಕುರಿತಂತೆ ವಿಚಾರಣೆಗೊಳಗಾಗಿರುವ ಹಲವಾರು ಗಂಭೀರ ಪ್ರಕರಣಗಳನ್ನು ಈ ಯೋಜನೆಯ ಪ್ರಕಾರ ಕೈಬಿಡಲಾಗುವುದು. ಈಗಾಗಲೇ ಬಂಧನದ ಆದೇಶ ಪಡೆದವರು ಮಾತ್ರವೇ ಈ ಯೋಜನೆಯ ಪ್ರಯೋಜನ ಪಡೆಲು ಅನರ್ಹರು ಎಂದು ಕೇಂದ್ರ ನೇರ ತೆರಿಗೆ ಮಂಡಳಿಯ(CBDT) ಅಧ್ಯಕ್ಷರು ಹೇಳಿರುವುದರಿಂದ ವಿಚಾರಣೆಗೊಳಪಟ್ಟಿರುವ ಇತರ ಎಲ್ಲರೂ ಈ ಯೋಜನೆಯಿಂದಾಗಿ ಸಂಪೂರ್ಣ ರಕ್ಷಣೆ ಪಡೆಯುತ್ತಾರೆ ಎಂದು* ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಹಣಕಾಸು ಮಂತ್ರಿಗಳು ಈ ಭಾವನೆಯನ್ನು ಸ್ಪಷ್ಟೀಕರಿಸಲು, ಸರಿಪಡಿಸಲು ಪ್ರಯತ್ನಿಸಿದರೂ ಈಯೋಜನೆ CBDT ಅಧ್ಯಕ್ಷರು ಹೇಳಿದ ಅಂಶಗಳನ್ನೇಹೊಂದಿದೆ ಎಂದು ಪೊಲಿಟ್ ಬ್ಯೂರೋ ಹೇಳಿಕೆ ಅಭಿಪ್ರಾಯಪಟ್ಟಿದೆ.

ಇದೆಂತಹಾ 'ಉದಾರತೆ'! ವಿನಮ್ರತೆ!

"ನೀವು ಇದುವರೆಗೆ ಅಡಗಿಸಿಟ್ಟ ಆದಾಯವನ್ನು ಅತಿ ಕಮ್ಮಿ ತೆರಿಗೆ ನೀಡಿ ಕಾನೂನು ಬದ್ಧಗೊಳಿಸುವ ಅವಕಾಶವಿದು" - ಹೀಗೆಂದು ಆರಂಭವಾಗುತ್ತದೆ ಮೇಲೆ ಹೇಳಿದ ಸರಕಾರೀ (ಆದಾಯ ತೆರಿಗೆ ನಿರ್ದೇಶನಾಲಯದ) ಜಾಹೀರಾತು! - ಸುವರ್ಣಾವಕಾಶ ಎಂದು ಹೇಳಿಲ್ಲ, ಅಷ್ಟೆ.

ಆ ಜಾಹೀರಾತು ಮುಂದುವರೆದು ಹೇಳುತ್ತದೆ -

"ನಿಮ್ಮ ಆದಾಯ ಘೋಷಣೆಗಳನ್ನು ಗೋಪ್ಯವಾಗಿಡಲಾಗುವುದು. ಯಾವುದೇ ಪ್ರಶ್ನೆ ಕೇಳುವುದಿಲ್ಲ, ಪರೀಕ್ಷಿಸುವುದಿಲ್ಲ. ಬೇರೆ ಯಾವುದೇ ಸರಕಾರೀ ಇಲಾಖೆಗೆ ನಿಮ್ಮ ಈ ಘೋಷಣೆಯನ್ನು ಒದಗಿಸುವುದಿಲ್ಲ" - ಇದು ದೇಶದ ಕಾನೂನು ಮುರಿದು, ಕಪ್ಪು ಹಣ ಪೇರಿಸಿ ದೇಶದ ಆರ್ಥಿಕಕ್ಕೆ ಅಪಾರ ಹಾನಿಯುಂಟು ಮಾಡಿದ ಅಪ್ರಾಮಾಣಿಕರಿಗೆ ಅಪರಾಧಿಗಳಿಗೆ ಸರಕಾರದ ಅಭಯ ಹಸ್ತ. ಈ 'ಉದಾರೀಕರಣ'ದ ಶಿಷ್ಟಾಚಾರ ಎಷ್ಟು ಉನ್ನತ ಅಲ್ಲವೇ?

"ಈ ಯೋಜನೆ ನಿಮಗೆ ಆದಾಯ ತೆರಿಗೆ ಕಾನೂನು, ಆಸ್ತಿ ತೆರಿಗೆ ಕಾನೂನು ವಿದೇಶೀ ವಿನಿಮಯ ಪತ್ತೋಟಿ ಕಾನೂನು, ಕಂಪನಿ ಕಾನೂನುಗಳಿಂದ ಸಂಪೂರ್ಣ ಕ್ಷಮಾದಾನ ನೀಡುತ್ತದೆ" - ಎಂದಿದೆ ವಿನಮ್ರವಾಗಿ ಈ ಜಾಹೀರಾತು ಆ ಕಪ್ಪು ಹಣದ ವ್ಯಕ್ತಿಗಳಿಗೆ - ಶಕ್ತಿಗಳಿಗೆ VDVS' 97 ನಿಮ್ಮ ನಗ-ನಾಣ್ಯ, ಆಸ್ತಿ-ಸಂಪತ್ತು ಭಾರತದಲ್ಲಿರಲಿ, ಹೊರಗಿರಲಿ, ಆ ಬಗ್ಗೆ ಘೋಷಿಸಲು ಅವಕಾಶ ನೀಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಅತಿ ಕಮ್ಮಿ ತೆರಿಗೆ ದರದಲ್ಲಿ, ಸಂಪೂರ್ಣ ರಕ್ಷಣೆಯನ್ನು, ಎಲ್ಲಕ್ಕೂ ಮಿಗಿಲಾಗಿ ಮನಶ್ಶಾಂತಿಯನ್ನು ನೀಡುವ ಯೋಜನೆ" ಹೀಗೆಂದು ಮುಕ್ತಾಯಗೊಳ್ಳುತ್ತದೆ ಈ ಜಾಹೀರಾತು.

ಆಹಾ! ಎಂತಹ ಉನ್ನತ ಉದಾರ ಮನೋಭಾವನೆ! ಜತೆಗೆ ವಿನಮ್ರತೆ ಕೂಡಾ. ಆದರೆ ಇದು ವರ್ಷಾನುಗಟ್ಟಲೆ ದೇಶದ ಕಾನೂನುಗಳನ್ನು ಮುರಿದು ಆರ್ಥಿಕವನ್ನು ಹಾಳುಗೆಡವಿದ ಅಪಾತ್ರರಿಗೆ ತೋರುವ ಉದಾರತೆ. ಆದ್ದರಿಂದಲೇ "*ಪ್ರಾಮಾಣಿಕ ತೆರಿಗೆ ದಾರನಿಗೆ ಶಿಕ್ಷೆ ನೀಡಿ, ಆರ್ಥಿಕ ಅಪರಾಧಗಳಲ್ಲಿ ತೊಡಗಿದ್ದವರಿಗೆಲ್ಲಾ ರಕ್ಷಣೆ ನೀಡುವ ಕ್ರಮ*" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಯೋಜನೆಯನ್ನು ಬಲವಾಗಿ ಖಂಡಿಸಿದೆ. ಏಕೆಂದರೆ ಇಂತಹ ಮಂದಿಗೆ ಬೇರೆ ರೂಪದಲ್ಲಿ 20000 ಕೋಟಿ ರೂಗಳಷ್ಟು ರಿಯಾಯ್ತಿಗಳನ್ನು ಈ ಮೊದಲೇ ಕೊಡಲಾಗಿದೆ. ಅದನ್ನು ಸರಿ ಹೊಂದಿಸಲು ಪೆಟ್ರೋಲ್, ಡೀಸೆಲ್, ಸೀಮೆ ಎಣ್ಣೆಗೆ ಹೆಚ್ಚು ಬೆಲೆ ಕೊಡಿ ಎಂದು ಪ್ರಾಮಾಣಿಕ ನಾಗರೀಕರನ್ನು ಬೆದರಿಸಲಾಗುತ್ತಿಲ್ಲವೇ?

ಈ ಯೋಜನೆಯನ್ನು ಜೂನ್ 1 ರಿಂದ ಜಾರಿಗೆ ತರುವ ಬಗ್ಗೆ ಹೇಳುತ್ತಾ ಕೇಂದ್ರ ನೇರ ತೆರಿಗೆ ಮಂಡಳಿಯ ಅಧ್ಯಕ್ಷರು ಹೇಳಿರುವ ಈ ಮಾತುಗಳನ್ನು ವಿಮರ್ಶಿಸಿ - "1975 ಹಾಗೂ 1985ರಲ್ಲಿ ಸರಕಾರ ಇಂತಹ ಯೋಜನೆಗಳನ್ನು ಪ್ರಕಟಿಸಿತ್ತು. ಆದರೆ ಈ ಬಾರಿ ಈ ಯೋಜನೆ ಯಶಸ್ವಿಯಾಗುವುದು ಖಂಡಿತ. ಏಕೆಂದರೆ ಈ ರೀತಿ ಬಹಿರಂಗಪಡಿಸಿದ ಆದಾಯದ ಮೇಲಿನ ತೆರಿಗೆ ದರ ಹಿಂದೆಂದಿಗಿಂತಲೂ ಅತಿ ಕಮ್ಮಿ". ಡಿಸೆಂಬರ್ 31, 1997ರವರೆಗೆ ಜಾರಿಯಲ್ಲಿರುವ ಈ ಯೋಜನೆ ಕಪ್ಪು ಹಣವನ್ನು ಬಿಳಿ ಮಾಡುವ 'ಕೊನೆಯ' ಅವಕಾಶ ಎಂದೂ ಸರಕಾರೀ ಪ್ರಕಟಣೆ ಹೇಳಿದೆ. 1975, 1985, 1997 ರಲ್ಲಿ ಬಂದದ್ದು ಇಲ್ಲಿಗೇ ನಿಲ್ಲುವಷ್ಟು 'ಉದಾರೀಕರಣ' ಅನುದಾರವಾಗುತ್ತದೆಯೇ? ಆದ್ದರಿಂದ ಕಪ್ಪು ಹಣದ ಮಂದಿ ಈಗಾಗಲೇ ನಿಶ್ಚಿಂತರಾಗಿಯೇ ಇದ್ದಾರೆ. ಅವರ 'ಮನಶ್ಶಾಂತಿ' ಎಂದೂ ಕದಡಿರಲಿಲ್ಲ. ಸಂಯುಕ್ತ ರಂಗ ಸರಕಾರದ ಮೇಲೆ ಎಡಪಕ್ಷಗಳ ಒತ್ತಡ ಕಂಡು ಈಗಷ್ಟೇ ಸ್ವಲ್ಪ ಕದಡಿರಬೇಕು. ಅದಕ್ಕೇ ಚಿದಂಬರಂ ಖಾತೆಯ ಈ ಅಭಯ ಹಸ್ತ!

"*ಯಾವುದೇ ರೀತಿಯಲ್ಲೂ ಫೆರಾ ಮತ್ತಿತರ ಸಂಬಂಧಿತ ಅಪರಾಧಗಳಲ್ಲಿ ವಿಚಾರಣೆಗೊಳಗಾದವರು ಈ ರಕ್ಷಣೆಯನ್ನು ಪಡೆಯಲು ಬಿಡಬಾರದು. ಈ ಯೋಜನೆಯ ಉದ್ದೇಶದ ಬಗ್ಗೆ ಎದ್ದಿರುವ ದೊಡ್ಡ ಸಂದೇಹಗಳ ಬಗ್ಗೆ ಹಣಕಾಸು ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು*" ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಯೋಜನೆಯ ಜಾರಿಯನ್ನು ತಕ್ಷಣ ಅಮಾನತುಗೊಳಿಸಬೇಕು ಎಂದು ಆಗ್ರಹಪಡಿಸಿದೆ. □


ರೇಷನ್ ವ್ಯವಸ್ಥೆಯನ್ನು ಬಲಪಡಿಸುವ ರೀತಿಯೇ ಇದು?

"ಬೆಲೆ ಸ್ಥಿರತೆಗಾಗಿ ಮತ್ತು ಅವಶ್ಯಕ ವಸ್ತುಗಳು ಬಡವರಿಗೆ ದೊರಕುವಂತೆ ಮಾಡುವ ಎರಡು ಗುರಿಗಳ ಸಾಧನೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲಾಗುವುದು. ಸಮಾಜದ ಶ್ರೀಮಂತ ವಿಭಾಗಗಳನ್ನು ಇದರಿಂದ ಹೊರಗಿಡಲಾಗುವುದು. ಬಡತನ ರೇಖೆಯ ಕೆಳಮಟ್ಟದಲ್ಲಿರುವ ಕುಟುಂಬಗಳಿಗೆ ವಿಶೇಷ ಪಡಿತರ ಚೀಟಿಗಳನ್ನು ಹಂಚಲಾಗುವುದು. ಇದರಲ್ಲಿ ಅತ್ಯಾವಶ್ಯಕ ಸಾಮಾಗ್ರಿಗಳನ್ನು ಸಾಮಾನ್ಯ ನೀಡಿಕೆ ಬೆಲೆಗಳ ಅರ್ಧದಷ್ಟು ದರದಲ್ಲಿ ಅವರಿಗೆ ಮಾರಲಾಗುವುದು. ಇದು ಒಂದು ವರ್ಷದ ಕೆಳಗೆ ಸಂಯುಕ್ತ ರಂಗದ 'ಸಮಾನ ಕನಿಷ್ಟ ಕಾರ್ಯಕ್ರಮ' ನೀಡಿದವಚನ. ಎಡ ಮತ್ತು ಇತರ ಜನ-ಪರ ಶಕ್ತಿಗಳ ಒತ್ತಡದಿಂದ ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಕಡಿಮೆ ಬೆಲೆಗಳಲ್ಲಿ ಅಕ್ಕಿ, ಗೋಧಿ ವಿಸ್ತರಿಸಲು ಮೀನ-ಮೇಷ ಎಣಿಸುತ್ತಿದ್ದ ಕೇಂದ್ರ ಸರಕಾರ ಕೊನೆಗೂ ಒಪ್ಪಿತು. ಆದರೆ ಅದನ್ನು ಜಾರಿಗೆ ತರುವಾಗ ನಮ್ಮ ರಾಜ್ಯ ಸರಕಾರ ಇಡೀ ರೇಶನ್ ವ್ಯವಸ್ಥೆಯನ್ನೇ ಅರ್ಥಹೀನಗೊಳಿಸಲು ಹೊಂಚುವಂತೆ ಕಾಣುತ್ತದೆ. ಒಂದೆಡೆ ಬೆಲೆಯೇರಿಸಿ ಕಡುಬಡವರಿಗೆ ಅರ್ಧ ಬೆಲೆಯಲ್ಲಿ ಒದಗಿಸುವ ಮಾತನಲ್ಲಿವಂಚನೆ ಬಗೆದರೆ ಅದರ ನೆಪವೊಡ್ಡಿ ಇನ್ನೊಂದೆಡೆ ಸರಕಾರದ ಅಂಕಿ ಅಂಶಗಳ ಪ್ರಕಾರ ಬಡತನದ ರೇಖೆಯ ಮೇಲೆ ಇದ್ದರೂ ಜೀವನಾವಶ್ಯಕ ವಸ್ತುಗಳಿಗಾಗಿ ರೇಶನ್ ವ್ಯವಸ್ಥೆಯನ್ನೇ ಅವಲಂಬಿಸಿದ ಇತರ ಬಡವರಿಗೆ ಕೆಳಮಧ್ಯಮ ವರ್ಗದವರಿಗೆ. ಮಧ್ಯಮ ವರ್ಗದವರಿಗೆ ರೇಶನ್ ವ್ಯವಸ್ಥೆಯಿಂದ ದೊರೆಯುತ್ತಿರುವ ಅಲ್ಪ-ಸ್ವಲ್ಪ ಪ್ರಯೋಜನವೂ ಸಿಗದಂತೆ ಮಾಡಲಾಗುತ್ತಿದೆ.

ಜೂನ್ 1 ರಿಂದಕರ್ನಾಟಕದ ಹಲವೆಡೆ ರೇಶನ್ ಅಂಗಡಿಗಳಲ್ಲಿ ಅಕ್ಕಿ, ಗೋಧಿ ನೀಡಿಕೆಯನ್ನು ನಿಲ್ಲಿಸಲಾಗಿದೆ. ಕೆಲವೆಡೆ ಕೊಟ್ಟರೂ ಅದರ ಪ್ರಮಾಣವನನು ತೀವ್ರವಾಗಿ ಇಳಿಸಲಾಗಿದೆ. ಪಟೇಲ್ ಸರಕಾರ ಈ ಧೋರಣೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಕಡುಬಡವರಿಗೆ ವಿಶೇಷ ಪಡಿತರ ವ್ಯವಸ್ಥೆಯನ್ನು ಜಾರಿಗೆ ತರುವುದರ ಜೊತೆಗೇ ಇತರ ಸಾಮಾನ್ಯ ಕಾರ್ಡುದಾರರಿಗೆ ಹಿಂದೆ ನೀಡುತ್ತಿದ್ದ ಪ್ರಮಾಣದಲ್ಲಿ ಅಕ್ಕಿ, ಗೋಧಿ, ಹಲವಾರು ತಿಂಗಳಿಂದ ನಿಲ್ಲಿಸಿದ್ದ ತಾಳೆಎಣ್ಣೆಯನ್ನು ಹಿಂದಿನ ದರಗಳಲ್ಲೇಒದಗಿಸಬೇಕು ಎಂದು ಆಗ್ರಹಪಡಿಸಿದೆ.

ಪಡಿತರ ಪೂರೈಕೆಯಲ್ಲಿ ಕೋಟಿಗಟ್ಟಲೆ ರೂಪಾಯಿ ಅವ್ಯವಹಾರ ನಡೆದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ನೀಡಬೇಕು. ಸಂಬಂಧಪಟ್ಟ ಗುತ್ತಿಗೆದಾರರಿಗೆ ಸರಾಕರದ ಯಾವುದೇ ಗುತ್ತಿಗೆಗಳನ್ನು ನೀಡಬಾರದು ಎಂದೂ ಸಿಪಿಐ(ಎಂ) ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಇತ್ತೀಚಿನ ತಿಂಗಳುಗಳಲ್ಲಿ ರಾಜ್ಯದ ಜನತೆ ಪಟೇಲ್ ಸರಕಾರದ ವಿರುದ್ಧ ಹಲವು ಬಾರಿ ಎಚ್ಚರಿಕೆಯ ಕರೆಗಂಟೆ ಬಾರಿಸಿದ್ದಾರೆ. ಇದನ್ನು ಇತ್ತೀಚೆಗೆ ಒಪ್ಪಿಕೊಂಡರೂ ಸರಕಾರ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಬದಲು ನೀತಿಗಳನ್ನು ಪುನರ್ರೂಪಿಸುವ ಬದಲು ಅದೇ ಜನ-ವಿರೋಧಿ ದಾರಿಯಲ್ಲೇ ಸಾಗುತ್ತಿರುವಂತಿದೆ. ರಾಜ್ಯದಲ್ಲಿ ರೇಶನ್ ವ್ಯವಸ್ಥೆಯನ್ನು ಈ ರೀತಿಯಲ್ಲಿ ದುರ್ಬಲಗೊಳಿಸಿ ಬೆಲೆಯೇರಿಕೆಗಳಿಂದ ತತ್ತರಿಸುತ್ತಿರುವ ಜನಸಾಮಾನ್ಯರಿಗೆ ಸಿಗುತ್ತಿದ್ದ ಅಲ್ಪ-ಸ್ವಲ್ಪ ಪರಿಹಾರವನ್ನು ಕಡಿತ ಮಾಡುವ ನೀತಿಯನ್ನು ಕೈಬಿಟ್ಟು 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ವಚನವಿತ್ತಂತೆ ರೇಶನ್ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು, ಇಲ್ಲವಾದರೆ ರಾಜ್ಯಾದ್ಯಂತ ಜನತೆಯ ತೀವ್ರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಎಚ್ಚರಿಸಿದೆ.



ರಾಷ್ಟ್ರೀಯ
ಪ್ರಚಾರಾಂದೋಲನ
ಜುಲೈ 15-31, 1997

1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು [illegible] ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನಶ್ಚೇತನ ಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡತನ ರೇಖೆಯ ಕೆಳಗಿರುವ ಜನರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು [illegible]
4. ವಿಮಾ ವಲಯವನ್ನು [illegible] ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ [illegible] ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ [illegible] ಹೆಚ್ಚಿಸಬೇಕು. ಕೃಷಿ ಕಾರ್ಮಿಕ[illegible] ಕೃಷಿ ಕಾರ್ಮಿಕ ಮಸೂದೆಯನ್ನು ಜಾರಿಗೊಳಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲು ಮಸೂದೆಯನ್ನು ಜಾರಿಗೊಳಿಸಬೇಕು.
7. [illegible]
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು [illegible] ಮಸೂದೆಯನ್ನು ಜಾರಿಗೊಳಿಸಬೇಕು.

ಭ್ರಷ್ಟಾಚಾರ-ವಿರೋಧಿ ಹೋರಾಟದಲ್ಲಿ ಈ ಸಡಿಲತೆ ಸಲ್ಲದು

- ಪ್ರಕಾಶ್ ಕಾರಟ್

ಜೂನ್ 1996 ರಲ್ಲಿ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ಭಾರೀ ಪ್ರಮಾಣದ ಭ್ರಷ್ಟಾಚಾರದ ಪ್ರಕರಣಗಳ ವಿಚಾರಣೆ ನಡೆಯಲು ಅನುಕೂಲವಾದ ವಾತಾವರಣವೊಂದು ನಿರ್ಮಾಣವಾಯಿತು. ನಿಜ, ಸುಪ್ರಿಂ ಕೋರ್ಟಿನ ಮಧ್ಯಪ್ರವೇಶದಿಂದಾಗಿ ಇದಕ್ಕೆಲ್ಲಾ ಚಾಲನೆ ದೊರೆಯಿತು. ಆದರೂ ಭ್ರಷ್ಟಾಚಾರ ಕೇಸುಗಳಲ್ಲಿ ಯಾರನ್ನೂ ಬಿಡುವುದಿಲ್ಲ ಎಂಬ ವಿಶ್ವಾಸ ಜನಗಳಲ್ಲಿ ಚಿಗುರುವಂತಾಯಿತು. ಆದರೆ ಗುಜ್ರಾಲ್ ಸರಕಾರದಿಂದ ತದ್ವಿರುದ್ಧ ಸಂಕೇತಗಳು ಬರುತ್ತಿವೆ ಎಣಂದುಈ ಲೇಖನದಲ್ಲಿ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ವಿಶ್ಲೇಷಿಸಿದ್ದಾರೆ. ಸಿಪಿಐ(ಎಂ)ನ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಈ ಲೇಖನ ಪ್ರಕಟವಾದ ಮೇಲೆ ಹವಾಲಾ ಕೇಸಿನಲ್ಲಿ ಸುಪ್ರಿಂ ಕೋರ್ಟಿಗೆ ಮೇಲ್ಮನವಿ ನೀಡಲು ಸಿಬಿಐಗೆ ಕೊನೆಗೂ ಸರಕಾರದಿಂದ ಅನುಮತಿ ದೊರೆತಿದೆ. ಕೇಂದ್ರ ಮಂತ್ರಿಮಂಡಲದ ಮೇವು ಹಗರಣದಲ್ಲಿನ ಆಪಾದಿತರನ್ನು ರಾಜೀನಾಮೆ ಪಡೆಯಲಾಗಿದೆ. ಆದರೂ ಪ್ರಧಾನ ಮಂತ್ರಿಗಳು ಇತ್ತೀಚೆಗೆ ಆಡಿರುವ ಕೆಲವು ಮಾತುಗಳು ಸಂಯುಕ್ತ ರಂಗ ಸರಕಾರದ ವಿಶ್ವಾಸಾರ್ಹತೆಗೆ ಧಕ್ಕೆ ತರುವಂತಹವು.



ಇತ್ತೀಚಿನ ದಿನಗಳಲ್ಲಿ ಉನ್ನತ ಸ್ಥಾನಗಳಲ್ಲಿದ್ದವರ ಭ್ರಷ್ಟಾಚಾರದ ಕೇಸುಗಳ ವಿಚಾರಣೆಯಲ್ಲಿ ಹಿನ್ನಡೆ ಕಾಣುತ್ತಿದೆ. ವಿಚಾರಣೆಗಳು ನಿಧಾನಗೊಳ್ಳುತ್ತಿವೆ ಎಂಬ ಭಾವನೆ ಉಂಟಾಗಿದೆ. ಈ ನಿಧಾನ ಗತಿ ಮಧ್ಯ ಏಪ್ರಿಲ್‌ನಲ್ಲಿ ಗುಜ್ರಾಲ್ ಸರಕಾರ ಅಧಿಕಾರಕ್ಕೆ ಬರುವುದರೊಂದಿಗೆ ಆರಂಭವಾಗಿದೆಯೆಂಬುದು ಆತಂಕದ ವಿಷಯ.

ಹವಾಲಾ ಕೇಸಿನ ಮತ್ತು ಬೊಫೋರ್ಸ್ ವಿಚಾರಣೆಗಳ ಗತಿ ಹೊಸ ಪ್ರವೃತ್ತಿಯೊಂದನ್ನು ಸೂಚಿಸುವಂತದ್ದು. ಮಧ್ಯ-ಏಪ್ರಿಲ್‌ನಲ್ಲಿ ಹವಾಲಾ ಕೇಸಿನಲ್ಲಿ ದಿಲ್ಲಿ ಹೈಕೋರ್ಟ್ ಎಲ್.ಕೆ.ಅಡ್ವಾಣಿ ಮತ್ತು ವಿ.ಸಿ.ಶುಕ್ಲಾರವರ ವಿರುದ್ಧ ವಿಚಾರಣೆಗಳನ್ನು ರದ್ದು ಮಾಡಿತು. ಇದರಿಂದಾಗಿ ವಿಚಾರಣಾ ಕೋರ್ಟು ಸಾಕ್ಷ್ಯಗಳನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರಲಾಗದಂತಹ ಪರಿಸ್ಥಿತಿ ಉಂಟಾಯಿತು. ಏಕೆಂದರೆ ಜೈನ್ ದಿನಚರಿಗಳನ್ನು ಸಾಕ್ಷಿಗಳನ್ನಾಗಿ ಒಪ್ಪಲು ಸಾಧ್ಯವಿಲ್ಲವೆಂದು ದಿಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಶಮೀಮ್ ತೀರ್ಪಿತ್ತರು.

ಜೈನ್ ದಿನಚರಿಗಳು ಹಾಗೂ ಕಾಗದಗಳು ಒಳ್ಳೆಯ ದಸ್ತಾವೇಜುಗಳಿಂದ ಕೂಡಿದ ಲೆಕ್ಕಪುಸ್ತಕಗಳು ಎಂಬುದನ್ನು ಗಮನಿಸಬಹುದು. ಬಂದ ಹಣ ಹಾಗೂ ಸಂದಾಯವಾದ ಹಣಗಳನ್ನು ಪ್ರತ್ಯೇಕ ಕಾಲಂಗಳಲ್ಲಿ ಅದನ್ನು ಬರೆದಿಡಲಾಗಿತ್ತು. ಇವನ್ನು ಮತ್ತೆ ಮೂರು ವಿಭಾಗಗಳಾಗಿ ಮಾಡಲಾಗಿತ್ತು-ರಾಜಕಾರಣಿಗಳು, ಅಧಿಕಾರಶಾಹಿಗಳು ಮತ್ತು ಇತರರು ಎಂದು. ಪ್ರತಿ ತಿಂಗಳು ಈ ಲೆಕ್ಕವನ್ನು ತಾಳೆ ನೋಡಿ ಮುಂದಿನ ತಿಂಗಳಿಗೆ ಶಿಲ್ಕನ್ನು ಒಯ್ಯಲಾಗಿರುವ ದಸ್ತಾವೇಜು ಇದು. ಜೈನ್ ಸೋದರರ ನೌಕರ ಜೆ.ಕೆ.ಜೈನ್ ಇಟ್ಟ ಲೆಕ್ಕವದು. ವಿಚಾರಣಾ ಕೋರ್ಟಿನಲ್ಲಿ ಇದು ಇರುವಾಗ ಹೈಕೋರ್ಟ್ ಈ ಸಾಕ್ಷ್ಯವನ್ನು ಒಪ್ಪಬೇಕೋ ಬೇಡವೋ ಎಂಬ ಬಗ್ಗೆ ಪರಿಶೀಲಿಸುವ ಅಗತ್ಯವಿರಲಿಲ್ಲ. ಈ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟ್‌ಗೆ ಹೋಗಲು ಸಿಬಿಐಗೆ ಸಾಕಷ್ಟು ಆಧಾರಗಳಿದ್ದವು.

ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೊಂದು ಅಪಚಾರ

ಸಿಬಿಐ ಸುಪ್ರಿಂ ಕೋರ್ಟ್‌ಗೆ ಅಪೀಲು ಹೋಗಲು ನಿರ್ಧರಿಸಿ ಒಂದು ಸ್ಪೆಷಲ್ ಲೀವ್ ಪಿಟಿಶನ್ ಕೂಡಾ ತಯಾರಿಸಿತ್ತು. ಆದರೆ ಎರಡು ತಿಂಗಳಾದರೂ ಇದಕ್ಕೆ ಸರಕಾರದ ಮಂಜೂರಾತಿ ದೊರಕಿರಲಿಲ್ಲ. ದೇಶದ ಅಟೋರ್ನಿ ಜನರಲ್ ಕೂಡಾ ಇದನ್ನು ಮಂಜೂರು ಮಾಡಿದರೂ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ಈ ಕಡತ ನಿಂತುಬಿಟ್ಟಿತ್ತು. (ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸಿಬಿಐ ಸುಪ್ರಿಂ ಕೋರ್ಟ್‌ಗೆ ಕೊನೆಗೂ ಮೇಲ್ಮನವಿ ಸಲ್ಲಿಸಿರುವ ಸುದ್ದಿ ಬಂದಿದೆ) ಈ ಅಸಮರ್ಥನೀಯ ವಿಳಂಬದ ಪರಿಣಾಮವೆಂದರೆ ಹವಾಲಾ ಕೇಸಿನಲ್ಲಿ ಆರೋಪಕ್ಕೊಳಗಾದ ಹಲವರನ್ನು ದಿಲ್ಲಿ ಹೈಕೋರ್ಟ್ ತೀರ್ಪಿನ ಆಧಾರದ ಮೇಲೆ ವಿಶೇಷ ನ್ಯಾಯಾಲಯ ದೋಷಮುಕ್ತಗೊಳಿಸಿದೆ.

ಇಷ್ಟೇ ಅಲ್ಲ, ಈ ವಿಳಂಬಕ್ಕೊಂದು ಹಾಸ್ಯಾಸ್ಪದ ವಿವರಣೆಯನ್ನು ಅಧಿಕೃತ ಮೂಲಗಳು ನೀಡಿವೆ- ಅದೇನೆಂದರೆ ಇವರಲ್ಲಿ ಆರೋಪಕ್ಕೊಳಗಾದ ಎಲ್ಲಾ ರಾಜಕೀಯ ಮುಖಂಡರು ದೋಷಮುಕ್ತರೆನಿಸಿಕೊಳ್ಳುವುದನ್ನು ಸರಕಾರ ಕಾಯುತ್ತಿದೆಯಂತೆ. ಆಮೇಲೆ ಅಪೀಲು ಹೋಗಲು ಅನುಮತಿ ನೀಡುತ್ತದಂತೆ. ಇದು ಸಿಬಿಐನ ಕೆಲಸವನ್ನು ಇನ್ನಷ್ಟು ಹೆಚ್ಚಿಸುತ್ತದಷ್ಟೆ. ಏಕೆಂದರೆ ಅದು ಆಗ ಪ್ರತಿಯೊಬ್ಬ ಆರೋಪಿಗೆ ಸಂಬಂಧಪಟ್ಟಂತೆ ಕೇಸುಗಳನ್ನು ಹಾಕಬೇಕು. ಎಲ್ಲಾ ಹವಾಲಾ ಕೇಸಿನ ಆರೋಪಿಗಳು ಆರೋಪ ಮುಕ್ತರಾದ ಮೇಲೆ, ಅದೊಂದು ನ್ಯಾಯಿಕ ವಾಸ್ತವತೆಯಾಗುತ್ತದೆ, ಅಪೀಲು ಆಗ ಅನಗತ್ಯವೆನಿಸುತ್ತದೆ ಎಂಬ ಉದ್ದೇಶ ಇವರ ಹಿಂದಿರುವಂತೆ ಕಾಣುತ್ತದೆ.

ಸಿಬಿಐ ಸುಪ್ರಿಂಕೋರ್ಟಿಗೆ ಅಪೀಲು ಕೊಡುವುದನ್ನು ವಿಳಂಬ ಮಾಡಲು ಅಥವಾ ತಡೆಯಲು ಸರಕಾರಕ್ಕೆ ಯಾವುದೇ ಆಧಾರಗಳಿಲ್ಲ. ಇದು ಕಾರ್ಯಾಂಗದ ಅಧಿಕಾರದ ದುರುಪಯೋಗವಷ್ಟೆ. ಏಕೆಂದರೆ ಸಿಬಿಐಗೆ ಕಾನೂನು ಸಲಹೆಯನ್ನಾಧರಿಸಿ ಅಪೀಲು ಹೋಗಬೇಕೋ ಬೇಡವೋ ಎಂದು ನಿರ್ಧರಿಸುವ ಅಧಿಕಾರವಿದೆ. ಈ ಬಗ್ಗೆ ಎರಡು ತಿಂಗಳು ಸುಮ್ಮನಿರುವ ಮೂಲಕ ಸರಕಾರ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ದೊಡ್ಡ ಅಪಚಾರವೆಸಗಿದೆ.

ಕಾಂಗ್ರೆಸ್ ಬೊಫೋರ್ಸ್ ಭಯಕ್ಕೆ ಶರಣು

ಇನ್ನೊಂದು ಪ್ರಮುಖ ವಿಚಾರಣೆ ಬೋಫೋರ್ಸ್ ಕೇಸಿನದ್ದು. ಸ್ವಿಸ್ ಅಧಿಕಾರಿಗಳಿಂದ ಮೊದಲು ಬ್ಯಾಂಕ್ ಕಾಗದ ಪತ್ರಗಳ ಕಡತ ಪಡೆದ ಮೇಲೆ ಸಿಬಿಐಗೆ ತನ್ನ ವಿಚಾರಣೆಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿ ಮೇ12ರಂದು ಸಂಪುಟ ಕಾರ್ಯಾಲಯಕ್ಕೆ ಒಂದು ವರದಿಯನ್ನು ಮಂಡಿಸಿತು. ಬ್ಯಾಂಕ್ ಖಾತೆಗಳಲ್ಲಿ ನಮೂದಿಸಿದ ಫಲಾನುಭವಿಗಳಲ್ಲದೆ ಆಗಿನ ರಕ್ಷಣಾ ಕಾರ್ಯದರ್ಶಿ ಎಸ್.ಕೆ.ಭಟ್ನಾಗರ್, ರಾಜೀವ್ ಗಾಂಧಿಯವರ ಕಾಲದಲ್ಲಿ ಪ್ರಧಾನಮಂತ್ರಿಗಳ ಕಚೇರಿಯಲ್ಲಿ ವಿಶೇಷ ಕಾರ್ಯದರ್ಶಿಯಾಗಿದ್ದ ಗೋಪಿ ಅರೋರಾ ಅವರ ವಿರುದ್ಧ ವಿಚಾರಣೆ ಆರಂಭಿಸಬೇಕೆಂದು ಶಿಫಾರಸು ಮಾಡಿತು. ಸೇನೆ ಖರೀದಿಸಬೇಕೆಂದಿದ್ದ ತೋಪಿನ ಬದಲು ಬೋಫೋರ್ಸ್‌ಗೆ ಆ ಕಾಂಟ್ರಾಕ್ಟ್ ಸಿಗುವಂತೆ ಮಾಡುವಲ್ಲಿ ಮತ್ತು ಇದರಲ್ಲಿ ಲಂಚ-ರುಷುವತ್ತು ಇತ್ತು ಎಂಬುದು ಬಯಲಾದಾಗ ಅದನ್ನು ಮುಚ್ಚಿ ಹಾಕುವಲ್ಲಿ ರಾಜೀವ್ ಗಾಂಧಿ ಮತ್ತು ಅವರ ಹಿರಿಯ ಅಧಿಕಾರಿಗಳ ಪಾತ್ರವಿತ್ತು ಎಂಬುದು ವಿಚಾರಣೆಗಳಿಂದ ಸಾಬೀತಾಗಿದೆ. ಸರಕಾರಕ್ಕೆ ಈ ಶಿಫಾರಸಿನ ಮಂಡನೆ ಹಾಗೂ ಆ ಬಗ್ಗೆ ಪ್ರಚಾರ ಮಾಧ್ಯಮಗಳಲ್ಲಿ ಬಂದ ವರದಿಗಳಿಂದ ಕ್ರುದ್ಧರಾದ ಕಾಂಗ್ರೆಸ್ ಮುಖಂಡರು ಸಂಸತ್ತಿನಲ್ಲಿ ಸಿಬಿಐ ನಿರ್ದೇಶಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹಾರಾಡಿದರು. ವಿಚಿತ್ರವೆಂದರೆ ಇದರಲ್ಲಿ ಜನತಾದಳದ ಒಬ್ಬ ಮುಖಂಡ ಶರದ್ ಯಾದವ್ ಕೂಡಾ ಕಾಂಗ್ರೆಸ್ ಜತೆಗೂಡಿದರು. ಸಿಬಿಐ ಮೇವು ಹಗರಣದಲ್ಲಿ ಲಾಲೂ ಪ್ರಸಾದ್ ಯಾದವ್‌ರ ವಿರುದ್ಧ ಕ್ರಮ ಕೈಗೊಂಡದ್ದರಿಂದಾಗಿ ಅವರು ಹೀಗೆ ಮಾಡಿರಬಹುದೆಂಬುದು ಸ್ವಯಂವೇದ್ಯ.

ಇದು "ವ್ಯಕ್ತಿ ಬೇಟೆಯಲ್ಲ" ಗುಜ್ರಾಲ್‌ರವರೇ

ಈ ಬೆಳವಣಿಗೆಗಳ ಪರಿಣಾಮವಾಗಿಯೇ ಪ್ರಧಾನ ಮಂತ್ರಿ ಗುಜ್ರಾಲ್ ಮೇ 24ರಂದು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಸಿಬಿಐಯನ್ನು ಬಹಿರಂಗವಾಗಿ ತರಾಟೆಗೆ ತಗೊಂಡದ್ದನ್ನು ನಾವು ಕಂಡಿದ್ದೇವೆ. ರಾಜೀವ್‌ಗಾಂಧಿಯವರ ಹೆಸರು ಬಂದದ್ದರಿಂದ ಕಾಂಗ್ರೆಸ್ಸಿನ ಪ್ರತಿಭಟನೆಗಳಿಗೆ ಪೂರ್ಣವಾಗಿ ಸ್ಪಂದಿಸಿದ ಗುಜ್ರಾಲ್ ಇದರಿಂದ ತನ್ನನ್ನು ದೂರವಿರಿಸಿಕೊಳ್ಳಲು ಪ್ರಯತ್ನಿಸಿದರು. ಸಿಬಿಐ ಕ್ರಮವನ್ನು ಅವರು "ಪ್ರಚಾರದ ಗುರಿ ಹೊಂದಿದ ವಿಚಾರಣೆಗಳು" ಎನ್ನುತ್ತಾ "ಇವನ್ನು ನಾವು ತಡೆಯಲೇಬೇಕು" ಎಂದರು. ಇದು ಅಚ್ಚರಿ ಪಡುವ ವಿಷಯ. ಏಕೆಂದರೆ ಅವರು ಜನತಾದಳದ ಮುಖಂಡರು. ಹಾಗೂ ಈ ಪಕ್ಷ, ಇತರ ವಿರೋಧ ಪಕ್ಷಗಳೊಡಗೂಡಿ ಬೋಫೋರ್ಸ್ ವ್ಯವಹಾರದಲ್ಲಿನ ಸತ್ಯವನ್ನು ಬೆಳಕಿಗೆ ತರಬೇಕೆಂದು ನಿರಂತರವಾಗಿ ಹೋರಾಡಿದ ಪಕ್ಷ.

ಪ್ರಧಾನಮಂತ್ರಿಗಳು ಇಷ್ಟಕ್ಕೇ ನಿಲ್ಲಲಿಲ್ಲ. ಮತ್ತೆ ಮತ್ತೆ ಅವರು ರಾಜಕೀಯ ವ್ಯಕ್ತಿಗಳ ಮೇಲೆ "ಗೂಬೆ ಕೂರಿಸುವುದು", "ಪ್ರತೀಕಾರಾತ್ಮಕ ಬೇಟೆ", "ಮಾಧ್ಯಮಗಳ ವಿಚಾರಣೆ" ಎಂದೆಲ್ಲಾ ಹೇಳುತ್ತಿದ್ದಾರೆ. ಈ ಮೂಲಕ ಅವರು ಕಾಂಗ್ರೆಸ್ ಮುಖಂಡರನ್ನು ಸಾಂತ್ವನಗೊಳಿಸಲು ಮಾಡಬಾರದ್ದನ್ನು ಮಾಡ ಹೊರಟಿದ್ದಾರೆ. ಬಹುಪಾಲು ಕಾಂಗ್ರೆಸ್ ಮುಖಂಡರು ಗಂಭೀರ ಭ್ರಷ್ಟಾಚಾರ ಹಾಗೂ ಸರಕಾರಿ ಅಧಿಕಾರದ ದುರುಪಯೋಗದ ಆಪಾದನೆಗಳಿಗೆ ಗುರಿಯಾಗಿರುವಾಗ ಅವರ ಭಯ ಸಹಜವೇ. ಇದರಿಂದಾಗಿಯೇ ಅದು ಭ್ರಷ್ಟಾಚಾರ-ವಿರೋಧಿ ಸಮರವನ್ನು ಎದುರಿಸಿ ಪ್ರತಿಧಾಳಿ ಆರಂಭಿಸಿದ್ದು ಮಾರ್ಚ್ 30ರಂದು ಕೇಸರಿಯವರು ದೇವೇಗೌಡರ ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುಕೊಂಡಾಗ ಎದ್ದು ಕಂಡಿತು.

ಹವಾಲಾ ಕೇಸ್ "ಗೂಬೆ ಕೂರಿಸುವ" ಪ್ರತೀಕಾರ ತೀರಿಸಲು ವ್ಯಕ್ತಿ ಬೇಟೆ ನಡೆಸುವ ಒಂದು ಪ್ರಯತ್ನ ಎಂದು ತನಗನಿಸುವುದಾಗಿ 'ಹಿಂದೂ' ಪತ್ರಿಕೆಗೆ ಜೂನ್ 1ರಂದು ನೀಡಿದ ಸಂದರ್ಶನದಲ್ಲಿ ಗುಜ್ರಾಲ್ ಹೇಳಿದ್ದಾರೆ. ಈ ಕೇಸು ನಿಜವಾಗಿ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಬಯಲಿಗೆ ಬಂದ ಅತಿ ದೊಡ್ಡ ಭ್ರಷ್ಟಾಚಾರ ಪ್ರಕರಣ. ವಿಭಿನ್ನ ಬಂಡವಾಳಶಾಹಿ ಪಕ್ಷಗಳ 50ಕ್ಕೂ ಹೆಚ್ಚು ಉನ್ನತ ಮುಖಂಡರಿಗೆ 65 ಕೋಟಿ ರೂ.ಗಳಷ್ಟು ಹಣ ತಿನ್ನಿಸಿದ ಕೇಸಿದು. ನರಸಿಂಹರಾಯರು ಸುಮಾರು ಎರಡು ವರ್ಷಗಳವರೆಗೆ ಬಾಯಿ ಕಟ್ಟಿಟ್ಟ ನಂತರ ಸಿಬಿಐ ಸುಪ್ರೀಂಕೋರ್ಟ್‌ನ ಮಧ್ಯಪ್ರವೇಶದಿಂದಾಗಿ ವಿಚಾರಣೆ ಆರಂಭಿಸಿತು. ಇದನ್ನು "ಮೆಕಾರ್ಥಿವಾದ"(ಅಮೇರಿಕಾದಲ್ಲಿ ವಿರೋಧಿಗಳನ್ನೆಲ್ಲಾ ಬೇಟೆಯಾಡಿದ ಮೆಕಾರ್ಥಿ ಎಂಬಾತನ ಧೋರಣೆ) ಎನ್ನುವುದು ವಾಸ್ತವ ಸನ್ನಿವೇಶವನ್ನು ತಪ್ಪಾಗಿ ಬಿಂಬಿಸುವ ಪ್ರಯತ್ನವಷ್ಟೆ.

ಕೇವಲ ಅಪವಾದವಲ್ಲ

ಸಂಯುಕ್ತ ರಂಗ ಸರಕಾರದ ಎರಡನೇ ಆವೃತ್ತಿಯ ಈ ನಿಲುವು ಕೇವಲ ಒಂದು ಅಪವಾದವಲ್ಲ ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇತರ ಹಲವು ಭ್ರಷ್ಟಾಚಾರದ ಕೇಸುಗಳಲ್ಲಿಯ ಅದರ ನಿಲುವು ಇಂತಹ ಸೂಚನೆಗಳನ್ನು ನೀಡುತ್ತಿವೆ. "ಟೈಮ್ಸ್ ಆಫ್ ಇಂಡಿಯಾ" ಮತ್ತಿತರ ದೊಡ್ಡ ಪತ್ರಿಕೆಗಳ ಮಾಲಕ ಬೆನೆಟ್ ಕೋಲ್‌ಮನ್ ಅಂಡ್ ಕಂಪನಿಯ ಅಶೋಕ್ ಜೈನ್ ವ್ಯವಹಾರ ಸಾರ್ವಜನಿಕರ ಗಮನಕ್ಕೆ ತರುವ ಅಗತ್ಯವಿರುವ ಒಂದು ಅವ್ಯವಹಾರ. ಬ್ಯಾಂಕ್ ಆಫ್ ರಾಜಾಸ್ತಾನದ ಶೇರುಗಳ ಮಾರಾಟಕ್ಕೆ ಸಂಬಂಧಪಟ್ಟಂತೆ ನಡೆದ ಭಾರೀ ಹಣದ ಅವ್ಯವಹಾರ ನಡೆದ ಇನ್ನೊಂದು ಹವಾಲಾ ಅವ್ಯವಹಾರ ಇದು ಎಂಬ ಶಂಕೆಯಿದೆ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ಜ್ಯಾರಿ ನಿರ್ದೇಶನಾಲಯ (ಎನ್‌ಫೋರ್ಸ್‌ಮೆಂಟ್ ಡೈರೆಕ್ಟೋರೇಟ್)ಕ್ಕೆ ಮೇ12ರಂದು ಒಂದು ಪತ್ರ ಬರೆದು ಈ ವಿಐಪಿ ಕೇಸನ್ನು ಸ್ವತಃ ಹಣಕಾಸು ಮಂತ್ರಿ ಪಿ.ಚಿದಂಬರಂ ಮೇಲುಸ್ತುವಾರಿ ನಡೆಸುತ್ತಾರೆ ಎಂದು ತಿಳಿಸಲಾಗಿದೆಯಂತೆ. "ಫ್ರಂಟ್‌ಲೈನ್"ನಲ್ಲಿ ಪ್ರಕಟವಾದ ಒಂದು ವರದಿಯಿಂದ ಇದು ತಿಳಿದು ಬಂದಿದೆ.ಈ ಅವ್ಯವಹಾರ ಬಹಳ ವ್ಯಾಪಕವಾದದ್ದು. ಅವೆಲ್ಲಾ ಇನ್ನು ಬಯಲಿಗೆ ಬರಬೇಕಷ್ಟೇ. ಅಶೋಕ್ ಜೈನ್‌ನನ್ನು ರಕ್ಷಿಸಲು ಉನ್ನತ ಮಂತ್ರಿಗಳೇ ಹೇಗೆ ನೇರವಾಗಿ ಮಧ್ಯಪ್ರವೇಶಿಸುತ್ತಿದ್ದಾರೆ ಎಂಬುದನ್ನು ಸೂಚಿಸುವ ಸಂಗತಿಯಿದು.

ಅದೇ ಚಿದಂಬರಂ ಅಡಿಯಿರುವ ಅದೇ ಹಣಕಾಸು ಇಲಾಖೆ ಒಂದು ನಿರ್ದೇಶನ ಹೊರಡಿಸಿ ಯಾವುದೇ ತಪ್ಪು ಕೆಲಸದಲ್ಲಿ ಸಿಲುಕಿಕೊಂಡ ಉನ್ನತ ಬ್ಯಾಂಕ್ ಅಧಿಕಾರಿಯ ವಿರುದ್ಧ ಸರಕಾರದ ಮಂಜೂರಾತಿ ಪಡೆಯದೆ ಸಿಬಿಐ ಮುಂದುವರಿಯದಂತೆ ಮಾಡಿದೆ. ನೂರಾರು ಕೋಟಿ ರೂ.ಗಳನ್ನು ತಿಂದು ಹಾಕಿದ ಇಂಡಿಯನ್ ಬ್ಯಾಂಕ್ ವಂಚನೆ ಕೇಸಿನಲ್ಲಿ ಸಿಬಿಐ ಉನ್ನತ ಬ್ಯಾಂಕ್ ಅಧಿಕಾರಿಯ ಮೇಲೆ ಕ್ರಮ ಕೈಗೊಂಡ ಫಲವಾಗಿ ಬಹುಶಃ ಈ ನಿರ್ದೇಶನ ಹೊರಡಿಸಿರಬೇಕು.

ಕಾಂಗ್ರೆಸ್‌ನ ಭಯಗಳಿಗೆ ಸ್ಪಂದಿಸಬೇಕೇಕೆ?

ಇತ್ತೀಚಿನ ವರ್ಷಗಳಲ್ಲಿ ಹಲವು ಭ್ರಷ್ಟಾಚಾರದ ಪ್ರಕರಣಗಳು ಬೆಳಕಿಗೆ ಬಂದರೂ ಇಷ್ಟರವರೆಗೂ ಯಾವುದೇ ಒಬ್ಬ ಉನ್ನತ ರಾಜಕೀಯ ಮುಖಂಡ, ಅಧಿಕಾರಶಾಹಿ ಅಥವಾ ವ್ಯಾಪಾರಸ್ಥರೂ ಭ್ರಷ್ಟಾಚಾರ ವಿರೋಧ ಶಾಸನದಲ್ಲಿ ನಿರ್ವಹಿಸಿದ ಭ್ರಷ್ಟ ವಿಚಾರಣೆಗಳಿಗೊಳಪಟ್ಟು ಶಿಕ್ಷೆಗೊಳಪಟ್ಟಿಲ್ಲ. ಇಂತಹ ನಾಚಿಕೆಗೇಡು ದಾಖಲೆಯಿರುವಾಗ "ಆರೋಪ ಸಾಬೀತಾಗುವ ಮೊದಲೇ ಆರೋಪಿಯನ್ನು ನೇಣಿಗೇರಿಸುವ" ಮಾತಾಗಲೀ, "ಮೆಕಾರ್ಥಿವಾದ"ದ ಮಾತಾಗಲೀ ಅಥವಾ "ವ್ಯಕ್ತಿ ಬೇಟೆ"ಯ ಮಾತಾಗಲೀ ನ್ಯಾಯ ಒದಗಿಸಬೇಕೆಂಬ ಬಗ್ಗೆ ಆತಂಕವನ್ನೇನೂ ತೋರಿಸುವುದಿಲ್ಲ. ಅದರ ಬದಲು ಭ್ರಷ್ಟಾಚಾರದ ವಿಷಯದಲ್ಲಂತೂ ಶಾಪಗ್ರಸ್ತವಾದ ಕಾಂಗ್ರೆಸ್ಸಿನ ಭಯಗಳಿಗೆ ಸ್ಪಂದಿಸುವ ಅನಗತ್ಯ ಆತಂಕವನ್ನಷ್ಟೇ ತೋರುತ್ತದೆ.

ತನ್ನ ಹೆಚ್ಚಿನ ಮುಖಂಡರು ಆರೋಪಕ್ಕೊಳಗಾಗಿರುವಾಗ ಭ್ರಷ್ಟಾಚಾರದ ವಿಚಾರಣೆಗಳನ್ನೆಲ್ಲಾ ಅಳಿಸಿಹಾಕಬೇಕೆಂದು ಕಾತುರವಾಗಿರುವ ಕಾಂಗ್ರೆಸ್ಸಿನಿಂದ ಪ್ರಧಾನ ಮಂತ್ರಿಗಳ ಮೇಲೆ ನಿರಂತರ ಒತ್ತಡ ಬರುತ್ತಿದೆಯೆಂಬುದು ಸತ್ಯ ಸಂಗತಿ. ಲಾಲೂ ವ್ಯವಹಾರದಿಂದ ಪ್ರಧಾನ ಮಂತ್ರಿಗಳ ಇರುಸು-ಮುರುಸು ಇನ್ನಷ್ಟು ವಿಕಟಗೊಂಡಿದೆ.

ಬಿಹಾರ ಮೇವು ಹಗರಣದಲ್ಲಿ ಲಾಲೂ ಪ್ರಸಾದ್ ಯಾದವರ ಮೇಲೆ ಕ್ರಮ ಕೈಗೊಳ್ಳಲು ಅನುಮತಿ ನೀಡುವಲ್ಲಿ ರಾಜ್ಯಪಾಲರು ತೆಗೆದುಕೊಂಡ ದೀರ್ಘ ಸಮಯ ನಿಜಕ್ಕೂ ರಹಸ್ಯಕಾರಿ(ಈ ಲೇಖನ ಮುದ್ರಣಕ್ಕೆ ಹೋಗುವ ವೇಳೆಗೆ ರಾಜ್ಯಪಾಲರು ಕೊನೆಗೂ ಅನುಮತಿ ನೀಡಿದ ಸುದ್ದಿ ಬಂದಿದೆ-ಸಂಪಾದಕರು). ಕೇಂದ್ರ ಮಂತ್ರಿ ಚಂದ್ರದೇವ ಪ್ರಸಾದ್ ವರ್ಮಾರ ವಿಷಯದಲ್ಲಿ ಸಿಬಿಐ ತನ್ನ ಹೇಳಿಕೆಯನ್ನು ಕೇಂದ್ರ ಸರಕಾರಕ್ಕೆ ಕಳಿಸಿತ್ತು. ಅದಕ್ಕೂ ಈಗ ನಿರೀಕ್ಷಿತವೆನಿಸುವ ಪ್ರತಿಕ್ರಿಯೆ-ಅಂದರೆ ಯಾವುದೇ ಕ್ರಮವಿಲ್ಲ. ವರ್ಮಾರವರು ಬಿಹಾರದಲ್ಲಿ ಮಂತ್ರಿಯಾಗಿದ್ದಾಗ ಸಂಭವಿಸಿದ್ದರಿಂದ ಬಿಹಾರ ಸರಕಾರವೇ ಅನುಮತಿ ಕೊಡಬೇಕೆಂಬ ತಾಂತ್ರಿಕ ನೆವದ ಹಿಂದೆ ಅಡಗಿಕೊಳ್ಳಲು ಪ್ರಯತ್ನಿಸಲಾಯಿತು. ಈ ಕೇಸಿನ ಇತ್ಯರ್ಥವಾಗುವವರೆಗೆ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ತಕ್ಷಣ ಆ ಮಂತ್ರಿಗೆ ಹೇಳುವುದು ಸಾರ್ವಜನಿಕ ವರ್ತನೆಯನ್ನು ಎತ್ತಿಹಿಡಿಯಲು ಅತ್ಯಗತ್ಯ ಎಂಬ ಸಂಗತಿಯನ್ನೇ ಮರೆತು ಬಿಡಲಾಯಿತು.

ಅನುಕೂಲಕರ ವಾತಾವರಣ ಬದಲಾಗುತ್ತಿದೆ

ಜೂನ್ 1996ರಲ್ಲಿ ಸಂಯುಕ್ತ ರಂಗ ಮೂಡಿ ಬರುವುದರೊಂದಿಗೆ ಸಾರ್ವಜನಿಕ ಹುದ್ದೆಗಳಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆಸಿದ ಯಾರನ್ನೇ ಆದರೂ ಪತ್ತೆ ಹಚ್ಚಿ ವಿಚಾರಣೆ ನಡೆಸುವ ಗಂಭೀರ ಪ್ರಯತ್ನ ನಡೆಸಲು ಅನುಕೂಲವಾದ ಒಂದು ವಾತಾವರಣ ನಿರ್ಮಾಣವಾಯಿತು. ಸಂಯುಕ್ತ ರಂಗ ಸರಕಾರದ ಮೊದಲ ಹತ್ತು ತಿಂಗಳಲ್ಲಿ ಹಿಂದಿನ ಕಾಂಗ್ರೆಸ್ ಆಳ್ವಿಕೆಯಲ್ಲಿ ನಿಂತು ಹೋಗಿದ್ದ ಅಡಚಣೆಗಳಿಗೊಳಪಟ್ಟಿದ್ದ ಸಾಕಷ್ಟು ಸಂಖ್ಯೆಯ ಕೇಸುಗಳಲ್ಲಿ ಗಮನಾರ್ಹ ಪ್ರಗತಿ ಕಂಡು ಬಂತು. ಇವುಗಳಲ್ಲಿ ಮುಖ್ಯವಾದದ್ದು ಸೈಂಟ್ ಕಿಟ್ಸ್ ಕೇಸ್, ಜೆಎಂಎಂ ಕೇಸ್, ಹವಾಲಾ ಕೇಸ್ ಮತ್ತು ಬೋಫೋರ್ಸ್ ವಿಚಾರಣೆ. ನಿಜ, ಇವುಗಳೆಲ್ಲದರ ವಿಚಾರಣೆಗೆ ಪ್ರಧಾನ ಚಾಲನೆ ಬಂದಿದ್ದು ನ್ಯಾಯಾಂಗಗಳ ಮಧ್ಯಪ್ರವೇಶದಿಂದ. ಇದರಿಂದಾಗಿ ಕೊನೆಗೂ ಸಿಬಿಐ ತನ್ನ ನಿಷ್ಕ್ರಿಯತೆಯನ್ನು ಕೊಡವಿ ಎದ್ದು ನಿಂತು ಮುಂದೆ ಹೋಗುವಂತಾಯಿತು. ಸಿಬಿಐ ಇಂತಹ ಕೇಸುಗಳಲ್ಲಿ ಮಾಡಿಕೊಂಡ ಸಿದ್ಧತೆಗಳ ಬಗ್ಗೆ ಟೀಕೆ ಸಮರ್ಥನೀಯವೇ. ತಾನು ಹಾಕಿದ ಆರೋಪಗಳನ್ನು ಸಾಬೀತು ಮಾಡುವ, ಅದಕ್ಕೆ ಸರಿಯೆಂದು ಸೂಚಿಸುವ ಸಾಕ್ಷ್ಯಗಳನ್ನು ಮುರಿಯುವಲ್ಲಿ ಅದು ವಿಫಲವೂ ಆಗಿದೆ. ಆದರೂ ಒಟ್ಟಾರೆಯಾಗಿ ಭ್ರಷ್ಟಾಚಾರದ ವಿರುದ್ಧ ಆಂದೋಲನದ ಭಾಗವಾಗಿ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಅನುಕೂಲವಾದ ವಾತಾವರಣ ನಿರ್ಮಾಣವಾಯಿತು.

1996 ರಲ್ಲಿ ಸಂಯುಕ್ತ ರಂಗ ಸರಕಾರ ಬಂದಂದಿನಿಂದ ಭ್ರಷ್ಟಾಚಾರದ ಶಂಕೆಗೊಳಗಾದವರನ್ನು ರಕ್ಷಿಸಲು ನಿರಂತರ ಒತ್ತಡಗಳು ಹೆಚ್ಚಾದವು. ದೇವೇಗೌಡರ ಸರಕಾರದ ಆಳ್ವಿಕೆಯಲ್ಲಿ ಎಂ.ಎಲ್.ಎ., ಎಂ.ಪಿ.ಗಳಿಗೆ ಭ್ರಷ್ಟಾಚಾರ ತಡೆ ಕಾನೂನಿನ ವ್ಯಾಪ್ತಿಯಿಂದ ವಿನಾಯ್ತಿ ಕೊಡುವ ಅಪಕ್ವ ಪ್ರಯತ್ನಗಳೂ ನಡೆದವು. ಸತೀಶ್ ಶರ್ಮಾರಂತಹವರು ಮಾಡಿದ, ತನಗೆ ಬೇಕಾದಂತೆ ಸುರಿದು ಬಿಟ್ಟು ಪೆಟ್ರೋಲ್ ಬಂಕ್‌ಗಳ ನೀಡಿಕೆಯನ್ನು ನಿಯಮಿತಗೊಳಿಸುವಂತಹ ಶಾಸನಗಳನ್ನು ತರುವ ಪ್ರಸ್ತಾವಗಳೂ ಅಧಿಕೃತ ವಲಯಗಳಿಂದ ಬಂದವು. ಆದರೆ, ಭ್ರಷ್ಟಾಚಾರ ಕೇಸುಗಳಲ್ಲಿ ಯಾರನ್ನೂ ಬಿಡುವುದಿಲ್ಲ ಎಂಬಂತಹ ವಿಶ್ವಾಸ ಜನಗಳಲ್ಲಿ ಬೆಳೆಯಿತು.

ದುರದೃಷ್ಟವಶಾತ್, ಐ.ಕೆ.ಗುಜ್ರಾಲ್ ಸರಕಾರದಿಂದ ತದ್ವಿರುದ್ಧ ಸಂಕೇತಗಳು ಬರುತ್ತಿವೆ. ಕಾಂಗ್ರೆಸ್ಸನ್ನು ಅಧಿಕಾರದಿಂದ ಇಳಿಸುವುದರೊಂದಿಗೆ ಜನಗಳಿಗೆ ಉತ್ತರ ನೀಡಬೇಕಾದ ಒಂದು ಸರಕಾರ ಬರುತ್ತದೆ, ಭ್ರಷ್ಟಾಚಾರ ಎಸಗಿದವರನ್ನು ಶಿಕ್ಷಿಸುವ ವಚನವನ್ನು ಜನತಾದಳದ ಚುನಾವಣಾ ಪ್ರಣಾಳಿಕೆ ಹಾಗೂ 'ಸಮಾನ ಕನಿಷ್ಠ ಕಾರ್ಯಕ್ರಮ' ಎರಡೂ ನೀಡಿದ್ದವು. ಆದರೆ ಭ್ರಷ್ಟಾಚಾರದ ಆಪಾದನೆಗಳ ಸಿಬಿಐ ವಿಚಾರಣೆಗಳನ್ನು ಟೀಕಿಸುವ, ಬೂರ್ಜ್ವಾ ಪಕ್ಷಗಳ ಉನ್ನತ ಮುಖಂಡರು ಸಿಲುಕಿಕೊಂಡ ಕೇಸುಗಳನ್ನು ಹೂತು ಬಿಡಲು ತೋರುತ್ತಿರುವ ಆಸಕ್ತಿ ಇವೆಲ್ಲಾ ಈಗಲೂ ಈ ವಚನಕ್ಕೆ ಬದ್ಧರಾಗಿರುವ ಒಂದು ಸರಕಾರದ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತವೆ. □

ಕೇರಳ ವಿದ್ಯುತ್ ಯೋಜನೆಗೆ ಚೀನಾ ನೆರವು

ಕೇರಳದಲ್ಲಿ ಐದು ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ತಾಂತ್ರಿಕ ನೆರವನ್ನು ಒದಗಿಸುವುದಾಗಿ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್) ಸರಕಾರಕ್ಕೆ ಚೀನಾ ಆಶ್ವಾಸನೆ ನೀಡಿದೆ.

ಸ್ಥಳದಲ್ಲೇ ಅಧ್ಯಯನ ನಡೆಸಲು ಚೀನಿ ತಜ್ಞರ ತಂಡವೊಂದು ಜುಲೈನಲ್ಲಿ ಕೇರಳಕ್ಕೆ ಭೇಟಿ ನೀಡಲಿದೆ. ಈ ಅವಧಿಯಲ್ಲಿ ತಜ್ಞರು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಎಂಜಿನಿಯರುಗಳಿಗೆ ಪ್ರಾಥಮಿಕ ತರಬೇತಿ ನೀಡಲಿದ್ದಾರೆ. ರಾಜ್ಯದಲ್ಲಿ ಸುಮಾರು ಎರಡು ಡಜನ್ ನದಿಗಳು ಹರಿಯುತ್ತಿದ್ದು ಜಲವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕೆ ವಿಪುಲ ಅವಕಾಶ ವಿದೆ. ಚೀನಾದ ತಾಂತ್ರಿಕ ನೆರವಿನ ಲಭ್ಯತೆ ಮಿನಿ ಸ್ಥಾವರಗಳ ಸ್ಥಾಪನೆ ಯೋಜನೆಗೆ ಹೊಸ ಹುರುಪನ್ನು ಕೊಡಲಿದೆ. ರಾಜ್ಯ ಎದುರಿಸುತ್ತಿರುವ ತೀವ್ರ ವಿದ್ಯುತ್ ಅಭಾವವನ್ನು ನೀಗಿಸಲು ನೆರವಾಗಲಿದೆ.

ಕೊರತೆಯಿಂದ ಹೆಚ್ಚುವರಿಯತ್ತ...

ಚೀನಿ ನೆರವಿನೊಂದಿಗೆ ವಿದ್ಯುತ್ ಕೊರತೆಯುಳ್ಳ ರಾಜ್ಯಹೆಚ್ಚುವರಿ ವಿದ್ಯುತ್ ರಾಜ್ಯವಾಗಿ ಪಶ್ಚಿಮ ಬಂಗಾಳ ಪರಿವರ್ತನೆಗೊಂಡಂತೆ ಕೇರಳ ಕೂಡಾ ಆಗಬಹುದು ಎಂಬ ಆಸೆ ಚಿಗುರಿದೆ.

ಭತ್ತದ ಗದ್ದೆಗಳ ಪರಿವರ್ತನೆ ವಿರುದ್ಧ ಚಳುವಳಿಗೆ ಕರೆ

ಕೇರಳದಲ್ಲಿನ ಭತ್ತ ಬೆಳೆಯುವ ಜಮೀನನ್ನು ಮನೆ ನಿವೇಶನಗಳನ್ನಾಗಿ ಪರಿವರ್ತಿಸುವ ಹಾಗೂ ಪ್ಲಾಂಟೇಷನ್‌ಗಳ ವಿಸ್ತರಣೆಗಾಗಿ ಬಳಸುವ ಪ್ರವೃತ್ತಿಯ ವಿರುದ್ಧ ಆಂದೋಲನ ನಡೆಸುವಂತೆ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ವಿ.ಎಸ್.ಅಚ್ಯುತಾನಂದನ್ ಕರೆ ನೀಡಿದ್ದಾರೆ.

ಕೇರಳ ರಾಜ್ಯ ಕೃಷಿ ಕೂಲಿಕಾರರ ಸಂಘದ ದಕ್ಷಿಣ ವಲಯ ಸಮ್ಮೇಳನವನ್ನು ಅಲಪ್ಪುಳದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಜಮೀನು ಪರಿವರ್ತನೆಯನ್ನು ತಡೆಯಲು ಗಮನಹರಿಸದ ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಂಘ ಸರಕಾರದ ಮೇಲೆ ಒತ್ತಡ ತರಬೇಕು ಎಂದು ವಿ.ಎಸ್. ಆಗ್ರಹಿಸಿದರು. ಇಂಥ ಪರಿವರ್ತನೆಯನ್ನು ತಡೆಯಲು ಕಾರ್ಯಕ್ರಮವನ್ನು ರೂಪಿಸಬೇಕು. ದೈಹಿಕ ವಾಗಿಯೂ ಅವುಗಳನ್ನು ತಡೆಯಲು ಪ್ರಯತ್ನಿಸಬೇಕು ಎಂದು ಸಲಹೆ ಮಾಡಿದರು.

ಭತ್ತದ ಗದ್ದೆಗಳಲ್ಲಿ ಮೂರನೇ ಒಂದರಷ್ಟು ಜಮೀನು ಇಂಥ ಪರಿವರ್ತನೆಗಳಿಗೆ ಒಳಪಟ್ಟಿವೆ. ಈ ರೀತಿಯ ಪರಿವರ್ತನೆಯನ್ನು ಕಾನೂನು ನಿಷೇಧಿಸಿತ್ತಾದರೂ ಅಧಿಕಾರಿಗಳು ಇತ್ತ ಗಮನ ಹರಿಸುತ್ತಿಲ್ಲ ಎಂದು ಅಚ್ಯುತಾನಂದನ್ ಹೇಳಿದರು. ಪರಿವರ್ತನೆ ಪ್ರಕ್ರಿಯೆಯಿಂದಾಗಿ 18 ಲಕ್ಷ ಎಕರೆ ಭತ್ತದ ಗದ್ದೆ 11 ಲಕ್ಷ ಎಕರೆಗೆ ಇಳಿದಿದೆ ಇದರಿಂದ ಅಕ್ಕಿ ಕೊರತೆ ಸಮಸ್ಯೆ ಬಿಗಡಾಯಿಸಿದೆ ಎಂದು ಅವರು ವಿವರಿಸಿದರು.

ತಕ್ಷಣ ಭೂ ಮಂಜೂರಾತಿಗಾಗಿ ರೈತ ಸಂಘದ ಆಗ್ರಹ

ತುಮಕೂರು ತಾಲ್ಲೂಕಿನ ಹಲವೆಡೆ ಸುಮಾರು 25 ವರ್ಷಗಳಿಂದಲೂ ಕಷ್ಟಪಟ್ಟು ಭೂಮಿಯನ್ನು ಕೃಷಿಯೋಗ್ಯ ಮಾಡಿರುವ ರೈತರಿಗೆ ಆ ಭೂಮಿಯ ಹಕ್ಕುಪತ್ರ ಕೊಟ್ಟಿಲ್ಲ. ಎಕರೆಗೆ 500 ರೂ.ಗಳಿಂದ 2000 ರೂ.ಗಳವರೆಗೆ ಭೂ ರೆಕಾರ್ಡ್ ಮಾಡಲು ಖಾತೆ ಬದಲಾಯಿಸಲು ಶೇಖದಾರ, ಗ್ರಾಮ ಲೆಕ್ಕಿಗರು, ರೈತರನ್ನು ಸುಲಿಗೆ ಮಾಡುತ್ತಿದ್ದಾರೆ ಎಂದು ರೈತ ಮುಖಂಡ ಹೆಚ್.ಸಿ. ಚೆನ್ನಪ್ಪನವರು ಆಪಾದಿಸಿದ್ದಾರೆ. ಈ ಕೂಡಲೇ ಗುಬ್ಬಿ ತಾಲ್ಲೂಕಿನ ಜಾಗಲವಾಡಿ ಅಕ್ಕಪಕ್ಕ ಹಾಗೂ ಶಿರಾ ತಾಲ್ಲೂಕಿನ ಹುಂಜನಾಳು, ಬುಕ್ಕಪಟ್ಟಣ ವ್ಯಾಪ್ತಿಯಲ್ಲಿ ಬರುವ ರೈತರು ಗಳಿಗೆ ಭೂ ಮಂಜೂರಾತಿ ಮಾಡಿ ಕೊಡ ಬೇಕೆಂದು ಅವರು ಸರಕಾರವನ್ನು ಆಗ್ರಹ ಪಡಿಸಿದ್ದಾರೆ.

ಜೂನ್ 16 ರಂದು ಕರ್ನಾಟಕ ಪ್ರಾಂತ ರೈತ ಸಂಘದ ತುಮಕೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಭೂಮಿ ಮಂಜೂ ರಾತಿಗಾಗಿ ನಡೆದ ಹೋರಾಟದಲ್ಲಿ ಮಾತ ನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಬೀಡಿ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ ರೈತರು ಸಂಘಟಿತ ಹೋರಾಟದಿಂದ ತಮ್ಮ ಸಮಸ್ಯೆಯ ಇತ್ಯರ್ಥಕ್ಕಾಗಿ ಹೋರಾಡ ಬೇಕೆಂದು ಅಭಿಪ್ರಾಯ ಪಟ್ಟರು. ಎಸ್. ಎಫ್.ಐ. ಜಿಲ್ಲಾ ಅಧ್ಯಕ್ಷ ಸುಬ್ರಮಣ್ಯಂ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಮಹಮದ್ ದಸ್ತಗೀರ್ ಅವರು ಸಹ ಬೆಂಬಲಿಸಿ ಮಾತನಾಡಿದರು.

ಶಿರಾದ ಬುಕ್ಕಾಪಟ್ಟಣ, ಹುಂಜನಾಳು, ಗುಬ್ಬಿ, ಹಾಗಲವಾಡಿ ಅಕ್ಕಪಕ್ಕದ ಸುಮಾರು 50ಕ್ಕೂ ಹೆಚ್ಚು ರೈತರು ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಸಲ್ಲಿಸಿದರು.

ಡಿವೈಎಫ್‌ಐ ಸ್ಥಾಪನಾ ದಿನಾಚರಣೆಯ ರ್‍ಯಾಲಿ

ಡಿವೈಎಫ್‌ಐ ಯಾವಾಗಲೂ ವೈಜ್ಞಾನಿಕ ಸಮಾಜವಾದದ ಮಾರ್ಗವನ್ನೇ ಅನುಸರಿಸಬೇಕು, ತುಳಿತಕ್ಕೊಳಗಾದ ಜನಸಮುದಾಯದ ವಿಶಾಲ ಯುವ ವಿಭಾಗವನ್ನು ಡಿವೈಎಫ್‌ಐ ಬಾವುಟದಡಿ ಸಂಘಟಿಸಬೇಕು ಎಂದು ಸಂಘಟನೆ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಬುದ್ಧದೇವ ಭಟ್ಟಾಚಾರ್ಯ ಕರೆ ನೀಡಿದ್ದಾರೆ.

ಡಿವೈಎಫ್‌ಐನ 30ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಜೂನ್ 9 ರಂದು ಕಲ್ಕತ್ತದ ನೇತಾಜಿ ಸ್ಟೇಡಿಯಂನಲ್ಲಿ ನಡೆದ ಬೃಹತ್ ಸಭೆಯಲ್ಲಿ ಅವರು ಮಾತನಾಡಿದರು.

ಡಿವೈಎಫ್‌ಐ ಸ್ಥಾಪನೆಯಾದ ಹಿನ್ನೆಲೆಯನ್ನು ನೆನಪು ಮಾಡಿಕೊಟ್ಟ ಕಾ|| ಭಟ್ಟಾಚಾರ್ಯ, 'ಈಗಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಸೂಕ್ತ ತಂತ್ರವನ್ನು ಅಳವಡಿಸಿಕೊಳ್ಳುವಂತೆ ನೆರೆದ ಯುವ ಜನತೆಗೆ ಕರೆ ನೀಡಿದರು.

ಕೋಮುವಾದ ಮತ್ತು ಪ್ರತ್ಯೇಕತಾವಾದದ ವಿರುದ್ಧ ಎಚ್ಚರದಿಂದಿರುವಂತೆ ಸಭೆ ಕರೆ ಕೊಟ್ಟಿತು.

ಡಿವೈಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮಹಮದ್ ಸಲೀಂ ಮತ್ತು ರಾಜ್ಯ ನಾಯಕರು ಕೂಡಾ ರ್‍ಯಾಲಿಯಲ್ಲಿ ಮಾತನಾಡಿದರು.

ಶ್ರದ್ಧಾಂಜಲಿ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಿಪಿಐ(ಎಂ) ಕುಪ್ಪೇಪದವು ಶಾಖಾ ಸದಸ್ಯರು ಆಗಿದ್ದ ಕಾ|| ಉಮೆರಬ್ಬರವರು ಜೂನ್ 8 ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. ಇವರಿಗೆ ಕುಪ್ಪೇಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ಸಂತಾಪವನ್ನು ವ್ಯಕ್ತಪಡಿಸಿದೆ.

ಅರಣ್ಯ ನೌಕರರ ಸಂಘದ ಸಭೆ

ಶಿವಮೊಗ್ಗ ಜಿಲ್ಲಾ ಎಂ.ಪಿ.ಎಂ. ಅರಣ್ಯ ನೌಕರರ ಸಂಘದ ಅಂಗ ಘಟಕದ ಸರ್ವ ಸದಸ್ಯರ ಸಭೆ ಮೇ 31 ರಂದು ನಡೆಯಿತು. ಸಭೆಗೆ ಮುಖ್ಯ ಅತಿಥಿಗಳಾಗಿ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಕೆ.ಶಂಕರ್, ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿ ಎಸ್.ಬಿ.ಶಿವಶಂಕರ್ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಹೊಸ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಕೆ.ಜಿ.ಗಿರಿಯಪ್ಪ ಹಾಗೂ ಕಾರ್ಯದರ್ಶಿಯಾಗಿ ಎ.ಪಿ.ಮುಗ್ಗಪ್ಪನವರನ್ನು ಆರಿಸಲಾಯಿತು.

ವಿರಾಜಪೇಟೆ: ಆಸ್ಪತ್ರೆ ಸ್ಥಿತಿ ಸುಧಾರಣೆಗಾಗಿ ಸಿಪಿಐ(ಎಂ) ಪ್ರಯತ್ನ

ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ಸಂಬಂಧಿಸಿದಂತೆ ಸಿಪಿಐ(ಎಂ) ವಿರಾಜ ಪೇಟೆ ಶಾಖೆ ಸರಕಾರಕ್ಕೆ ಬೇಡಿಕೆಗಳ ಮನವಿ ಸಲ್ಲಿಸಿತು.

ಆಸ್ಪತ್ರೆಯಲ್ಲಿ ಎಲ್ಲಾ ವಿಭಾಗದ ಸಿಬ್ಬಂದಿಗಳ ತೀವ್ರ ಕೊರತೆ ಕಂಡು ಬರುತ್ತಿದೆ. ಸುಮಾರು 20-25 4ನೇ ದರ್ಜೆಯ ವಿಭಾಗದ ನೌಕರರ ಹುದ್ದೆ ಖಾಲಿ ಬಿದ್ದಿವೆ. 10-15 ದಾದಿಯರ ಅವಶ್ಯಕತೆ ಇದೆ. 7-8 ವೈದ್ಯ ಹುದ್ದೆ ಭರ್ತಿಯಾಗಿಲ್ಲ. ಈ ಬಗ್ಗೆ ಸರಕಾರದ ಮೇಲೆ ಒತ್ತಡ ಹೇರುವಂತೆ ಒತ್ತಾಯಿಸಲು ಶಾಸಕರನ್ನು ಭೇಟಿ ಮಾಡಿ ವಿನಂತಿಸುವಂತೆ ಯೂ, ಈ ಕಡೆಗೆ ಗಮನ ಸೆಳೆಯಲು ಉಸ್ತುವಾರಿ ಸಚಿವ ಶ್ರೀ ನಾಣಯ್ಯನವರನ್ನು ಭೇಟಿ ಯಾಗಲು ಸಿಪಿಐ(ಎಂ) ಶಾಖೆ ನಿರ್ಧರಿಸಿತು.

ಆಸ್ಪತ್ರೆಯ ಕಟ್ಟಡ, ಸಿಬ್ಬಂಧಿಗಳು ಮತ್ತು ವೈದ್ಯರುಗಳಿರುವ ವಸತಿ ಗೃಹಗಳ ದುಸ್ಥಿತಿಯನ್ನು ವಿಶ್ವಬ್ಯಾಂಕ್‌ನಿಂದ ಬರಲಿರುವ ನೆರವಿನಿಂದ ಸರಿಪಡಿಸುವುದಾಗಿ ಆಶ್ವಾಸನೆ ದೊರೆತಿದೆ ಎಂದು ತಿಳಿಸಲಾಗಿದೆ. ಈ ಬಗ್ಗೆ ಕಾದು ನೋಡಿ ಅಗತ್ಯವೆನಿಸಿದರೆ ಜನತೆಯ ಸಹಕಾರದೊಂದಿಗೆ ಚಳುವಳಿ ಸಂಘಟಿಸಲು ಸಿಪಿಐ(ಎಂ) ತೀರ್ಮಾನಿಸಿದೆ.

ರೇಶನ್ ಅಂಗಡಿಗಳಲ್ಲಿ ಜನರಿಗೆ ವಿತರಣೆ ಮಾಡುತ್ತಿರುವ ನಿತ್ಯೋಪಯೋಗಿ ವಸ್ತುಗಳ ಬೆಲೆಯನ್ನು ಹೆಚ್ಚಿಸಲಾಗಿದೆ. ಈ ಜನ ವಿರೋಧಿ ಕ್ರಮವನ್ನು ಸಿಪಿಐ(ಎಂ) ವಿರಾಜಪೇಟೆ ಶಾಖೆ ತೀವ್ರವಾಗಿ ಖಂಡಿಸುತ್ತದೆ ಮತ್ತು ಹೆಚ್ಚಿಸಿದ ದರವನ್ನು ಹಿಂತೆಗೆದುಕೊಳ್ಳುವಂತೆಯೂ ಪಡಿತರ ವ್ಯವಸ್ಥೆಯನ್ನು ಇನ್ನಷ್ಟು ಸುವ್ಯವಸ್ಥಿತಗೊಳಿಸುವಂತೆಯೂ ಸರಕಾರವನ್ನು ಒತ್ತಾಯಿಸಿದೆ.

ಡೊನೇಶನ್ ಹಾವಳಿ ತಡೆಗಟ್ಟಲು ವೈಜ್ಞಾನಿಕ ಶಿಕ್ಷಣಕ್ಕಾಗಿ ಹೋರಾಟ - ಎಸ್‌ಎಫ್‌ಐ ನಿರ್ಧಾರ

ವಿಜಾಪುರ: ಜೂನ್ 17 ರಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಜಿಲ್ಲಾ ಸಮಿತಿ ಸಭೆ ಸಂತೋಷಕುಮಾರ್ ಬಂಡಾರ್ಕೆ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳನ್ನು ಕಾಡುತ್ತಿರುವ ಕ್ಯಾಪಿಟೇಷನ್, ಡೊನೇಶನ್ ಹಾವಳಿ ತಡೆಗಟ್ಟಲು ವೈಜ್ಞಾನಿಕ ಶಿಕ್ಷಣ ಜಾರಿಗಾಗಿ ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಟ ಮಾಡಲು ಕರೆ ನೀಡಿತು. ಎಸ್‌ಎಫ್‌ಐನ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್‌ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ 1997 ಏಪ್ರಿಲ್‌ನಲ್ಲಿ ಜರುಗಿದ ಎಸ್‌ಎಸ್‌ಎಲ್‌ಸಿ ಮತ್ತು ಬೋರ್ಡ್ ಪರೀಕ್ಷೆಗಳಲ್ಲಿ ಎಸ್‌ಎಫ್‌ಐ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಅಂಕಗಳನ್ನು ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗಿ ಎಸ್ಎಫ್ಐ ಘೋಷಣೆಗಳಾದ 'ಶಿಕ್ಷಣ ಮತ್ತು ಹೋರಾಟ'ದ ಮಾರ್ಗೋಪಾಯದಲ್ಲಿದ್ದಾರೆ ಎಂದರು. ವಿಜಾಪುರದಲ್ಲಿ ಎಸ್‌ಎಫ್‌ಐ ಸದಸ್ಯೆ ಕುಮಾರಿ ಸಾಲೇಹಾ ಪರವೀನ್ ಎಂ.ಲಾಹೋರಿ ಇವರು ವಿಜಾಪುರದ ಉರ್ದು ಸೆಂಟರುಗಳ ವಿದ್ಯಾರ್ಥಿನಿಯರಲ್ಲೇ ಅತ್ಯಧಿಕ ಅಂಕಗಳನ್ನು ಪಡೆದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದು 'ಶಿಕ್ಷಣ ಮತ್ತು ಹೋರಾಟ'ದ ಗುರಿಯನ್ನಿಟ್ಟುಕೊಂಡು ಎಸ್‌ಎಫ್‌ಐನ ಚಟುವಟಿಕೆ ನಿರ್ವಹಿಸುತ್ತಿರುವ ಈಕೆ ಅಲ್‌ಅಮಾನ್ ಉರ್ದು ಹೈಸ್ಕೂಲಿನ ವಿದ್ಯಾರ್ಥಿನಿ ಆಗಿದ್ದು, ಇವರ ಸಾಧನೆಗೆ ಎಸ್‌ಎಫ್‌ಐ ಜಿಲ್ಲಾ ಸಮಿತಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದೆ.

ಈ ಸಭೆಯಲ್ಲಿ ಎಸ್‌ಎಫ್‌ಐ ಮಾಜಿ ಜಿಲ್ಲಾ ಕಾರ್ಯದರ್ಶಿ ಎನ್.ಎಲ್.ನಧಾಫ್, ಮತ್ತು ರೈತ ಸಂಘದ ಶ್ರೀ ಭೀಮಸಿ ಕಲಾದಗಿ, ಸಿಪಿಐ(ಎಂ)ನ ಐ.ಪಿ.ಲಾಲಕೋಟರವರು ಭಾಗವಹಿಸಿದ್ದರು.



ಕುಮಾರಿ ಸಾಲೇಹಾ ಪರವೀನ್

ಬೆಂಗಳೂರು ಅಕ್ರಮ ಕಟ್ಟಡ ಕೆಡವಿದ ಪ್ರಕರಣ

ವಸ್ತುನಿಷ್ಠ ವಿಚಾರಣೆಗೆ ಬುದ್ಧಿಜೀವಿಗಳ ಆಗ್ರಹ

ಬೆಂಗಳೂರಿನ ಜಯನಗರದ ಗಣೇಶ ದೇವಸ್ಥಾನ ಸಮಿತಿಯವರು 'ಅಕ್ರಮ ಕಟ್ಟಡ ನಿರ್ಮಾಣ' ಮಾಡುತ್ತಿದ್ದಾರೆಂಬ ಆಪಾದನೆಯ ಮೇಲೆ ನಗರ ಪಾಲಿಕೆಯ ವಿಶೇಷ ಕಾರ್ಯಾಚರಣೆ ಪಡೆ ಕಟ್ಟಡವೊಂದನ್ನು ಕೆಡವಿದ್ದು ನಂತರ ಮೇಯರ್ ಅವರು 'ಮೌಖಿಕವಾಗಿ' ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ್ದಾರೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತಾ ಈ ಇಡೀ ಪ್ರಕರಣದ ಬಗ್ಗೆ ಕೂಲಂಕುಷವಾದ, ನಿಷ್ಠುರವಾದ, ವಸ್ತುನಿಷ್ಠವಾದ ವಿಚಾರಣೆ ಆಗಬೇಕೆಂದು ಬೆಂಗಳೂರಿನ ಬುದ್ಧಿಜೀವಿಗಳು ಆಗ್ರಹ ಪಡಿಸಿದ್ದಾರೆ.

ಕೆಡವಲ್ಪಟ್ಟ ಕಟ್ಟಡ ದೇವಸ್ಥಾನದ ಭಾಗವಾಗಿತ್ತೇ, ಈ ಕಟ್ಟಡ ಕಟ್ಟಲು ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಅವಶ್ಯಕತೆ ಇಲ್ಲವೇ, ಎರಡು ಅಂತಸ್ತು ಕಟ್ಟುವವರೆಗೆ ಸುಮ್ಮನಿದ್ದ ನಗರಪಾಲಿಕೆ ಈ ಕಾರ್ಯಾಚರಣೆ ತೊಡಗುವುದರ ಔಚಿತ್ಯವನ್ನು ಮೇಯರ್ ಅವರು ಪ್ರಶ್ನಿಸಿರುವುದನ್ನು ನೋಡಿದರೆ ಅವರ ಪ್ರಕಾರ ಎಂದಾವರೂ ಒಂದು ದಿನವಾದರೂ ಕಾನೂನುಬಾಹಿರ ಚಟುವಟಿಕೆಯನ್ನು ವಿರೋಧಿಸುವ ಧೈರ್ಯ ವನ್ನು ತೋರುವುದನ್ನು ತಪ್ಪು ಎಂದು ಒಪ್ಪಬೇಕು? ಎಂದು ಅವರು ನೀಡಿರುವ ಹೇಳಿಕೆ ಪ್ರಶ್ನಿಸಿದೆ.

ಸಂಬಂಧಪಡದ ಉತ್ತರ ಹಳ್ಳಿ ಶಾಸಕ ಎಂ.ಶ್ರೀನಿವಾಸ್, ದೇವಸ್ಥಾನದ ಧರ್ಮದರ್ಶಿಗಳು, ಇವರುಗಳೆದುರು ಕರ್ತವ್ಯ ಹಾಗೂ ಕಾನೂನು ಪಾಲನೆ ಮಾಡಿದ ಆಯುಕ್ತರನ್ನು, ಇತರ ಅಧಿಕಾರಿಗಳನ್ನು ಅವಮಾನ ಮಾಡುವುದು ಮೇಯರ್ ಸ್ಥಾನದಲ್ಲಿರುವ ವ್ಯಕ್ತಿಗೆ ಘನತೆಯ ವಿಷಯವೇ ಎಂದೂ ಪ್ರಶ್ನಿಸಿದ್ದಾರೆ. ದೇವಸ್ಥಾನದವರು ಚರಂಡಿಯ ಜಾಗವನ್ನು ಅತಿಕ್ರಮಿಸಿದ್ದಾರೆ ಎಂದು ಎಂ.ಶ್ರೀನಿವಾಸ್ ಅವರು ತಾವೇ ಒಪ್ಪಿಕೊಂಡಿದ್ದಾರೆ. ತಾವು 'ಪೇಪರ್ ಟೈಗರ್' ಗಳಲ್ಲ ಎಂದು ಬೀಗುವ ವೋಟುಗಳಿಕೆಯ ಧುರೀಣ ರಾಜಕಾರಣಿಗಳ ಪರಿಸರ ಪ್ರಜ್ಞೆ ಈ ಬಗೆಯದೆ? ದೈವಭಕ್ತಿ ಎಂದರೆ ಇದೆಯೇ ಏನು ಎಂದು ಪ್ರಶ್ನಿಸುತ್ತಾ ಈ ಎಲ್ಲಾ ಅಂಶಗಳ ಬಗ್ಗೆ ವಿಚಾರಣೆ ಅಗತ್ಯ ಎಂದು ಅವರು ಹೇಳಿದ್ದಾರೆ.

'ಜಾತಿ, ಧರ್ಮಗಳ ಯಾವ ಘಾಟಿಲ್ಲದೆ ನಾವೆಲ್ಲಾ ಸಾರ್ವಜನಿಕ ಜೀವನ, ಭವಿಷ್ಯ, ಪರಿಸರ ನೈರ್ಮಲ್ಯ ಇವುಗಳ ಕುರಿತಾದ ಆರೋಗ್ಯಕರ ಹಾಗೂ ಕ್ರಿಯಾಶೀಲ ಮನೋಭಾವ ಬೆಳೆಸಿಕೊಳ್ಳದಿದ್ದರೆ ಖಂಡಿತ ಅಪಾಯ ತಟ್ಟದಿರದು ಎಂದೂ ಇವರು ಅಭಿಪ್ರಾಯಪಟ್ಟಿದ್ದಾರೆ'. ಈ ಹೇಳಿಕೆಗೆ ಪ್ರೊ.ಜಿ.ಕೆ.ಗೋವಿಂದರಾವ್, ಡಾ.ಬಿ.ಕೆ .ಚಂದ್ರ ಶೇಖರ್, ಡಾ.ಜಿ.ರಾಮಕೃಷ್ಣ, ಎಸ್.ಜಿ.ವಾಸುದೇವ್, ನಾಗಮೋಹನ ದಾಸ್, ಎನ್.ಬಾಬಯ್ಯ, ಟಿ.ಸುರೇಂದ್ರ, ಎಸ್.ಗಾಯತ್ರಿ, ಎಂ.ಜಿ. ವೆಂಕಟೇಶ್, ಟಿ.ವೆಂಕಟೇಶಮೂರ್ತಿ ಮತ್ತಿತ ರರು ಸಹಿ ಮಾಡಿದ್ದಾರೆ.

ಕರ್ನಾಟಕದಲ್ಲಿ ಕಳೆದ ವಾರ

ಜೂನ್ 13

→ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಗೆ ಶಿವಮೊಗ್ಗ ಸಿವಿಲ್ ನ್ಯಾಯಾಲಯ ನೀಡಿರುವ ತಡೆಯಾಜ್ಞೆ ಪ್ರಶ್ನಿಸಿ ಹೈಕೋರ್ಟ್‌ನ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಕೆ.

→ ರಾಯಚೂರು ಶಾಖೋತ್ಪನ್ನ ಘಟಕದಂತೆಯೇ ರಾಜ್ಯದಲ್ಲಿ ಮತ್ತೊಂದು ಶಾಖೋತ್ಪನ್ನ ಘಟಕವನ್ನು ಸ್ಥಾಪಿಸಲು ಸರಕಾರ ಗಂಭೀರ ಪರಿಶೀಲನೆ ನಡೆಸಿರುವುದಾಗಿ ವಿದ್ಯುತ್ ಸಚಿವರು

ಜೂನ್ 14

→ ಸ್ವಂತ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ ಖಾಸಗಿ ಕೈಗಾರಿಕೆಗಳು ಬಳಸುವ ವಿದ್ಯುತ್ತಿಗೆ ತೆರಿಗೆ ವಿನಾಯ್ತಿ ನೀಡಲು ರಾಜ್ಯ ಸಚಿವ ಸಂಪುಟ ನಿರ್ಧಾರ.

ಜೂನ್ 15

→ ರಾಜ್ಯದಲ್ಲಿ ರಸ್ತೆ, ಸೇತುವೆ ಅಭಿವೃದ್ಧಿಗೆ ನಬಾರ್ಡ್‌ನಿಂದ 250 ಕೋಟಿ ರೂ. ನೆರವು ಪಡೆಯಲಾಗಿದೆ ಎಂದು ಲೋಕೋಪಯೋಗಿ ಸಚಿವರು.

→ ಏಪ್ರಿಲ್ ಒಂದರಿಂದ ಸಣ್ಣ ಉಳಿತಾಯ ಯೋಜನೆಗಳಲ್ಲಿ ಹೂಡುವ ಠೇವಣಿಗಳ ಮೇಲೆ ಶೇಕಡಾ 2 ರಿಂದ 5 ರವರೆಗೆ ಪ್ರೋತ್ಸಾಹದ ಧನ ನೀಡುವ ಯೋಜನೆಯನ್ನು ಜಾರಿಗೆ ತರಲು ಸರಕಾರದ ನಿರ್ಧಾರ.

ಜೂನ್ 16

→ ಕೆಪಿಸಿಸಿ ಅಧ್ಯಕ್ಷ ಚುನಾವಣೆ ನಡೆಸಲು ಹೈಕೋರ್ಟ್ ಅನುಮತಿ. ಜೂನ್ 20 ಕ್ಕೆ ಚುನಾವಣೆ ನಡೆಸಲು ನಿರ್ಧಾರ.

ಜೂನ್ 17

→ ರಾಜ್ಯದಲ್ಲಿ ತಲೆ ಎತ್ತುತ್ತಿರುವ ವಿದ್ಯುತ್ ಯೋಜನೆಗಳಿಗೆ ಉಂಟಾಗಿರುವ 'ತೊಡಕು'ಗಳನ್ನು ನಿವಾರಿಸಲು ಈಗಿರುವ ಕಾನೂನಿಗೆ ಶೀಘ್ರ ತಿದ್ದುಪಡಿ ತರುವುದಾಗಿ ಸಣ್ಣ ಕೈಗಾರಿಕಾ ಸಚಿವರು.

→ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಈಗ ಮೊಯಿಲಿ, ಚಂದ್ರೇಗೌಡ, ಸಿದ್ನಾಳ್ ಸ್ಪರ್ಧಿಗಳು.

→ ತಾಲ್ಲೂಕು ಪಂಚಾಯಿತಿಗಳಿಗೆ ಸ್ಟಾಂಪ್ ಶುಲ್ಕದಲ್ಲಿ 3% ಪಾಲು ದೊರೆಯುತ್ತಿದ್ದುದನ್ನು ತಪ್ಪಿಸಿ ರಾಜ್ಯ ಸರಕಾರ ಕರ್ನಾಟಕ ಪಂಚಾಯತ್ ರಾಜ್ ಕಾನೂನಿಗೆ ತಂದಿರುವ ತಿದ್ದುಪಡಿಯನ್ನು ಪ್ರಶ್ನಿಸಲು ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ನಿರ್ಧಾರ.

ಜೂನ್ 18

→ ಕಾವೇರಿ ನೀರು ಹಂಚಿಕೆ ಕುರಿತು ನ್ಯಾಯಮಂಡಳಿ ನೀಡಿರುವ ಮಧ್ಯಂತರ ಆದೇಶದ ಜಾರಿಗೆ ಕೇಂದ್ರ ಸರಕಾರ ಪ್ರಸ್ತಾವನೆ ಮಾಡಿರುವ ಕರಡು ಯೋಜನೆಗೆ ಕರ್ನಾಟಕದ ಸರಕಾರ ತೀವ್ರ ವಿರೋಧ.

ಜೂನ್ 19

→ ನಿಗದಿಯಾದಂತೆ ಕೆಪಿಸಿಸಿ ಅಧ್ಯಕ್ಷ ಚುನಾವಣೆಯನ್ನು ಜೂನ್ 20 ರಂದು ನಡೆಸಲು ಆದರೆ ನ್ಯಾಯಾಲಯದಲ್ಲಿರುವ ರಜಾಕಾಲದ ವಿಶೇಷ ಅರ್ಜಿಯ ಬಗ್ಗೆ ಅಂತಿಮ ತೀರ್ಮಾನದವರೆಗೆ ಮತ ಎಣಿಕೆ, ಫಲಿತಾಂಶ ಪ್ರಕಟಣೆ ಮಾಡ ಬಾರದು ಎಂದು ಸುಪ್ರೀಂಕೋರ್ಟ್ ಆದೇಶ.

→ ಕೇಂದ್ರದಿಂದ ರಾಜ್ಯಕ್ಕೆ ಲಭಿಸುತ್ತಿದ್ದ ಆಹಾರ ಧಾನ್ಯಗಳ ಪ್ರಮಾಣ ಒಂದೂವರೆ ಲಕ್ಷ ಟನ್‌ನಿಂದ 75 ಸಾವಿರಕ್ಕೆ ಇಳಿದುದರಿಂದ ಹಿಂದಿನ ಪ್ರಮಾಣದಲ್ಲಿ ರೇಶನ್ ವಿತರಣೆ ಸಾಧ್ಯವಾಗುತ್ತಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ.

ಇದೇ ಜೂನ್ 20 ರಂದು ಪಶ್ಚಿಮಬಂಗಾಳದ ಎಡರಂಗ ಸರಕಾರ 20 ವರ್ಷಗಳನ್ನು ಪೂರ್ಣಗೊಳಿಸಿದೆ. ಈ ಸಂದರ್ಭದಲ್ಲಿ ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳು ಹಾಗೂ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋದ ಸದಸ್ಯರೂ ಆಗಿರುವ ಜ್ಯೋತಿಬಸುರವರೊಡನೆ ಐಎನ್‌ಎಸ್ ಸುದ್ದಿಸಂಸ್ಥೆ ನಡೆಸಿದ ಒಂದು ಸಂದರ್ಶನವನ್ನು ಇಲ್ಲಿ ಕೊಡುತ್ತಿದ್ದೇವೆ.

"ನಾವು ಜನರೊಂದಿಗೇ ಇದ್ದೇವೆ"

❑ ಪಶ್ಚಿಮಬಂಗಾಳದ ಎಡರಂಗ ಒಂದು ರಾಜ್ಯ ಸರಕಾರ ಮೂಲಭೂತ ಬದಲಾವಣೆಗಳನ್ನು ತರಲು ಸಾಧ್ಯವಿಲ್ಲ, ಜನಗಳಿಗೆ ಸ್ವಲ್ಪ ಪರಿಹಾರ ನೀಡಬಹುದಷ್ಟೆ ಎಂದು ಹೇಳಿದೆ. ಎಡರಂಗ ಸರಕಾರ ಈ ಪರಿಹಾರವನ್ನು ಯಶಸ್ವಿಯಾಗಿ ನೀಡಿದೆ ಎಂದು ನಿಮಗನ್ನಿಸುತ್ತದೆಯೇ?



ಒಂದು ರಾಜ್ಯ ಸರಕಾರ ಮೂಲಭೂತ ಬದಲಾವಣೆಗಳನ್ನು ತರಲು ಸಾಧ್ಯವಿಲ್ಲ ಎಂಬುದು ನಿಜ. ಆದರೆ ಅದು ಜನಗಳಿಗೆ ಬಹಳಷ್ಟು ಅಗತ್ಯವಿರುವ ಪರಿಹಾರವನ್ನಂತೂ ಒದಗಿಸಲು ಸಾಧ್ಯ. ಕಳೆದ 20 ವರ್ಷಗಳಲ್ಲಿ ನಾವು ಇದನ್ನು ಮಾಡಲು ಪ್ರಯತ್ನಿಸುತ್ತಿದ್ದೇವೆ. ವ್ಯವಸ್ಥೆಯನ್ನು ಮೂಲಭೂತವಾಗಿ ಬದಲಿಸಲಾರದೆಯೂ ಬಹಳಷ್ಟು ಮಾಡಲು ಸಾಧ್ಯ ಎಂಬುದು ನಮ್ಮ ನಂಬಿಕೆ. ನಮ್ಮ ಅನುಭವ ಈ ನಂಬಿಕೆಯನ್ನು ಸಾಬೀತು ಮಾಡಿದೆ. ನಾವು ಜನಗಳ ಕಲ್ಯಾಣದ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾ ಬಂದಿದ್ದೇವೆ.

ಕೃಷಿ, ಉದ್ದಿಮೆ, ಶಿಕ್ಷಣ, ಸಾಮಾಜಿಕ ಅರಣ್ಯ, ಮೀನುಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ನಿರ್ದಿಷ್ಟ ಫಲಿತಾಂಶಗಳು ದೊರೆತಿವೆ. ವಿವಿಧ ಭೂ ಸುಧಾರಣಾ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾಗಿದ್ದೇವೆ. ಪಂಚಾಯತುಗಳಿಂದ ಭದ್ರ ಬುನಾದಿ ಹಾಕಿಕೊಟ್ಟಿದ್ದೇವೆ. ಅವು ಗ್ರಾಮೀಣ ಬಡವರಿಗೆ ಫಲಪ್ರದ ಉದ್ಯೋಗವಕಾಶಗಳನ್ನು ನಿರ್ಮಿಸಿವೆಯಲ್ಲದೆ ಎಲ್ಲರ ಪ್ರಯೋಜನಕ್ಕೆ ಬರುವ ಬಹುಕಾಲ ಬಾಳುವ ಆಸ್ತಿಗಳನ್ನು ಸೃಷ್ಟಿಸಿವೆ. ಕೃಷಿ ಉತ್ಪಾದನೆಯೂ ಅಪಾರವಾಗಿ ಹೆಚ್ಚಿದೆ. ಇನ್ನಷ್ಟು ಚಟುವಟಿಕೆಗಳಿಗೆ ಇನ್ನೂ ಬಹಳಷ್ಟು ಅವಕಾಶವಿದೆ. ಆಹಾರ ಸಂಸ್ಕರಣಾ ವಲಯದಲ್ಲಿ ಈಗ ಅಗಾಧ ಸಾಧ್ಯತೆಗಳಿವೆ. ಈ ಕ್ಷೇತ್ರದಲ್ಲಿನ ಚಟುವಟಿಕೆಗಳತ್ತ ಗಮನ ಕೇಂದ್ರೀಕರಿಸಬೇಕಾಗಿದೆ. ಬೆಳೆ ಪ್ರಮಾಣದಲ್ಲಿ ಬಹಳ ಹೆಚ್ಚಳವಾಗಿರುವುದರಿಂದ ಬಹು ಬೆಳೆ ತೆಗೆಯುವುದರ ಮೇಲೆ ಒತ್ತು ಹಾಕುತ್ತಿದ್ದೇವೆ. ಇದನ್ನೂ ಯಶಸ್ವಿಯಾಗಿ ಮಾಡಬಹುದು. ರೈತರಲ್ಲಿ ಈ ಬಗ್ಗೆ ಅಪಾರ ಉತ್ಸುಕತೆಯಿದೆ. ಕಾಂಗ್ರೆಸ್ ಆಳ್ವಿಕೆಯ ಕಾಲದಲ್ಲಿ ಒಟ್ಟು ಬೆಳೆ ಪ್ರದೇಶದ 30%ಕ್ಕೆ ಮಾತ್ರ ನೀರಾವರಿಯಿತ್ತು. ಈಗ ಆ ಗುರಿಯನ್ನು 55% ಕ್ಕೇರಿಸಲು ಪ್ರಯತ್ನಿಸುತ್ತಿದ್ದೇವೆ. ತೀಸ್ತಾ ಬ್ಯಾರೇಜ್ ಯೋಜನೆಯ ಕೆಲಸ ಮುಂದುವರಿದಿದೆ. ಇದು ಮುಕ್ತಾಯಗೊಂಡಾಗ ಕೃಷಿ ದೃಷ್ಟಿಯಿಂದ ಹಿಂದುಳಿದ ಉತ್ತರ ಬಂಗಾಳದ 5 ಜಿಲ್ಲೆಗಳಿಗೆ ಪ್ರಯೋಜನ ದೊರೆಯುತ್ತದೆ.

ಸಣ್ಣ ಉದ್ದಿಮೆಗಳನ್ನು ಹಾಕಿ ಜಿಲ್ಲೆಗಳಲ್ಲಿ ಕೈಗಾರಿಕಾ ದೃಶ್ಯವನ್ನು ಬದಲಿಸಲು ಪ್ರಯತ್ನಿಸಿದ್ದೇವೆ. ಜನಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲೂ ಈ ಕಾರ್ಯಕ್ರಮ ನೆರವಾಗಿದೆ.

ಕುಡಿಯುವ ನೀರಿನ ಯೋಜನೆಗಳ ವಿಸ್ತರಣೆ ರಾಜ್ಯ ಸರಕಾರದ ಆದ್ಯತೆಗಳಲ್ಲೊಂದು. ಹಳ್ಳಿಗಳಲ್ಲಿ ಈ ಯೋಜನೆಗಳು 1996-97ರಲ್ಲಿ ಗ್ರಾಮೀಣ ಜನಸಂಖ್ಯೆಯ 79.20%ವನ್ನು ತಲುಪಿದೆ. 1977ರಲ್ಲಿ ಇದು ತಲುಪಿದ್ದದ್ದು 14% ಮಂದಿಯನ್ನು. ನಗರ ಪ್ರದೇಶಗಳಲ್ಲಿ ಇದು 1977ರಲ್ಲಿ 34% ಇದ್ದದ್ದು 1996-97ರಲ್ಲಿ 76.64%ವಾಗಿದೆ.

ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ನಡೆಸಿಕೊಂಡು ಬಂದಿರುವ ಪ್ರಧಾನ ಚಟುವಟಿಕೆಗಳ ಬಗ್ಗೆ ಈಗಾಗಲೇ ಹೇಳಿದ್ದೇವೆ. ಆದರೆ ನಾವಿನ್ನೂ ಬಹಳಷ್ಟು ಮಾಡಬೇಕಾಗಿದೆ.. ನಾವು ನೀಡಿದ ವಚನಗಳೆಲ್ಲವೂ ಇನ್ನೂ ಈಡೇರಿಲ್ಲ. ಹಲವು ಭೂಸುಧಾರಣಾ ಕೇಸುಗಳು ಇನ್ನೂ ಕೋರ್ಟುಗಳಲ್ಲಿವೆ. ಕೆಲವು ಕೇಸುಗಳಲ್ಲಿ ತೀರ್ಪು ಸರಕಾರದ ಪರ ಬಂದಿದೆ. ಇನ್ನೂ ಕೆಲವು ಕೇಸುಗಳಲ್ಲೂ ಇಂತಹುದೇ ತೀರ್ಪುಗಳ ನಿರೀಕ್ಷೆಯಿಟ್ಟುಕೊಂಡಿದ್ದೇವೆ. ಹೀಗೆ ಪಡೆದ ಒಂದು ಲಕ್ಷ ಎಕರೆ ಭೂಮಿಯನ್ನು ವಿತರಿಸುವ ಕಾರ್ಯಕ್ರಮವನ್ನು ಜಾರಿ ಮಾಡುವ ಬಗ್ಗೆ ಸಲಹೆ-ಸೂಚನೆಗಳೊಂದಿಗೆ ನಮಗೆ ನೆರವು ನೀಡಬೇಕೆಂದು ರೈತ ಸಂಘಟನೆಗಳನ್ನು ಕೇಳಿದ್ದೇವೆ.


ನಾವು ಎಡರಂಗದ ಸಮಾನ ಕನಿಷ್ಠ ಕಾರ್ಯಕ್ರಮವನ್ನಷ್ಟೇ ಜಾರಿಗೆ ತರಲು ಪ್ರಯತ್ನಿಸುತ್ತಿದ್ದೇವೆ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ನಾವು ಯಾವುದೇ ಸಮಾಜವಾದಿ ಅಥವಾ ಕಮ್ಯುನಿಸ್ಟ್ ಕಾರ್ಯಕ್ರಮವನ್ನು ಅನುಸರಿಸುತ್ತಿಲ್ಲ. ಇದನ್ನು ಅನುಸರಿಸುವುದು ಅರೆ ಊಳಿಗಮಾನ್ಯ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರ ನಮ್ಮ ದೇಶದ ಪ್ರಧಾನ ನೀತಿ ನಿರ್ಧಾರಕ ವಾಗಿರುವುದರಿಂದ ಒಂದು ರಾಜ್ಯ ಸರಕಾರಕ್ಕೆ ಖಂಡಿತಾ ಸಾಧ್ಯವಿಲ್ಲ. ಸಂವಿಧಾನವನ್ನು ರೂಪಿಸಿದ ರೀತಿಯೇ ಹಾಗಿದೆ.

❑ ಕಳೆದ 20 ವರ್ಷಗಳಲ್ಲಿ ಒಂದು ಸಮ್ಮಿಶ್ರ ಸರಕಾರವನ್ನು ನಡೆಸುವಲ್ಲಿ ಕಲಿತ ಪಾಠಗಳೇನು?



ನಾವೆಂದೂ ಹಿಂದೆ ಸತತವಾಗಿ 5 ಅವಧಿಗಳಲ್ಲಿ ಚುನಾವಣೆ ಗೆಲ್ಲುತ್ತೇವೆಂದು ನಿರೀಕ್ಷಿಸಿರಲಿಲ್ಲ. ಪ್ರತಿಯೊಂದು ಚುನಾವಣೆಯಲ್ಲಿ ವಿಜಯ ನಮಗೊಂದು ಹೊಸ ಅನುಭವವಾಗಿತ್ತು. ಎಡರಂಗದಲ್ಲಿ ಹತ್ತು ಪಕ್ಷಗಳಿವೆ. ಆದ್ದರಿಂದ ಸದಾ ಸಮಗ್ರ ಐಕ್ಯತೆಯ ನಿರೀಕ್ಷೆಯಿರುವುದಿಲ್ಲ. ಆದರ ಜತೆ ಜತೆಗೇ ಉಳಿದು ಕೊಂಡಿರುವ ಒಂದು ದೀರ್ಘ ಇತಿಹಾಸ ನಮಗಿದೆ. ನಾವು ಜತೆ-ಜತೆಗೇ ಹೋರಾಡಿದೆವು, ಜೈಲುಗಳಲ್ಲಿ ಜತೆಗೇ ಇದ್ದೆವು. ರಾಜಕೀಯ ಹೋರಾಟಗಳಲ್ಲಿ ಜತೆಗೇ ಕಷ್ಟ-ನಷ್ಟಗಳನ್ನು ಅನುಭವಿಸಿದೆವು. ಹಾಗೂ ವಿವಿಧ ಚುನಾವಣೆಗಳಲ್ಲಿ ಜತೆಗೇ ಭಾಗವಹಿಸಿದೆವು. ನಾವು ನಮ್ಮ ವಚನಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತೇವೆ, ಹೇಗೆ ನಮ್ಮ ವಚನಗಳನ್ನು ಪಾಲಿಸುತ್ತೇವೆ ಎಂಬುದನ್ನೀಗ ನಮ್ಮ ಜನ ನೋಡುತ್ತಿದ್ದಾರೆ. ನಾವು ಸದಾ ನಮ್ಮ ಜನರ ಜತೆ ನಿಂತಿದ್ದೇವೆ. ಹಿಂದೆ ಆಗಿನ ಆಳುವ ಪಕ್ಷ ಮತ್ತು ಸರಕಾರ ಹರಿಯ ಬಿಟ್ಟ ದಮನವನ್ನೂ, ಚಿತ್ರಹಿಂಸೆಯನ್ನೂ ನಾವು ಹೇಗೆ ಅನುಭವಿಸಿದೆವು ಎಂಬುದನ್ನು ವಿಚಾರಣೆಯಿಲ್ಲದೆ ಜೈಲುಗಳಲ್ಲಿದ್ದುದನ್ನೂ ಅವರು ನೋಡಿದ್ದಾರೆ. ನಮ್ಮ ಸಾವಿರಾರು ಸಂಗಾತಿಗಳು ಆಗಿನ ಆಳುವ ವರ್ಗದ ಅಮಾನುಷ ಕೃತ್ಯಗಳಿಗೆ ಬಲಿಯಾದರು. ಆದರೆ ನಾವೆಂದೂ ಶರಣಾಗತರಾಗಲಿಲ್ಲ. ಎಂದೂ ಹಿಂಜರಿಯಲಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಮ್ಮ ಸೀಮಿತ ಅಧಿಕಾರಗಳು ಮತ್ತು ಸಂಪನ್ಮೂಲಗಳ ಮಿತಿಯೊಳಗೆ ಜನಗಳ ಸೇವೆ ಮಾಡಲು ಸರ್ವಪ್ರಯತ್ನ ನಡೆಸಿದ್ದೇವೆ. ನಾವು ಜನರನ್ನೆಂದಿಗೂ ದಾರಿ ತಪ್ಪಿಸುವುದಿಲ್ಲ. ನಾವು ನಮ್ಮ ಮಿತಿಗಳನ್ನು, ಕಷ್ಟಗಳನ್ನು ಜನಗಳಿಗೆ ಹೇಳುತ್ತೇವೆ. ಕೆಲವೊಮ್ಮೆ ಅವರು ತಾವು ಎದುರಿಸಬೇಕಾದ ಒತ್ತಡಗಳು ಹಾಗೂ ಸಮಸ್ಯೆಗಳಿಂದಾಗಿ ನಮ್ಮನ್ನು ಅಪಾರ್ಥಮಾಡಿಕೊಳ್ಳುತ್ತಾರೆ. ಆದರೆ ಈ ಅಪಾರ್ಥವನ್ನು ಹೋಗಲಾಡಿಸಲು ಅವರೊಂದಿಗೆ ಸತತ ಮಾತುಕತೆ ಅಗತ್ಯ ಎಂದು ನಮ್ಮ ನಂಬಿಕೆ.

❑ ರಾಜ್ಯದಲ್ಲಿ ಕೈಗಾರಿಕೀಕರಣದ ಭವಿಷ್ಯವೇನು?



ಹಿಂದೆ 1977ರಲ್ಲಿ ನಾವು ಜನರ ಮುಂದಿಟ್ಟ ಒಂದು ಸಮಾನ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಅಧಿಕಾರಕ್ಕೆ ಬಂದೆವು. ಆ ಕಾರ್ಯಕ್ರಮದಲ್ಲಿ ಕೃಷಿ ಮತ್ತು ಕೈಗಾರಿಕಾ ರಂಗಗಳಲ್ಲಿನ ಬೆಳವಣಿಗೆಗೆ ನಾವು ಕೈಗೊಳ್ಳಬೇಕೆಂದಿದ್ದ ಕ್ರಮಗಳೂ ಇದ್ದವು. ಆದರೆ ದೊಡ್ಡ ಉದ್ದಿಮೆಗಳ ಕ್ಷೇತ್ರದಲ್ಲಿ ಕೇಂದ್ರ ಸರಕಾರದ ಪಕ್ಷಪಾತ ಧೋರಣೆಗಳಿಂದಾಗಿ ಬಹಳಷ್ಟು ಮುಂದುವರಿಯಲು ಸಾಧ್ಯವಾಗಲಿಲ್ಲ. ಕಳೆದ 3-4 ವರ್ಷಗಳಲ್ಲಿ ಸನ್ನಿವೇಶ ಬದಲಾಗುತ್ತಿದೆ. ದೇಶಾದ್ಯಂತ ಕೈಗಾರಿಕಾ ದೃಶ್ಯ ಅಷ್ಟೊಂದು ಉತ್ಸಾಹದಾಯಕವಾಗಿಲ್ಲ ಎಂದು ಇಲ್ಲಿ ಹೇಳಬೇಕಾಗುತ್ತದೆ. ಈಗ ಕೇಂದ್ರ ಸರಕಾರ ಅನುಸರಿಸುವ ಲೈಸೆನ್ಸ್ ರದ್ದತಿ ಧೋರಣೆ ದೊಡ್ಡ ರಾಜ್ಯಗಳಿಗೆ ಪ್ರಯೋಜನಕಾರಿ. ಸಾಗಾಣಿಕೆ ಸಮಾನೀಕರಣ ಯೋಜನೆಯನ್ನು ನಿಲ್ಲಿಸಿದ್ದೂ ನಮಗೆ ಪ್ರಯೋಜನ ಕೊಡಲಾರಂಭಿಸಿದೆ. 1977 ರಲ್ಲಿ ಅಧಿಕಾರಕ್ಕೆ ಬಂದಂದಿನಿಂದಲೂ ಇದನ್ನು ರದ್ದು ಮಾಡಬೇಕೆಂದು ನಾವು ಬೊಬ್ಬಿಡುತ್ತಿದ್ದೆವು. ಕೊನೆಗೂ ಹಿಂದಿನ ಕೇಂದ್ರ ಸರಕಾರ ಒಳಗಿಂದ ಮತ್ತು ಹೊರಗಿಂದ ಅದರ ಮೇಲೆ ಬಂದ ಒತ್ತಡಗಳಿಂದಾಗಿ ಈ ಧೋರಣೆಯನ್ನು ಬದಲಿಸಿತು. ಈ ಯೋಜನೆಯನ್ನು ರದ್ದು ಮಾಡಿದ್ದರಿಂದ ದೇಶೀ ಮತ್ತು ವಿದೇಶೀ ಹೂಡಿಕೆದಾರರು ರಾಜ್ಯದಲ್ಲಿ ಬಹಳಷ್ಟು ಆಸಕ್ತಿ ತೋರಿಸಲಾರಂಭಿಸಿದ್ದಾರೆ. ಇಲೆಕ್ಟ್ರಾನಿಕ್, ಪೆಟ್ರೋ ರಾಸಾಯನಿಕಗಳು ಮತ್ತು ಹಲವು ಇತರ ಆಧುನಿಕ ಉದ್ದಿಮೆಗಳನ್ನು ಹಾಕಲು ಕ್ರಮಗಳನ್ನು ಕೈಗೊಂಡಿದ್ದೇವೆ. ತೈಲ ಶುದ್ಧೀಕರಣಾಗಾರವನ್ನೂ ವಿಸ್ತರಿಸಲಾಗುತ್ತಿದೆ. ಹಲವು ಮಧ್ಯಮ ಗಾತ್ರದ ಹೊಸ ಉದ್ದಿಮೆಗಳೂ ಬರುತ್ತಿವೆ.

ಕೇವಲ ತಿಳುವಳಿಕೆ ಪತ್ರ(MoU) ಗಳಿಗೆ ಸಹಿ ಬೀಳುತ್ತಿದೆಯಷ್ಟೆ ಕೈಗಾರಿಕೀಕರಣ ನಡೆಯುವುದಿಲ್ಲ ಎಂದು ಕಾಂಗ್ರೆಸ್ ಪಕ್ಷ ಸಂಘಟಿತ ಪ್ರಚಾರ ನಡೆಸುತ್ತಿದೆ. ಆದರೆ ವಾಸ್ತವತೆ ಹೇಳುವ ಕಥೆಯೇ ಬೇರೆ. ಸುಮಾರು 30000 ಕೋಟಿ ರೂಗಳ ಪ್ರಸ್ತಾವಗಳನ್ನು ಪಡೆದಿದ್ದೇವೆ. ಈಗಾಗಲೇ 10,000 ಕೋಟಿ ರೂ. ಬೆಲೆ ಬಾಳುವ ಯೋಜನೆಗಳಲ್ಲಿ ಉತ್ಪಾದನೆ ಆರಂಭಿಸಲಾಗಿದೆ. ಮುಂದಿರುವ ಎಂಟು ವರ್ಷಗಳಲ್ಲಿ 10000 ಕೋಟಿ ರೂಗಳ ಯೋಜನೆಗಳು ಸಿದ್ಧವಾಗುತ್ತವೆ. ನಂತರದ ಘಟ್ಟದಲ್ಲಿ ಹಲವು ಹೊಸ ಯೋಜನೆಗಳನ್ನು ಸೇರಿಸಲಾಗಿದೆ. ನಾವು ಆಗಲೇ ಜಮೀನು ಪಡೆದು ಹೂಡಿಕೆದಾರರಿಗೆ ನೀಡುತ್ತಿದ್ದೇವೆ. ಉದ್ಯಮಿಗಳಿಗೆ ಕಲ್ಕತ್ತೆಯ ಬಳಿಯೇ ಸೈಟುಗಳು ಬೇಕು, ಆದರೆ ಎಲ್ಲಾ ಘಟಕಗಳನ್ನು ಈ ಪ್ರದೇಶಗಳಲ್ಲೇ ಹಾಕಲು ಸಾಧ್ಯವಿಲ್ಲ. ಆದ್ದರಿಂದ ಅವರಲ್ಲಿ ಬಹಳ ಮಂದಿಯನ್ನು ಜಿಲ್ಲೆಗಳಿಗೆ ಹೋಗುವಂತೆ ಕೇಳಿದ್ದೇವೆ. ಮೂಲ ಸೌಕರ್ಯಗಳನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಜಿಲ್ಲೆಗಳಲ್ಲಿ ಕೈಗಾರಿಕಾ ವಲಯಗಳನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ.

❑ ಮೂಲ ಸೌಕರ್ಯಗಳನ್ನು ಕಟ್ಟಿ ಬೆಳೆಸುವಲ್ಲಿ ರಸ್ತೆಗಳಿಗೆ ಆದ್ಯತೆ ದೊರೆಯುತ್ತಿದೆಯೇ?




ಹೌದು ನಮ್ಮ ಬಹಳಷ್ಟು ರಸ್ತೆಗಳು ಕೆಟ್ಟ ಸ್ಥಿತಿಯಲ್ಲಿವೆ. ಆದರೆ ಎಲ್ಲಾ ರಸ್ತೆಗಳನ್ನು ರಿಪೇರಿ ಮಾಡುವಷ್ಟು ಹಣ ನಮ್ಮಲ್ಲಿಲ್ಲ. ಆದ್ದರಿಂದ ಬಸ್ಸುಗಳು ಓಡಾಡುವ ಮತ್ತು ಮಹತ್ವದ ಕೈಗಾರಿಕಾ ಪ್ರದೇಶಗಳನ್ನು ಜೋಡಿಸುವ ರಸ್ತೆಗಳ ರಿಪೇರಿಗೆ ವಿಶೇಷವಾಗಿ ಆದ್ಯತೆ ನೀಡುತ್ತಿದ್ದೇವೆ.


ರಾಜ್ಯ ಸರಕಾರ ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮವನ್ನು ಜಾರಿಗೆ ತರಲು ಕೂಡಾ ಆದ್ಯತೆ ನೀಡುತ್ತಿದೆ. ಈ ರಂಗಗಳಲ್ಲಿ ನಿರ್ದಿಷ್ಟ ಸುಧಾರಣೆಗಳಾಗದೆ ಕೈಗಾರೀಕರಣ ಪ್ರಕ್ರಿಯೆ ತ್ವರಿತವಾಗಿಮುನ್ನಡೆಯಲಾರದು. ಮೂಲ ಸೌಕರ್ಯ ವಲಯದಲ್ಲಿ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಕರ್ತವ್ಯ.

❑ ಆಡಳಿತದಲ್ಲಿ ಜನಗಳನ್ನು ಒಳಗೊಳ್ಳುವ ಪ್ರಯತ್ನಗಳು ನಡೆದಿವೆ. ಎಷ್ಟರ ಮಟ್ಟಿಗೆ ಇವು ಯಶಸ್ವಿಯಾಗಿವೆ? ಈ ವರ್ಷಗಳಲ್ಲಿ ಅಧಿಕಾರಶಾಹಿ ಮತ್ತು ಪೋಲೀಸಿನ ಪಾತ್ರ ಏನಿತ್ತು?




ನಾವು ಅಧಿಕಾರಕ್ಕೆ ಬಂದಾಗ ಆರಂಭದಲ್ಲೇ ಸರಕಾರವನ್ನು ನಾವು 'ರೈಟರ್ಸ್ ಬಿಲ್ಡಿಂಗ್ಸ್'(ಪಶ್ಚಿಮ ಬಂಗಾಳದ ವಿಧಾನ ಸೌಧದ ಹೆಸರು) ನಿಂದ ನಡೆಸುವುದಿಲ್ಲ ಎಂದು ಹೇಳಿದ್ದೆವು. ನಾವು ಸರಕಾರೀ ಆಡಳಿತವನ್ನು ವಿಕೇಂದ್ರೀಕರಿಸುತ್ತೇವೆ ಹಾಗೂ ನಮ್ಮ ಕೆಲಸ ಕಾರ್ಯಗಳಲ್ಲಿ ಜನಗಳನ್ನು ಒಳಗೊಳ್ಳುತ್ತೇವೆ ಎಂದಿದ್ದೆವು. ನಮ್ಮ ಈ ವಚನವನ್ನು ಗಮನಾರ್ಹ ಮಟ್ಟಿಗೆ ನಾವು ಪಾಲಿಸಿದ್ದೇವೆ. ಪಂಚಾಯಿತು ಸಂಸ್ಥೆಗಳು, 121 ಮುನಿಸಿಪಾಲಿಟಿಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರತಿ ಐದು ವರ್ಷಗಳಿಗೊಮ್ಮೆ ಈ ಸಂಸ್ಥೆಗಳಿಗೆ ಚುನಾವಣೆ ನಡೆಯುತ್ತಿದೆ. ಈ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಈ ಸಂಸ್ಥೆಗಳು ನಿಷ್ಪ್ರಯೋಜಕವಾಗಿದ್ದವು. ವಿಕೇಂದ್ರೀಕೃತ ಪ್ರಜಾಸತ್ತಾತ್ಮಕ ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿ ಒಂದು ಎದ್ದು ಕಾಣುವ ಬದಲಾವಣೆಯನ್ನು ತಂದಿದೆ. ಆರಂಭದಲ್ಲಿ ಬಹಳಷ್ಟು ಕಷ್ಟಗಳು, ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿ ಬಂತು. ಹಿಂದಿನ ಆಳ್ವಿಕೆಯಿಂದ ಬಳುವಳಿ ಪಡೆದಿದ್ದ ಸಾಮಾನ್ಯ ಆಡಳಿತ ವ್ಯವಸ್ಥೆ ಮತ್ತು ಪೋಲೀಸ್ ನಮ್ಮ ವಿರುದ್ಧವೇ ಬಳಸಿದಂತವುಗಳು. ಅವರಿಗೀಗ ಮರುಶಿಕ್ಷಣ ನೀಡಿ ನಮ್ಮ ಕಾರ್ಯಕ್ರಮಗಳನ್ನು ಜಾರಿಗೊಳಿಸುವಂತೆ ಪರಿಣಾಕಾರಕಗೊಳಿಸ ಬೇಕಾಗಿತ್ತು. ಈ ಕಷ್ಟದ ಕೆಲಸದಲ್ಲಿ ಇದುವರೆಗೆ ನಾವು ಯಶಸ್ವಿಯಾಗಿದ್ದೇವೆ. ನಿಜ, ಅಪವಾದಗಳೂ ಇವೆ. ಏಕೆಂದರೆ ಹಳೆಯ ರೂಢಿ ಅಷ್ಟು ಬೇಗನೇ ಹೋಗುವುದಿಲ್ಲವಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ಜಿಲ್ಲಾ ಪರಿಷತ್ ಸಭಾಧಿಪತಿಗಳೊಂದಿಗೆ ಸಹಕರಿಸುತ್ತಾರೆಯೋ ಎಂದು ಸಂದೇಹ ನಮಗಿತ್ತು. ಆದರೆ ಈ ವಿಷಯದಲ್ಲಿ ನಮ್ಮ ಅನುಭವ ತೃಪ್ತಿಕರವಾಗಿದೆ. ನಾವು ಪೋಲೀಸ್ ಸಿಬ್ಬಂದಿಗೆ ಶಿಕ್ಷಣ ನೀಡಬೇಕಾಗಿತ್ತು. ಯಾವುದೇ ಪಕ್ಷಪಾತದ ನಿಲುವು ತಳೆಯಬೇಡಿ ಎಂದು ನಾವು ಅವರಿಗೆ ಹೇಳಿದೆವು. ಆರಂಭದಲ್ಲಿ ಅವರಿಗೆ ಕಷ್ಟಗಳಿದ್ದವು. ಏಕೆಂದರೆ ಹಿಂದಿನ ಆಳ್ವಿಕೆಯಲ್ಲಿ ಅವರ ಚಿತ್ರಹಿಂಸೆಗೊಳಗಾದವರು ಈಗ ಸರಕಾರ ನಡೆಸಲು ಬಂದಿದ್ದರು. ಆದರೆ, ಒಟ್ಟಾರೆಯಾಗಿ ಪೋಲೀಸ್ ಪಡೆ ಸರಿಯಾದ ದಾರಿಯಲ್ಲಿ ಇರುವಂತೆ ಮಾಡಲು ಸಾಧ್ಯವಾಗಿದೆ. ಆದರೆ ಕೆಲವು ಅಪವಾದಗಳೂ ಇವೆ. ಪೋಲೀಸ್ ಪಡೆಗೆ ತಮ್ಮ ಸಂಘಗಳನ್ನು ರಚಿಸಿಕೊಳ್ಳಲು ಅವಕಾಶ ನೀಡಿ ಅವರಿಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಕೊಟ್ಟಿದ್ದೇವೆ.






ಕಾಂಗ್ರೆಸ್ ಆಳ್ವಿಕೆಯಲ್ಲಿ ಸರಕಾರೀ ಅಧಿಕಾರಿಗಳು ಮತ್ತು ನೌಕರರನ್ನು ನಮ್ಮ ವಿರುದ್ಧ ವರ್ತಿಸುವಂತೆ ನಿರ್ದೇಶನಗಳನ್ನು ನೀಡಲಾಗುತ್ತಿತ್ತು. ನಮ್ಮ ನಿಲುವುಗಳು ಮತ್ತು ಪ್ರಚಾರಾಂದೋಲನಗಳಿಂದಾಗಿ ಬಹುಪಾಲು ಸರಕಾರಿ ನೌಕರರ ಬೆಂಬಲ ಗಳಿಸಲು ನಮಗೆ ಸಾಧ್ಯವಾಗಿದೆ.

❑ ಭವಿಷ್ಯದಲ್ಲಿ ಆದ್ಯತೆಯ ಕ್ಷೇತ್ರಗಳಾವುವು?




ಕೃಷಿ ಮತ್ತು ಕೃಷಿ ಸಂಬಂಧಿತ ಉದ್ದಿಮೆಗಳನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವುದರ ಮೇಲೆ ಒತ್ತು ನೀಡುತ್ತಿದ್ದೇವೆ. ನಾವು ನೀರಾವರಿ ಮತ್ತು ಬಹುಬೆಳೆ ಕಾರ್ಯಕ್ರಮಗಳು, ಆಹಾರ ಸಂಸ್ಕರಣಾ ಯೋಜನೆ ಇತ್ಯಾದಿಗಳಿಗೆ ಬಹಳಷ್ಟು ಗಮನ ನೀಡುತ್ತಿದ್ದೇವೆ. ಕೈಗಾರಿಕೀಕರಣದ ಮೇಲೆ ನಮ್ಮ ಆದ್ಯತೆಯ ಬಗ್ಗೆ ಎಲ್ಲರಿಗೂ ಗೊತ್ತಿದೆ. ಈ ರಂಗದಲ್ಲಿ ಖಂಡಿತಾ ಮುನ್ನಡೆಯುವ ಭರವಸೆ ನಮಗಿದೆ. ವರ್ಷಕ್ಕೆ 5 ಲಕ್ಷ ಉದ್ಯೋಗಾವಕಾಶಗಳನ್ನು ನಿರ್ಮಿಸುವ ಸಾಮರ್ಥ್ಯವುಳ್ಳ ಸ್ವಯಂ-ಉದ್ಯೋಗ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದೇವೆ.

❑ ಎಡರಂಗ ಸದಾ ಶಿಕ್ಷಣದ ಮೇಲೆ ಒತ್ತು ನೀಡಿದೆ. ನಿಮ್ಮ ಹೊಸ ಯೋಜನೆಗಳೇನು?




ನಾವು ಸದಾ ಶಿಕ್ಷಣದ ಪ್ರಸಾರದ ಅಗತ್ಯದ ಮೇಲೆ ಒತ್ತು ನೀಡಿದ್ದೇವೆ. ಹನ್ನೆರಡನೇ ತರಗತಿಯವರೆಗೆ ಉಚಿತ ಶಿಕ್ಷಣದ ವ್ಯವಸ್ಥೆಯನ್ನು ಮಾಡಿದ್ದೇವೆ. ಕಾಂಗ್ರೆಸ್ ಆಳ್ವಿಕೆಯಲ್ಲಿ ಅರಾಜಕತೆಯನ್ನೇ ಪರಿಯಬಿಟ್ಟಿದ್ದ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತೆ ಒಂದು ಆರೋಗ್ಯಕರ ವಾತಾವರಣವನ್ನು ತಂದಿದ್ದೇವೆ. ಪರೀಕ್ಷೆಗಳು ಈಗ ನಿಯಮಿತವಾಗಿ ನಡೆಯುತ್ತಿವೆ. ಹಲವು ಹೊಸ ಶಾಲೆ, ಕಾಲೇಜುಗಳನ್ನು ಆರಂಭಿಸಲಾಗಿದೆ. ರಾಜ್ಯದಲ್ಲಿ ಸಾಕ್ಷರತಾ ಆಂದೋಲನ ಪ್ರಗತಿ ಹೊಂದುತ್ತಿದೆ. ಇಂದಿನ ಅಗತ್ಯಗಳನ್ನು ಪೂರೈಸುವಂತೆ ಶಿಕ್ಷಣದ ಗುಣವನ್ನು ಮತ್ತಷ್ಟು ಉತ್ತಮ ಪಡಿಸಲು ಪ್ರಯತ್ನಗಳು ಸಾಗಿವೆ.

❑ ಕಳೆದ 20 ವರ್ಷಗಳಿಂದ ಕೇಂದ್ರ - ರಾಜ್ಯ ಸಂಬಂಧಗಳನ್ನು ಉತ್ತಮ ಪಡಿಸಬೇಕೆಂದು ನೀವು ಕೇಳುತ್ತಾ ಬಂದಿದ್ದೀರಿ, ಈಗಿನ ಪರಿಸ್ಥಿತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?



ನಾವು ಈ ಪ್ರಶ್ನೆಯನ್ನು ಕೈಗೆತ್ತಿಕೊಳ್ಳುವ ಮೊದಲು ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಯ ಮಾತೇ ಇರಲಿಲ್ಲ. ನಮ್ಮ ವ್ಯಾಪಕ ಪ್ರಚಾರಾಂದೋಲನಗಳ ಹಿನ್ನೆಲೆಯಲ್ಲಿ ಇಂದಿರಾಗಾಂಧಿ ಕೇಂದ್ರ - ರಾಜ್ಯ ಸಂಬಂಧಗಳ ಪ್ರಶ್ನೆಯನ್ನು ಪರಿಶೀಲಿಸಲು ಸರ್ಕಾರಿಯಾ ಆಯೋಗವನ್ನು ನೇಮಿಸಿದರು. ಈ ಆಯೋಗ ತನ್ನ ವರದಿಯನ್ನು [illegible]ಸಿದ ಮೇಲೆ ಹಿಂದಿನ ಕಾಂಗ್ರೆಸ್ ಸರಕಾರ ಅದನ್ನು ಬುಡಕ್ಕೆ ಹಾಕಿ ಕೂತಿತು. ಈಗ ಸಂಯುಕ್ತ ರಂಗ ಸರಕಾರ ಈ ವರದಿಯನ್ನು ಪರೀಕ್ಷಿಸುತ್ತಿದೆ. ಈ ಪ್ರಶ್ನೆಯ ಬಗ್ಗೆ ಅಂತರ-ರಾಜ್ಯ ಮಂಡಳಿಯಲ್ಲಿ ಚರ್ಚೆ ನಡೆದಿದೆ. ಒಂದು ಉಪ ಸಮಿತಿಯನ್ನು ರಚಿಸಲಾಗಿದೆ. ನಾನೂ ಅದರ ಒಬ್ಬ ಸದಸ್ಯ. ಒಂದು ಸರಿಯಾದ ಕೇಂದ್ರ-ರಾಜ್ಯ ಸಂಬಂಧವನ್ನು ಸ್ಥಾಪಿಸುವ ಒಂದು ಪ್ರಕ್ರಿಯೆ ಈಗ ಆರಂಭವಾಗಿದೆ.

❑ ನಿಮ್ಮ ಯಶಸ್ಸಿನ ಕಥೆ ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಎಷ್ಟರ ಮಟ್ಟಿಗೆ ಉತ್ಸಾಹವನ್ನುಂಟುಮಾಡಿದೆ?



ಕಳೆದೆರಡು ವರ್ಷಗಳಿಂದ ನಮ್ಮ ಯಶಸ್ಸಿನ ಕಥೆ ವಿದೇಶಗಳನ್ನು ತಲುಪುತ್ತಿದೆ. ಈ ಹಿಂದೆ ನಾವು ವಿದೇಶದಲ್ಲಿ ಪ್ರವಾಸ ಮಾಡಿದ್ದೆ. ಹಲವು ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದ್ದೆ. ಈ ಹಿಂದಿನ ಸ್ಥಳಗಳಲ್ಲಿ ಪಶ್ಚಿಮ ಬಂಗಾಳದ ಬಗ್ಗೆ ಏನೂ ಗೊತ್ತಿರಲಿಲ್ಲ, ಅವರಿಗೆ ಕಲ್ಕತ್ತೆಯ ಬಗ್ಗೆ ಆಸಕ್ತಿಯಿತ್ತು. ರಾಜ್ಯದ ನಕಾರಾತ್ಮಕ ಚಿತ್ರವನ್ನಷ್ಟೆ ನಮ್ಮ ವಿರೋಧಿಗಳು ಮತ್ತು ನಮ್ಮ ಬಗ್ಗೆ ವೈಷಮ್ಯವಿರುವ ಪತ್ರಿಕಾ ಮಾಧ್ಯಮದ ಒಂದು ವಿಭಾಗ ಅವರಿಗೆ ಕೊಟ್ಟಿದ್ದರು. ಇತ್ತೀಚೆಗೆ ದೃಷ್ಟಿಕೋನದಲ್ಲಿ ಬದಲಾವಣೆ ಕಂಡಿದೆ - ಭಾರತದಲ್ಲೂ, ಹೊರಗಡೆಯೂ. ದೇಶದೊಳಗೆ ನಮ್ಮ 20 ವರ್ಷಗಳ ಆಳ್ವಿಕೆಯ ಸಕಾರಾತ್ಮಕ ಅಂಶಗಳನ್ನು ಹೆಚ್ಚೆಚ್ಚಾಗಿ ಎತ್ತಿ ತೋರಿಸಲಾಗುತ್ತಿದೆ. ಇತ್ತೀಚಿನ ಸಮಯದಲ್ಲಿ ಹಲವು ವಿದೇಶಗಳೂ ನಮ್ಮ ವ್ಯವಹಾರಗಳಲ್ಲಿ ಆಸಕ್ತಿ ವಹಿಸುತ್ತಿವೆ. ಏಕೆಂದರೆ ಇತ್ತೀಚೆಗೆ ಆ ದೇಶಗಳು ಮತ್ತು ನಮ್ಮ ರಾಜ್ಯದ ನಡುವೆ ಹೆಚ್ಚೆಚ್ಚು ಕೈಗಾರಿಕಾ ಮತ್ತು ಇತರ ನಿಯೋಗಗಳ ವಿನಿಮಯ ನಡೆಯುತ್ತಿದೆ. ಅಲ್ಲದೆ ವಿವಿಧ ಹಂತಗಳಲ್ಲಿ ಪರಸ್ಪರ ಕ್ರಿಯೆಯ ಮೇಲೆ ಹೆಚ್ಚು ಒತ್ತು ನೀಡುತ್ತಿದ್ದೇವೆ. ಇಂದು ವಿದೇಶಗಳು ವಿಶೇಷವಾಗಿ ಈ ಹಿಂದೆ ದೀರ್ಘಕಾಲ ಒಂದು ವೈರತ್ವಪೂರ್ಣ ಸರಕಾರ ಅಧಿಕಾರದಲ್ಲಿದ್ದರೂ ನಾವು ನಿರಂತರವಾಗಿ 20 ವರ್ಷಗಳ ಕಾಲ ಸರಕಾರ ನಡೆಸುವುದು ಹೇಗೆ ಸಾಧ್ಯವಾಯಿತು ಎಂದು ತಿಳಿಯಲು ಆಸಕ್ತವಾಗಿವೆ.

❑ ಪಶ್ಚಿಮ ಬಂಗಾಳದಲ್ಲಿ ಕೋಮುವಾದಿ ಶಕ್ತಿಗಳಿಂದ ಏನಾದರೂ ಅಪಾಯವಿದೆಯೇ?



ಪಶ್ಚಿಮ ಬಂಗಾಳದಲ್ಲಿ ಕೋಮು ವೈಷಮ್ಯ ಇಲ್ಲ ಎಂಬುದು ದೇಶದೆಲ್ಲಾ ಜನರಿಗೆ ಗೊತ್ತು. ಆದರೆ ಉತ್ತರ ಭಾರತ ಮತ್ತು ಇನ್ನೂ ಕೆಲವು ಕಡೆ ಬಿಜೆಪಿಯ ಉನ್ನತಿಯೊಂದಿಗೆ ಪರಿಸ್ಥಿತಿ ಒಂದು ಅಪಾಯಕಾರಿ ತಿರುವು ಪಡೆಯುತ್ತಿದೆ. ಆದ್ದರಿಂದ ಈ ಸ್ಥಳಗಳಲ್ಲಿ ಬೆಳೆಯುತ್ತಿರುವ ಪ್ರವೃತ್ತಿಯ ಯಾವುದೇ ದುಷ್ಟ ಪ್ರಭಾವ ಇಲ್ಲಿ ಬೀಳದಂತೆ ಎಚ್ಚರದಿಂದಿರಬೇಕಾಗುತ್ತದೆ.

❑ ಈಗಲೂ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ 40% ಮತ ಏಕೆ ಪಡೆಯುತ್ತದೆ?



ಕಾಂಗ್ರೆಸ್ ಈಗಲೂ 40% ಮತಗಳಿಸುತ್ತದೆಂಬುದು ನಿಜ. ಹಳೆಯ ಮತದಾರರಿಗೆ ನಮ್ಮ ಮೇಲೆ ಎಷ್ಟು ದಮನ ನಡೆಯಿತು, ಎಂತಹ ಭಯಾನಕ ವಾತಾವರಣದಲ್ಲಿ ನಾವು ಕಾಂಗ್ರೆಸ್ ಆಳ್ವಿಕೆಯಲ್ಲಿ ಇರಬೇಕಾಗಿತ್ತು ಎಂದು ಗೊತ್ತಿದೆ. ಆದರೆ 1977 ರ ಸುತ್ತಮುತ್ತ ಹುಟ್ಟಿದವರಿಗೆ ಈಗ 20 ವರ್ಷವಷ್ಟೆ. ಅವರು ಕಾಂಗ್ರೆಸ್ಸಿನ ದಮನಕಾರೀ ಆಳ್ವಿಕೆಯ ಬಗ್ಗೆ ಕೇಳಿದ್ದಾರಷ್ಟೆ. ಯಾವುದೇ ವೈಯಕ್ತಿಕ ಅನುಭವ ಅವರಿಗಿಲ್ಲ. ಅವರಲ್ಲಿ ಕೆಲವರನ್ನು ಕಾಂಗ್ರೆಸ್‌ಗೆ ಮತ ಹಾಕುವಂತೆ ದಾರಿ ತಪ್ಪಿಸಲಾಗುತ್ತಿದೆ. ರಾಜ್ಯದಲ್ಲಿನ ಈ ಪ್ರಧಾನ ಪ್ರತಿಪಕ್ಷ ರಾಜ್ಯ ಸರಕಾರದ ಪತೋಟಿಯಲ್ಲಿರದ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಲು ಪ್ರಯತ್ನಿಸುತ್ತಿದೆ. ಮೂಲಭೂತ ಬದಲಾವಣೆಗಳನ್ನು ತರುವ, ಜನಗಳ ಎಲ್ಲಾ ಅಗತ್ಯಗಳನ್ನು ಪೂರೈಸುವ ಅಧಿಕಾರಗಳು ನಮಗೆ ಇಲ್ಲ ಎಂದು ಮನವರಿಕೆ ಮಾಡಿಸಲು ನಾವು ಸದಾ ಪ್ರಯತ್ನ ನಡೆಸಿದ್ದೇವೆ. ಸ್ಥಳೀಯ ಪ್ರಶ್ನೆಗಳಿಂದಾಗಿ ನಮ್ಮ ವಿರುದ್ಧ ಮತ ಹಾಕುವಂತೆ ಸತತ ಪ್ರಯತ್ನವೂ ನಡೆಯುತ್ತಿದೆ. ನಮ್ಮ ಕೆಲವು ಜನಗಳ ವರ್ತನೆ, ನಿಲುವುಗಳೂ ಕೆಲವರಿಗೆ ನೋವುಂಟು ಮಾಡುತ್ತವೆ. ಆದ್ದರಿಂದ ಅವರು ನಮ್ಮ ವಿರುದ್ಧ ಮತ ನೀಡುತ್ತಾರೆ. ನಾವು ಸದಾ ಜನರ ಮನ ಗೆಲ್ಲಲು ಪ್ರಯತ್ನಿಸಬೇಕು.

ನಮ್ಮ ವರ್ತನೆ, ಚಟುವಟಿಕೆಗಳಲ್ಲಿ ನಾವು ಜಾಗರೂಕರಾಗಿರಬೇಕು. ಅಲ್ಲದೆ, ಕೆಲವು ಕಾಂಗ್ರೆಸ್ಸಿನ ಪಾರಂಪರಿಕ ಮತದಾರರಿದ್ದಾರೆ. ನಮ್ಮ ಮಟ್ಟಿಗೆ ನಾವು ಎಚ್ಚರದಿಂದಿರುವುದು ಹಾಗೂ ಜನಗಳೊಂದಿಗೆ ಇರುವುದು ಬಹಳ ಮಹತ್ವದ್ದು. ಕಾಂಗ್ರೆಸ್ ಪಕ್ಷ ನಮ್ಮ ವಿರುದ್ಧ ನಡೆಸಿರುವ ತಪ್ಪು ಅಪಪ್ರಚಾರವನ್ನು ಎದುರಿಸುವುದೂ ಅಗತ್ಯ. ಜನರಿಗೆ ಸರಿಯಾದ ಸಂದೇಶ ತಲುಪುವಂತೆ ನೋಡಿಕೊಂಡು ಯಾವುದೇ ನಿರ್ದಿಷ್ಟ ಕಾರ್ಯಕ್ರಮ ಇಲ್ಲದ ಕಾಂಗ್ರೆಸ್ ಅವರನ್ನು ದಾರಿ ತಪ್ಪಿಸದಂತೆ ನೋಡಿಕೊಳ್ಳಬೇಕು. ಕಾಂಗ್ರೆಸ್ ತನ್ನೊಳಗೇ ಒಡೆದಿರುವ ಒಂದು ಪಕ್ಷ. ಅದರ ಮುಖಂಡರು ಭ್ರಷ್ಟರು. ಆದರೆ ದಾರಿತಪ್ಪಿಸುವ ಪ್ರಚಾರ, ಅದಕ್ಕೆ ಕೆಲವು ಪತ್ರಿಕೆಗಳ ನೆರವು ಕೆಲವೊಮ್ಮೆ ಕೆಲಸ ಮಾಡುತ್ತದೆ. ಉದಾಹರಣೆಗೆ, ನಾವು 1996 ರಲ್ಲಿ ಹಲ್ದಿಯಾ (5000 ಕೋಟಿ ರೂಗಳ ಪೆಟ್ರೋ ರಾಸಾಯನಿಕ ಸ್ಥಾವರ ನಿರ್ಮಾಣಗೊಳ್ಳುತ್ತಿರುವ ಜಾಗ)ದಲ್ಲಿ ಅಸೆಂಬ್ಲಿ ಚುನಾವಣೆಯಲ್ಲಿ ಸೋಲಲು ಕಾಂಗ್ರೆಸ್ ಮತ್ತು ಕೆಲವು ಪತ್ರಿಕೆಗಳು ಮಾಡಿದ ದುರುದ್ದೇಶಪೂರ್ಣ ಪ್ರಚಾರ ಕಾರಣ. ಆದರೆ ಈ ಬಾರಿ ಅಲ್ಲಿ ಮುನಿಸಿಪಲ್ ಚುನಾವಣೆಗಳಲ್ಲಿ ನಾವು ಗೆದ್ದೆವು. ಏಕೆಂದರೆ ಹಲ್ದಿಯಾ ಪೆಟ್ರೋರಾಸಾಯನಿಕ ಸಂಕೀರ್ಣದ ಕೆಲಸ ತ್ವರಿತವಾಗಿ ನಡೆಯುತ್ತಿರುವುದನ್ನು ಜನ ನೋಡಿದರು. ಹೀಗೆ ಬಹಳಷ್ಟು ಬೆಳವಣಿಗೆಗಳಾಗುತ್ತಿವೆ.

ಪತ್ರಿಕೆಗಳ ಪಾತ್ರವನ್ನು ಗಮನಕ್ಕೆ ತಗೊಳ್ಳಬೇಕು. ಪಶ್ಚಿಮ ಬಂಗಾಳದಲ್ಲಿ ಕೆಲವು ದೊಡ್ಡ ಪತ್ರಿಕೆಗಳು ನಮ್ಮ ವಿರುದ್ಧ ಪಕ್ಷಪಾತಪೂರ್ಣ, ಮಿಥ್ಯಾಪವಾದ ಅಪಪ್ರಚಾರ ನಡೆಸುತ್ತಲೇ ಇವೆ. ಪ್ರತೀ ಚುನಾವಣೆಯ ಮೊದಲು ಅವು ಎಡರಂಗ ಸೋಲುತ್ತದೆ ಎಂದು ಭವಿಷ್ಯ ನುಡಿದು ಜನಗಳನ್ನು ದಾರಿತಪ್ಪಿಸಲು ಪ್ರಯತ್ನಿಸುತ್ತವೆ. ವಿಕೃತ ಅಭಿಪ್ರಾಯ ಸಂಗ್ರಹಣೆಗಳನ್ನು ಪ್ರಕಟಿಸುತ್ತವೆ. ಆದರೆ ಕೊನೆಗೆ, ನಾವು ಗೆಲ್ಲುತ್ತೇವೆ. ಮುಂದಿನ ವರ್ಷದ ಪಂಚಾಯತುಗಳಿಗೆ ಚುನಾವಣೆ ನಡೆಯುತ್ತದೆ. ಎಂದಿನಂತೆ ಅವರೀಗ ನಮ್ಮ ವಿರುದ್ಧ ಕಿಡಿಗೇಡಿ ಅಪಪ್ರಚಾರ ಆರಂಭಿಸಿದ್ದಾರೆ. ಒಂದು ವಿಭಾಗದ ಜನರನ್ನು ಅದರಿಂದ ದಾರಿತಪ್ಪಿಸಬಹುದೆಂದು ಅವರ ಎಣಿಕೆ. ಆದರೆ ಪಶ್ಚಿಮಬಂಗಾಳದ ಬಹಳಷ್ಟು ಜನ ಸಮೂಹಗಳು ರಾಜಕೀಯವಾಗಿ ಪ್ರಜ್ಞಾಶೀಲರಾದ ಮಂದಿ. ಅವರು ನಮಗೆ ಬೆಂಬಲ, ಸಹಕಾರ ನೀಡುತ್ತಾರೆ. ಆದರೂ ನಮ್ಮ ಜನಗಳ ಪ್ರಜ್ಞೆಯನ್ನು ಇನ್ನಷ್ಟು ಮೇಲಕೆತ್ತುವ ಜವಾಬ್ದಾರಿ ನಮಗಿದೆ. ಈ ಮೂಲಕ ನಮ್ಮ ವಿರುದ್ಧ ನಡೆಯುವ ಪ್ರಯತ್ನಗಳನ್ನೆಲ್ಲಾ ಸೋಲಿಸಲು ಪತ್ರಿಕೆಗಳ ಒಂದು ವಿಭಾಗದ ನಕಾರಾತ್ಮಕ ಪಾತ್ರವನ್ನು ಬಯಲಿಗೆಳೆಯಬೇಕಾಗಿದೆ. ಈ ವಿಷಯದಲ್ಲಿ ನಮ್ಮ ಪಕ್ಷದ ಪತ್ರಿಕೆಗಳಿಗೆ ನಿರ್ದಿಷ್ಟ ಪಾತ್ರವಿದೆ.

❑ ಇಂದು ದೊಡ್ಡ ಪಕ್ಷಗಳಲ್ಲಿ ರಾಜಕೀಯ ನೈತಿಕತೆ ಇಲ್ಲದಿರುವುದನ್ನು ಕಾಣುತ್ತಿದ್ದೇವೆ. ಈ ಬಗ್ಗೆ ನಿಮ್ಮ ಟಿಪ್ಪಣಿಯೇನು?



ಇಂದಿನ ಪರಿಸ್ಥಿತಿ ಬಹಳ ದುರದೃಷ್ಟಕರ. ಸ್ವಾತಂತ್ರ್ಯದ 50 ವರ್ಷಗಳ ನಂತರವೂ ಚುನಾವಣಾ ಆಯೋಗ ಕೆಲವು ರಾಜಕೀಯ ಪಕ್ಷಗಳ ಆಂತರಿಕ ಚುನಾವಣೆಗಳಲ್ಲಿ ಮಧ್ಯಪ್ರವೇಶ ಮಾಡಬೇಕಾಗಿ ಬರುತ್ತಿದೆ. ಅವು ಸಾಮಾನ್ಯವಾಗಿ ಚುನಾವಣೆಗಳನ್ನು ನಡೆಸುವುದೇ ಇಲ್ಲ. ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ಏನೇನೂ ಗೌರವವಿಲ್ಲ, ರಾಜಕೀಯ ನೈತಿಕತೆಯಲ್ಲೂ ವಿಶ್ವಾಸವಿಲ್ಲ. ಇಂತಹ ದೇಶದ ಪ್ರಗತಿಗೆ ಮಾರಕವಾದ ಶಕ್ತಿಗಳನ್ನು ದೂರಮಾಡಲು ಸರಿಯಾಗಿ ಯೋಚಿಸುವ ಜನಗಳೆಲ್ಲಾ ಒಟ್ಟಾಗಿ ಕ್ರಿಯಾಶೀಲರಾಗಬೇಕು.

❑ ನೀವು 1977 ರಿಂದ ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳಾಗಿದ್ದೀರಿ. ದೇಶದ ಬೇರಾವ ರಾಜಕೀಯ ಮುಖಂಡರಿಗೂ ಈ ಅನುಭವವಿಲ್ಲ. ನೀವು ಹಲವು ಮುಖ್ಯ ಘಟನೆಗಳನ್ನು ನೋಡಿದ್ದೀರಿ, ಅವುಗಳನ್ನು ಕೆಲವನ್ನು ತಿಳಿಸುತ್ತೀರಾ?



ನಿಜ, ಕಳೆದ ಇಪ್ಪತ್ತು ವರ್ಷಗಳಲ್ಲಿ ನಾನು ಹಲವು ಪ್ರಮುಖ ಅನುಭವಗಳ ಮೂಲಕ ಹಾದು ಬಂದಿದ್ದೇನೆ. ಆ ಪಟ್ಟಿ ಬಹಳ ದೊಡ್ಡದು. ನಾನು ಹೇಳಬಹುದಾದ್ದೆಂದರೆ ಜನ ನಮ್ಮನ್ನು ಬೃಹತ್ ಪ್ರಮಾಣದಲ್ಲಿ ಬೆಂಬಲಿಸುತ್ತಾ ಬಂದಿದ್ದಾರೆ. ಅವರ ಎಂದೆಂದಿಗೂ ಹಿಂಜರಿಯದ ಸಹಕಾರದಿಂದಾಗಿ ನಾವು ಹಲವು ಅಡೆ-ತಡೆಗಳನ್ನು ದಾಟಿ ಬರಲು ಸಾಧ್ಯವಾಗಿದೆ. ಅವರ ಮನೋಬಲವೂ ಸದಾ ಉನ್ನತವಾಗಿದೆ. 1978 ರಲ್ಲಿ ರಾಜ್ಯದ ಬಹುಭಾಗವನ್ನು ಅಲ್ಲೋಲ ಕಲ್ಲೋಲ ಮಾಡಿದ ಪ್ರವಾಹದ ವೇಳೆಯಲ್ಲಿ ನಮ್ಮ ಜನರ ಧೈರ್ಯ, ದೃಢತೆ ಹಾಗೂ ಪುಟಿದೇಳುವ ಶಕ್ತಿ ನನ್ನನ್ನು ದಂಗುಬಡಿಸಿತು. ಜನಗಳ ಸಾಮಾಜಿಕ ಬದ್ಧತೆಯ, ಉನ್ನತ ಧ್ಯೇಯಗಳಿಗೆ ಸಮರ್ಪಣೆಯ, ದೀರ್ಘ ಹೋರಾಟವನ್ನು ನಡೆಸುವ ದೃಢ ನಿರ್ಧಾರದ ಭಾವನೆಯನ್ನು ಸೂಚಿಸುವ ಹಲವಾರು ಉದಾಹರಣೆಗಳನ್ನು ವಿವಿಧ ಜನವಿಭಾಗಗಳೊಂದಿಗೆ ನನ್ನ ವೈಯಕ್ತಿಕ ಸಂಪರ್ಕದಿಂದ ನಾನು ನೀಡಬಲ್ಲೆ.

ರಾಜಕೀಯ ವಲಯದಲ್ಲಿ ಒಂದು ಉದಾಹರಣೆಯನ್ನು

"ನಾವು ಪೋಲೀಸ್ ಸಿಬ್ಬಂದಿಗೆ ಶಿಕ್ಷಣ ನೀಡಬೇಕಾಗಿತ್ತು. ಯಾವುದೇ ಪಕ್ಷಪಾತದ ನಿಲುವು ತಳೆಯಬೇಡಿ ಎಂದು ನಾವು ಅವರಿಗೆ ಹೇಳಿದೆವು. ಆರಂಭದಲ್ಲಿ ಅವರಿಗೆ ಕಷ್ಟಗಳಿದ್ದವು. ಏಕೆಂದರೆ ಹಿಂದಿನ ಆಳ್ವಿಕೆಯಲ್ಲಿ ಅವರ ಚಿತ್ರಹಿಂಸೆಗೊಳಗಾದವರು ಈಗ ಸರಕಾರ ನಡೆಸಲು ಬಂದಿದ್ದರು."

ವಿರೋಧ ಪಕ್ಷದ ಮುಖಂಡರಾಗಿ ಜ್ಯೋತಿ ಬಸು ಪೋಲೀಸ್ ವ್ಯಾನಿನಲ್ಲಿ



ಕೊಡಬಯಸುತ್ತೇನೆ. ಇಂದಿರಾಗಾಂಧಿಯವರ ಹತ್ಯೆ ನಡೆದಕೂಡಲೇ ನಮ್ಮ ರಾಜ್ಯದಲ್ಲಿ ಗಲಭೆ ಎಬ್ಬಿಸುವ ಪ್ರಯತ್ನಗಳು ನಡೆದವು. ಆ ದುರಂತ ನಡೆದಾಗ ನಾನು ಮದ್ರಾಸಿನಲ್ಲಿದ್ದೆ. ಬೇಗನೇ ನಾನು ದಿಲ್ಲಿ ತಲುಪಿದೆ. ಆಗ ನನಗೆ ರಾಜೀವಗಾಂಧಿ ಅಷ್ಟಾಗಿ ಪರಿಚಿತರಿರಲಿಲ್ಲ. ಆದರೆ ಅವರು ನನ್ನನ್ನು ಭೇಟಿ ಮಾಡ ಬಯಸಿದರು. ಆಗ ದಿಲ್ಲಿಗೆ ಬೆಂಕಿ ಹತ್ತಿಕೊಂಡಿತ್ತು. ಸಿಖ್ಖರ ಮೇಲೆ ಧಾಳಿಗಳನ್ನು ತಡೆಯಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಅವರಿಗೆ ಹೇಳಿದೆ. 3000 ಸಿಖ್ಖರು ಕೊಲೆಯಾಗಿದ್ದರು. ಪಶ್ಚಿಮಬಂಗಾಳದ ಪರಿಸ್ಥಿತಿಯ ಬಗ್ಗೆ ತಮ್ಮ ಪಕ್ಷದ ಜನಕ್ಕೆ ಗಲಭೆ ಎಬ್ಬಿಸದಂತೆ ಹೇಳಿ ಎಂದು ರಾಜೀವ ಗಾಂಧಿಯವರನ್ನು ಕೇಳಿದೆ. ನಾವು ಯಶಸ್ವಿಯಾಗಿ ಪರಿಸ್ಥಿತಿಯನ್ನು ಎದುರಿಸಿ, ತಕ್ಷಣ ಸಾಮಾನ್ಯ ಪರಿಸ್ಥಿತಿ ಬರುವಂತಾಯಿತು. ಒಂದು ಬೃಹತ್ ಶಾಂತಿ ಮೆರವಣಿಗೆ ಸಂಘಟಿಸಿದೆವು. ಅದರಲ್ಲಿ 50 ಸಾವಿರ ಮಂದಿ ಭಾಗವಹಿಸಿದರು. ಇದನ್ನು ದೂರದರ್ಶನ ಏಕೆ ಪ್ರಸಾರ ಮಾಡಲಿಲ್ಲ ಎಂದು ಆಗ ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗಿದ್ದ ಶ್ರೀ ಹೆಚ್.ಕೆ.ಎಲ್.ಭಗತ್‌ರನ್ನು ಕೇಳಿದೆ. ಅವರು ನುಣುಚಿಕೊಳ್ಳುವ ಉತ್ತರ ಕೊಟ್ಟರು. ಈ ಶಾಂತಿಯಾತ್ರೆ ದೊಡ್ಡ ರೀತಿಯಲ್ಲಿ ಯಶಸ್ವಿಯಾಯಿತು. ಹಲವು ಗಂಭೀರ ಸಂದರ್ಭಗಳಲ್ಲಿ ತೊಂದರೆಗಳನ್ನು ಪರಿಹರಿಸಲು ನಾನು ವೈಯಕ್ತಿಕವಾಗಿ ಜನಗಳನ್ನು ಭೇಟಿ ಮಾಡಬೇಕಾಗಿ ಬಂದಿದೆ.

ನಾವು ಹಲವು ವಲಯಗಳಲ್ಲಿ ಯಶಸ್ಸು ಗಳಿಸಿದ್ದೇವೆ. ಆದರೆ ಸಂತೃಪ್ತರಾಗಿ ಕೂಡಲು ಕಾರಣವಿಲ್ಲ. ಸಮರ್ಪಿತ ಪ್ರಯತ್ನಗಳಿಂದ ನಮ್ಮ ಜನಗಳಿಗಾಗಿ ಇನ್ನಷ್ಟು ಉತ್ಸಾಹದಿಂದ ಶ್ರಮಿಸಲು ನಾವು ದೃಢ ನಿರ್ಧಾರ ಮಾಡಿ ನಿಂತಿದ್ದೇವೆ. ❑

ಈಗ ಭಾರತದ ಆರ್ಥಿಕ ರಂಗದಲ್ಲಿ ಬಹಳ ಚರ್ಚೆಯಲ್ಲಿರುವ ವಿಷಯದ ಬಗ್ಗೆ ನಾವು ತಿಳಿದಿರಬೇಕಾದ ಕೆಲವು ಸಂಗತಿಗಳು

ಪೂರ್ಣ ಪರಿವರ್ತನೀಯತೆ ಎಂದರೆ..............

ಭಾರತದೊಳಗೆ ಏನನ್ನು ಕೊಳ್ಳುವುದಾದರೂ ನಮ್ಮ ದೇಶದ ನಾಣ್ಯವಾದ ರೂಪಾಯಿಯನ್ನು ಬಳಸಬಹುದು. ಅದೇ ನಾವು ಬ್ರಿಟನ್ನಿನಿಂದಲೋ ಅಮೇರಿಕಾದಿಂದಲೋ, ಜಪಾನಿನಿಂದಲೋ, ದ.ಕೊರಿಯಾದಿಂದಲೋ ಏನನ್ನಾದರೂ ಕೊಳ್ಳುವುದಾದರೆ ರೂಪಾಯಿಯನ್ನು ಬಳಸುವಂತಿಲ್ಲ. ಯಾಕೆಂದರೆ ಆ ದೇಶಗಳ ನಾಣ್ಯ ಬೇರೆ ಬೇರೆ ಇರುತ್ತದೆ. ಅವರ ನಾಣ್ಯವನ್ನು ಉಪಯೋಗಿಸಿ ಅಲ್ಲಿ ನಮಗೆ ಬೇಕಾದ್ದನ್ನು ಕೊಳ್ಳಬಹುದು: ಅವರ ನಾಣ್ಯ ವನ್ನು ನಾವು ರೂಪಾಯಿ ಕೊಟ್ಟುಕೊಳ್ಳಬಹುದು. ಯಾಕೆಂದರೆ ಆ ದೇಶಗಳವರು ನಮ್ಮ ದೇಶದಿಂದ ಏನನ್ನಾದರೂ ಕೊಳ್ಳಬೇಕಾದರೆ ರೂಪಾಯಿ ಬಳಸಬೇಕಲ್ಲವೇ? ಆದ್ದರಿಂದ ರೂಪಾಯಿ ಪಡೆದು ಅವರ ನಾಣ್ಯವನ್ನು ಅವರು ನಮಗೆ ಮಾರುತ್ತಾರೆ.

ವಿನಿಮಯ ದರ ಅಂದರೆ...

ಒಂದು ನಾಣ್ಯದಿಂದ ಇನ್ನೊಂದು ನಾಣ್ಯವನ್ನು ಯಾವ ದರದಲ್ಲಿ ವಿನಿಮಯ ಮಾಡಿಕೊಳ್ಳಬಹುದೋ ಅದನ್ನೇ ವಿನಿ ಮಯ ದರ ಎನ್ನುತ್ತೇವೆ. ಉದಾಹರಣೆಗೆ ಒಂದು ಅಮೇರಿಕದ ಡಾಲರಿನ ವಿನಿಮಯ ಬೆಲೆ 35 ರೂಪಾಯಿಗಳು.

ಸರಳವಾಗಿ ಹೇಳುವುದಾದರೆ ಒಂದು ನಾಣ್ಯದ ವಿನಿಮಯ ದರ ವಿದೇಶಗಳಲ್ಲಿ ಅದರ ಕೊಳ್ಳುವ ಸಾಮರ್ಥ್ಯವನ್ನು ಅಭಿವ್ಯಕ್ತಗೊಳಿಸುತ್ತದೆ.

ಈಗ ಮುಖ್ಯ ಪ್ರಶ್ನೆ ಏನೆಂದರೆ ಈ ವಿದೇಶೀ ವಿನಿಮಯ ದರವನ್ನು ಯಾರು ಮತ್ತು ಹೇಗೆ ನಿರ್ಧರಿಸುವರು? ಒಂದು ನಾಣ್ಯದ ಸಾಮರ್ಥ್ಯ ನಿರ್ಧಾರವಾಗುವುದು ಆ ದೇಶ ವಿದೇಶೀ ವ್ಯಾಪಾರದಲ್ಲಿ ಎಷ್ಟು ಪ್ರಬಲವಾಗಿದೆ ಎನ್ನುವುದರ ಮೇಲೆ ಮುಖ್ಯವಾಗಿ ಅವಲಂಬಿಸಿರುತ್ತದೆ. ಆಮದಿಗಿಂತ ರಫ್ತು ಹೆಚ್ಚಾಗಿ ಮಾಡುವ ದೇಶ ಹೆಚ್ಚು ವಿದೇಶೀವಿನಿಮಯವನ್ನು ಹೊಂದಿರುತ್ತದೆ. ಆದ್ದರಿಂದ ಆ ದೇಶಕ್ಕೆ ಬೇರೆ ದೇಶಗಳ ಹಂಗಿಲ್ಲ. ಅದರ ನಾಣ್ಯದ ಬೆಲೆ ಹೆಚ್ಚಾಗಿರುತ್ತದೆ. ಇದಲ್ಲದೆ ಆ ದೇಶದ ಹಣಕಾಸು ನೀತಿ, ಬಂಡವಾಳದ ಚಲನವಲನ ಮತ್ತು ಸಟ್ಟಾ ವ್ಯವಹಾರಗಳ ಮೇಲೂ ಇದು ಅವಲಂಬಿತವಾಗಿರುತ್ತದೆ.

ವಿನಿಮಯ ದರ ಪದ್ಧತಿಗಳು

ಸಾಮಾನ್ಯವಾಗಿ ಮೂರು ತರಹದ ವಿದೇಶೀ ವಿನಿಮಯ ದರವಿರುತ್ತದೆ:

1. ನಿರ್ದಿಷ್ಟವಾದ ದರ. ಇದನ್ನು ಆಯಾ ದೇಶದ ಕೇಂದ್ರೀಯ ಬ್ಯಾಂಕ್ (ಅಂದರೆ ನಮ್ಮ ರಿಸರ್ವ್ ಬ್ಯಾಂಕಿನಂತಹ ಬ್ಯಾಂಕು) ನಿರ್ಧರಿಸುತ್ತದೆ. ವಿದೇಶೀ ವಿನಿಮಯ ನಿಯಂತ್ರಿತ ಸರಕಾಗುತ್ತದೆ. ವಿದೇಶೀ ವಿನಿಮಯವನ್ನು ಒಳಗೊಳ್ಳುವ ಎಲ್ಲಾ ವ್ಯವಹಾರಗಳನ್ನು ಒಂದಲ್ಲ ಒಂದು ರೀತಿಯಲ್ಲಿ ನಿಯಂತ್ರಿಸುತ್ತದೆ. ಇಂದಿನ ಅಭಿವೃದ್ಧಿ ಹೊಂದಿದ ದೇಶಗಳೂ ಒಂದು ಹಂತದಲ್ಲಿ ಇಂತಹ ನಿಯಂತ್ರಣಗಳನ್ನು ಹೊಂದಿದ್ದವು. ವಿದೇಶೀ ವ್ಯಾಪಾರ ದುರ್ಬಲವಾಗಿದ್ದು ವಿದೇಶೀ ವಿನಿಮಯದ ಶಿಲ್ಕಿನ ಕೊರತೆ ದೇಶಗಳು ಇರುವ ವಿದೇಶೀ ವಿನಿಮಯ ಸಂಪತ್ತನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕಾಗುವುದರಿಂದ ಈ ನಿಯಂತ್ರಣ. ಈಗ ನಿಯಂತ್ರಣ ಇರುವ ದೇಶಗಳೊಳಗೆ ಅಂತರ್ರಾಷ್ಟ್ರೀಯ ಬಂಡವಾಳ ತನಗೆ ಬೇಕಾದಂತೆ ಹರಿದು ಬಂದು ಲಾಭ ಕೊಳ್ಳೆ ಹೊಡೆದುಕೊಂಡು ಬೇಕಾದಂತೆ ವಾಪಸ್ಸು ಹೋಗುವಂತಿಲ್ಲ. ವಿದೇಶೀ ಹಣ ಹೂಡಿಕೆಗೆ ನಿಬಂಧನೆಗಳಿವೆ. ಅವರು ಬಂದ ಲಾಭವನ್ನು ತಮ್ಮ ದೇಶಕ್ಕೆ ತಗೆದುಕೊಂಡು ಹೋಗಲೂ ನಿಬಂಧನೆಗಳಿರುತ್ತವೆ.

2. ಎರಡನೆಯದು ನಮ್ಮ ವಿನಿಮಯ ದರ ಪದ್ಧತಿ. ಇಲ್ಲಿ ವಿನಿಮಯ ದರ ನಿರ್ದಿಷ್ಟವಾಗೇ ಇರುತ್ತದೆ. ಆದರೆ ಆಗಾಗ್ಗೆ ಈ ನಿರ್ದಿಷ್ಟ ದರ ಬದಲಾಯಿಸಲ್ಪಡುತ್ತದೆ. ಇದು ಶೇ. 100ರಷ್ಟು ನಮ್ಮ ಪದ್ಧತಿಯಲ್ಲ. ಆದರೆ ದರವನ್ನು ಹೊಂದಿಸಿಕೊಳ್ಳಬಲ್ಲಂಥ ಪದ್ಧತಿ.

3. ಮೂರನೆಯದು ತೇಲುವ ವಿದೇಶೀ ವಿನಿಮಯ ದರ ಪದ್ಧತಿ. ಈ ಪದ್ಧತಿಯಲ್ಲಿ ವಿದೇಶೀ ನಾಣ್ಯದ ಬೇಡಿಕೆ ಮತ್ತು ಪೂರೈಕೆಯ ಮೇಲೆ ಅಂದರೆ ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ನಿರ್ಧಾರವಾಗುವಂತೆ ನಿರ್ಧರಿತವಾಗುತ್ತದೆ. ಇದೇ ಪೂರ್ಣ ಪರಿವರ್ತನೀಯತೆ. ಇಲ್ಲಿ ವಿದೇಶೀ ವಿನಿಮಯದ ಮೇಲೆ ಯಾವುದೇ ನಿಬಂಧನೆಗಳಿಲ್ಲ. ವಿದೇಶಗಳ ಯಾರಾದರೂ ಭಾರತದೊಳಗೆ ಬಂದು ಬಂಡವಾಳ ಹೂಡಬಹುದು. ಬಂದ ಲಾಭವನ್ನು ಭಾರತದಿಂದ ಹೊರಗೆ ತೆಗೆದುಕೊಂಡು ಹೋಗಬಹುದು. ಭಾರತದಲ್ಲಿ ಬಂಡವಾಳ ಹೂಡಿದ್ದು ಲಾಭದಾಯಕವಾಗಲಿಲ್ಲ ಎನಿಸಿದರೆ ಬಂಡವಾಳವನ್ನು ತೆಗೆದು ಕೊಂಡು ಬೇರೆ ದೇಶಕ್ಕೆ ಹೋಗಿ ಹೂಡ ಬಹುದು. ಇದರ ಜೊತೆಗೇ ಭಾರತ ದೇಶದ ಬಂಡವಾಳಿಗರೂ ಮುಕ್ತವಾಗಿ ವಿದೇಶಗಳಿಗೆ ಹೋಗಿ ಹಣ ಹೂಡ ಬಹುದು(ಆ ದೇಶಗಳ ಕಾನೂನುಗಳು ಅವಕಾಶ ನೀಡಿದರೆ ಮಾತ್ರ).

ಚಾಲ್ತಿ ಮತ್ತು ಬಂಡವಾಳ ಖಾತೆಗಳೆಂದರೇನು

ಈ ಪದಗಳನ್ನು ಉದಾರೀಕರಣದ ನಂತರ ಹೆಚ್ಚಾಗಿ ಓದುತ್ತಿದ್ದೇವೆ. ವಿದೇಶೀ ವ್ಯವಹಾರ ಯಾವ ತರಹದ್ದು ಎಂಬುದರ ಮೇಲೆ ಅದನ್ನು ಚಾಲ್ತಿ ಅಥವಾ ಬಂಡವಾಳ ಖಾತೆಗಳಿಗೆ ಸೇರಿದ್ದೆಂದು ವರ್ಗೀಕರಿಸಲಾಗಿದೆ.

ವ್ಯಾಪಾರ ಆಮದು ಮತ್ತು ರಫ್ತು ವ್ಯವಹಾರಗಳಿಗೆ ಸೇರಿದ ಋಣ ಅಥವಾ ಜಮಾ ಚಾಲ್ತಿ ಖಾತೆಗೆ ಸೇರುತ್ತದೆ. ಯಾಕೆಂದರೆ ಇದು ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ್ದು. ಅಲ್ಪಕಾಲದ ವ್ಯವಹಾರ. ಆಮದು ರಫ್ತಿಗಿಂತ ಹೆಚ್ಚಿಗೆಯಾದರೆ ವ್ಯಾಪಾರ ಬಾಕಿಯುಂಟಾಗುತ್ತದೆ. ಆಗ ವಿದೇಶೀ ವಿನಿಮಯದ ಕೊರತೆ ಇರುತ್ತದೆ. ಆದ್ದರಿಂದ ಆಮದಿನ ಮೊತ್ತವನ್ನು ಪೂರ್ತಿ ಪಾವತಿ ಮಾಡಲಾಗದಿರುವುದರಿಂದ ವ್ಯಾಪಾರ ಬಾಕಿ ಉಂಟಾಗುತ್ತದೆ.

ಅದೃಶ್ಯ ವ್ಯವಹಾರ

ಈ ವ್ಯವಹಾರಗಳೂ ಚಾಲ್ತಿ ಖಾತೆಗೆ ಸೇರಿದವು. ಇದರಲ್ಲಿ ಪ್ರವಾಸದಿಂದ ಬರುವ ಮತ್ತು ಹೊರ ಹೋಗುವ ವಿದೇಶೀ ವಿನಿಮಯ, ಸಾಗಾಣಿಕೆಗೆ ಸಂಬಂಧಪಟ್ಟ ವ್ಯವಹಾರಗಳು ವಿಮೆಗೆ ಸಂಬಂಧಪಟ್ಟ ವ್ಯವಹಾರಗಳು, ಸರಕಾರಿ ವ್ಯವಹಾರಗಳು,(ವಿದೇಶೀ ವ್ಯವಹಾರಕ್ಕೆ ಸಂಬಂಧಪಟ್ಟವು) ಸೇರಿರುತ್ತವೆ.

ಬಂಡವಾಳ ಖಾತೆ

ಈ ಕೆಳಗಿನ ವ್ಯವಹಾರಗಳು ಬಂಡವಾಳ ಖಾತೆಗೆ ಸೇರುತ್ತವೆ.

1. ಖಾಸಗಿ ಖಾತೆ: ಖಾಸಗಿ ವಲಯದವರು ವಿದೇಶೀಯರಿಂದ ಪಡೆದ ಸಾಲ, ಅದರ ಮರು ಪಾವತಿ ವಿದೇಶೀಯರಿಗೆ ನೀಡುವ ಸಾಲ ಮತ್ತು ಅದರ ಮರು ಪಾವತಿ ಇದರಲ್ಲಿ ಸೇರಿರುತ್ತದೆ.

2. ಬ್ಯಾಂಕಿಂಗ್ ವ್ಯವಹಾರಗಳು; ಬ್ಯಾಂಕಿಂಗ್ ಬಂಡವಾಳ ದೇಶದಿಂದ ಹೊರಗೆ ಹೋಗುವುದು ಮತ್ತು ಒಳಗೆ ಬರುವಂತವು ಇದರಲ್ಲಿ ಸೇರಿರುತ್ತದೆ.

3. ಅಧಿಕೃತ ಸಾಲಗಳು ಅಂದರೆ

ಅ) ಐಎಂಎಫ್‌ನಿಂದ ಪಡೆದ ಸಾಲ/ ಅಂತರ್ರಾಷ್ಟ್ರೀಯ ಬ್ಯಾಂಕುಗಳಿಂದ ಪಡೆದ ಸಾಲ ಅದರ ಮರು ಪಾವತಿ.

ಆ) ವಿದೇಶಗಳಿಗೆ ನಮ್ಮ ದೇಶ ಸಾಲ ನೀಡಿದ್ದರೆ ಅದು ಮತ್ತು ಮರು ಪಾವತಿ.

ಇ) ಇತರೆ ಬಂಡವಾಳ ಸಂಬಂಧಿತ ಋಣ ಮತ್ತು ಜಮಾ.

ಈ) ಶಿಲ್ಕುಗಳು ಮತ್ತು ಹಣಕಾಸು ಚಿನ್ನ - ಇವು ರಿಸರ್ವ್ ಬ್ಯಾಂಕಿನಲ್ಲಿರುವಂತಹವು.

ಹೀಗೆ ಬಂಡವಾಳದ ಚಲನವಲನಕ್ಕೆ ಸಂಬಂಧಪಟ್ಟ ವ್ಯವಹಾರಗಳೆಲ್ಲ ಬಂಡವಾಳ ಖಾತೆಗೆ ಸೇರಿದರೆ ಉಳಿದವು ಚಾಲ್ತಿ ಖಾತೆಗೆ ಸೇರಿಬಿಡುತ್ತವೆ.

ವ್ಯಾಪಾರ ಬಾಕಿಯನ್ನು ತುಂಬುವ ಬಗೆ ಹೇಗೆ ಎಂಬ ಪ್ರಶ್ನೆ ಏಳಬಹುದು (ಇದು ಚಾಲ್ತಿ ಖಾತೆಯಲ್ಲಿ ಪ್ರತಿಫಲಿತವಾಗುತ್ತದೆ) ತುಂಬಲಾರದ ವ್ಯಾಪಾರ ಬಾಕಿ ಉಂಟಾದಾಗ ಐಎಂಎಫ್‌ನಿಂದ ಸಾಲ ಪಡೆಯಬೇಕಾಗುತ್ತದೆ. SDR (ಅಂದರೆ Special Drawing Rights- ವಿಶೇಷ ಪಡೆತ ಹಕ್ಕುಗಳು) ಮೂಲಕ. ಈ ವ್ಯವಹಾರ(ಸಾಲ ಪಡೆಯುವುದು) ಬಂಡವಾಳ ಖಾತೆಗೆ ಸೇರುತ್ತದೆ. ಬೇರೆ ಮೂಲಗಳಿಂದಲೂ ಸಾಲ ಪಡೆಯ ಬಹುದು. ಯಾವುದೂ ಫಲಕಾರಿಯಾಗ ದಿದ್ದರೆ ಶಿಲ್ಕು ಯಾ ಹಣಕಾಸು ಚಿನ್ನವನ್ನು ಒತ್ತೆಯಿಡುವ, ಮಾರುವ ಮೂಲಕವೂ ಬಾಕಿ ತೀರಿಸಬಹುದು. ಇವೆಲ್ಲ ಬಂಡವಾಳ ಖಾತೆಯ ವ್ಯವಹಾರಗಳಾಗುತ್ತವೆ. ಹೀಗೆ ಚಾಲ್ತಿ ಖಾತೆಯಲ್ಲಿನ ಕೊರತೆ/ ಮಿಗುತೆ ಸರಿಪಡಿಸಲು ಬಂಡವಾಳ ಖಾತೆಯಲ್ಲಿ ವ್ಯವಹಾರ ಮಾಡಬೇಕಾಗುತ್ತದೆ.

ಇಂತಹ ಪದ್ಧತಿಗಳಿರುವಾಗ ಪೂರ್ಣ ಪರಿವರ್ತನೀಯತೆಯಿಂದ ಎಂತಹ ಅಪಾಯಗಳುಂಟಾಗುತ್ತವೆ?

ಸರಳವಾಗಿ ಹೇಳುವುದಾದರೆ ಲಾಭ ಬಡುಕ ಅಂತರ್ರಾಷ್ಟ್ರೀಯ ಬಂಡವಾಳಕ್ಕೆ ಲಂಗುಲಗಾಮುಗಳಿಲ್ಲದೆ ಹೋಗುತ್ತದೆ. ದುಡಿವ ಜನರ ಬಾಳಿನ ಮೇಲೆ ಅದು ಥಕಥೈ ಎಂದು ನರ್ತನ ನಡೆಸುತ್ತದೆ.

ಭಾರತದಲ್ಲಿ ಯಾವುದೂ ಒಂದು ವಲಯದಲ್ಲಿ ಬಹಳ ಲಾಭವಿದೆಯೆಂದಾದರೆ ಬಂಡವಾಳ ಆ ವಲಯಕ್ಕೆ ಮಹಾಪೂರವಾಗಿ ಹರಿದು ಬರುತ್ತದೆ. ಸಿರಿ ಬಂದಾಗ ಬೆಳೆ ಬೆಳೆಯುವುದಿಲ್ಲ. ಅಲ್ಲವೇ? ಹಾಗೆ ಇನ್ನೊಂದು ಕಡೆಯಲ್ಲಿ ಹೆಚ್ಚಿನ ಲಾಭ ವಿದೆಯೆಂದಾದರೆ ಬಂಡವಾಳ ಅಲ್ಲಿಗೆ ಹರಿದು ಹೋಗುತ್ತದೆ. ಬಂಡವಾಳ ಹರಿಯುವುದೆಂದರೇನು? ಬಂಡವಾಳ ಹರಿದು ಬಂತು ಎಂದರೆ ಉದ್ಯೋಗಗಳು ಹೆಚ್ಚುತ್ತವೆ ಎಂದರ್ಥ(ಈ ಹೆಚ್ಚುವಿಕೆಯ ಪ್ರಮಾಣ ಎಷ್ಟೇ ಇರಲಿ) ಹಾಗೆಯೇ ಬಂಡವಾಳ ಹರಿದು ಹೋಯಿತು ಎಂದರೆ ಉದ್ಯೋಗಗಳ ನಷ್ಟವಾಗುತ್ತದ. ಜನ ಬೀದಿಗೆ ಬೀಳಬೇಕಾಗುತ್ತದೆ. ಇದರ ಜೊತೆಗೇ ಇನ್ನೂ ಹಲವಾರು ದುಷ್ಪರಿಣಾಮಗಳು ಉಂಟಾಗುತ್ತವೆ.


ನಾವು ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ನಿಂದ ಸಾಲ ಪಡೆದಿದ್ದೇವಲ್ಲ. ಅದನ್ನು ಮರು ಪಾವತಿಸುವಾಗ ಏನಾಗಬಹುದು. ಇಂದು ಒಂದು ಅಮೇರಿಕನ್ ಡಾಲರಿನ ಬೆಲೆ35 ರೂಪಾಯಿ 85 ಪೈಸೆಗಳು ಎಂದಿಟ್ಟುಕೊಳ್ಳಿ. ಅಂತರ್ರಾಷ್ಟ್ರೀಯವಾಗಿ ರೂಪಾಯಿ ದುರ್ಬಲ ನಾಣ್ಯ. ಅಲ್ಲದೆ ಸಾಮ್ರಾಜ್ಯ ಶಾಹಿಗಳು ತಮ್ಮ ಬಂಡವಾಳ ಮದದಿಂದ ರೂಪಾಯಿಯ ಮೌಲ್ಯವನ್ನು ಪಾತಾಳಕ್ಕಿಳಿಸಬಹುದು. ಆಗ ಡಾಲರಿನ ಬೆಲೆ 60 ರೂಪಾಯಿಗಳಿಗೇರಿದರೆ ನಾವು ಪಡೆದ 35 ರೂಪಾಯಿ ಸಾಲಕ್ಕೆ 60 ರೂಪಾಯಿ ಅಸಲನ್ನೇ ವಾಪಸ್ಸು ಮಾಡಬೇಕಾಗುತ್ತದೆ. ಈ ಮೊತ್ತಕ್ಕೆ ಬಡ್ಡಿ ಬೇರೆ.

ಇಂತಹ ಹಲವಾರು ದುಷ್ಪರಿಣಾಮಗಳು ಈ ಪೂರ್ಣ ಪರಿವರ್ತನೀಯತೆಯಿಂದ ಆಗುತ್ತದೆ. ೦

ರೂಪಾಯಿಯ ಪೂರ್ಣ ಪರಿವರ್ತನೀಯತೆ

ಬಂಡವಾಳಖಾತೆಯ ಪೂರ್ಣ ಪರಿವರ್ತನೀಯತೆಯ ಅಪಾಯಗಳು

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಕಾಂ.ಪ್ರಕಾಶ್ ಕಾರಟ್‌ರೊಂದಿಗೆ ಸಂದರ್ಶನ. ಇತ್ತೀಚೆಗೆ ಪಕ್ಷದ ರಾಜ್ಯ ಮಟ್ಟದ ಶಾಲೆ ನಡೆದಾಗ ಉಪನ್ಯಾಸ ನೀಡಲು ಬಂದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್‌ರೊಂದಿಗೆ 'ಐಕ್ಯರಂಗ' ನಡೆಸಿದ ಸಂದರ್ಶನ ಈ ಕೆಳಗೆ ನೀಡಲಾಗಿದೆ



ಐಕ್ಯರಂಗ: ತಾರಾಪುರೆ ಸಮಿತಿ2000 ಇಸ್ವಿಯ ಹೊತ್ತಿಗೆ ಬಂಡವಾಳ ಪರಿವರ್ತನೀಯತೆ ತರಬೇಕೆಂದು ಶಿಫಾರಸು ಮಾಡಿದೆ. ಇದರ ಅಪಾಯಗಳೇನು?

❑ ಪೂರ್ಣ ಪರಿವರ್ತನೀಯತೆಯಿಂದ ಅಪಾರ ಪ್ರಮಾಣದಲ್ಲಿ ವಿದೇಶೀ ಬಂಡವಾಳ ದೇಶದೊಳಗೆ ಹರಿದು ಬಂದು ದೇಶದ ಅಭಿವೃದ್ಧಿಗೆ ಎಡೆ ಮಾಡಿ ಕೊಡುತ್ತದೆ ಎಂಬುದು ಈ ಕ್ರಮವನ್ನು ಬೆಂಬಲಿಸುವವರ ವಾದ. ಆದರೆ ಅದಕ್ಕೆ ತದ್ವಿರುದ್ಧವಾಗಿ ಅಪಾರ ಪ್ರಮಾಣದ ಬಂಡವಾಳ ದೇಶದಿಂದ ಹೊರಗೆ ಹರಿದು ಹೋಗುತ್ತದೆ ಎಂಬುದು ಮೂರನೇ ಜಗತ್ತಿನ ದೇಶಗಳ ಅನುಭವ. ಇಂತಹ ಬಂಡವಾಳದ ಹೊರ ಹರಿಯುವಿಕೆಯ ಬಿಕ್ಕಟ್ಟನ್ನು ಅನುಭವಿಸಿದ ಇತ್ತೀಚಿನ ಉದಾಹರಣೆಯೆಂದರೆ ಮೆಕ್ಸಿಕೋ ದೇಶ.

ಈ ಕ್ರಮದಿಂದ ಮೂರು ತರಹದ ದುಷ್ಪರಿಣಾಮ ಉಂಟಾಗುತ್ತದೆ.

ಒಂದನೆಯದಾಗಿ ಅಂತಹ ಸ್ವಾತಂತ್ರ್ಯವಿದ್ದರೆ ಪ್ರತಿಯೊಬ್ಬ ವ್ಯಕ್ತಿಯೂ ಸಾಧ್ಯವಿರುವಷ್ಟು ವಿದೇಶೀ ನಾಣ್ಯವನ್ನು ನಗದು ರೂಪದಲ್ಲೇ ಉಳಿಸಿಕೊಳ್ಳುತ್ತಾನೆ. ಯಾಕೆಂದರೆ ಆ ಮೂಲಕವೂ ಲಾಭ ಮಾಡುವ ಸಾಧ್ಯತೆ ಇರುತ್ತದೆ. ವಿದೇಶೀ ವಿನಿಮಯ ದೇಶದ ಅವಶ್ಯಕತೆಗಳಿಗೆ ದೊರೆಯುವುದಿಲ್ಲ.

ಎರಡನೆಯದಾಗಿ ಅತ್ಯವಶ್ಯಕವಾದ ಸಂಪನ್ಮೂಲವನ್ನು ಬೇರೆಡೆಗೆ ಸಾಗಿಸುವ ಪ್ರಯತ್ನಗಳಾಗುತ್ತವೆ. ಅಂದರೆ ಯಾವ ಕ್ಷೇತ್ರದಲ್ಲಿ ವಿನಿಯೋಗಿಸಬೇಕೋ ಅಲ್ಲಿ ವಿನಿಯೋಗಿಸಲಾಗುವುದಿಲ್ಲ. ಈ ಸಂಪನ್ಮೂಲ ಬೇರೆ ದೇಶಗಳಿಗೆ ಹರಿದು ಹೋದರೆ ಆಗ ದೇಶಕ್ಕೆ ಸಂಪನ್ಮೂಲದ ಕೊರತೆ ಉಂಟಾಗುತ್ತದೆ. ಬಂಡವಾಳ ದೇಶದೊಳಕ್ಕೆ ಹರಿದು ಬರುವ ಬದಲು ಹೊರ ಹರಿದು ಹೋಗುವ ಸಾಧ್ಯತೆಯೇ ಹೆಚ್ಚು. ಇದರ ಜೊತೆಗೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಅನಿಶ್ಚಿತತೆಗಳು ನಮ್ಮ ದೇಶದಲ್ಲೂ ತೆರೆದುಕೊಳ್ಳುತ್ತದೆ. ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ (ಬೇರೆ ಬೇರೆ ಕಾರಣಗಳಿಗಾಗಿ) ಬೇರೆ ಹಲವು ದೇಶಗಳಿವೆ. ಆದ್ದರಿಂದ ಇದು ಒಂದು ಆಶಾವಾದಿ ಚಿಂತನೆ ಅಷ್ಟೇ. ಮೂರನೆಯದಾಗಿ ಒಂದು ಸಾರಿ ನಿಯಂತ್ರಣ ತೆಗೆದ ವಿದೇಶೀ ವಿನಿಮಯ ಪದ್ಧತಿಯನ್ನು ಮತ್ತೆ ನಿಯಂತ್ರಣಗೊಳಿಸುವುದು ಸಾಧ್ಯವಿಲ್ಲ. ಆಗ ಏನಾಗುತ್ತದೆ ಎಂದರೆ ಅಭಿವೃದ್ಧಿಯ ಆದ್ಯತೆಯನ್ನು ವಿದೇಶಗಳಿಂದ ಹರಿದು ಬರುವ ಬಂಡವಾಳ ನಿರ್ಧರಿಸುತ್ತದೆ. ನಮ್ಮದೇ ಆದ ಯಾವುದೇ ಯೋಜನೆಗಳು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುವುದಿಲ್ಲ. ಇದರಿಂದಾಗಿ ದೇಶದ ಸಾರ್ವಭೌಮತ್ವ ಇನ್ನೂ ಸವಕಲಾಗುತ್ತದೆ. ಎಲ್ಲಾ ಕ್ಷೇತ್ರಗಳ ಆರ್ಥಿಕ ಆದ್ಯತೆಗಳನ್ನು ಅಂತರ್ರಾಷ್ಟ್ರೀಯ ಬಂಡವಾಳವೇ ನಿರ್ಧರಿಸುವುದರಿಂದ ಅಭಿವೃದ್ಧಿ ಈ ವಿದೇಶೀ ಬಂಡವಾಳದ ಹಿತಾಸಕ್ತಿಗಳನ್ನು ಕಾಯುತ್ತದೆಯೇ ಹೊರತು ನಮ್ಮ ದೇಶದ ಹಿತಾಸಕ್ತಿಗಳನ್ನಲ್ಲ.

ಐಕ್ಯರಂಗ: ಈಗಾಗಲೇ ವಿದೇಶೀ ವಿನಿಮಯ ವ್ಯವಹಾರದಲ್ಲಿ ಕಳ್ಳತನ ನಡೆಯುತ್ತಿದೆಯಲ್ಲವೇ?

❑ ಹೌದು ಕಳ್ಳತನದಿಂದ ಹವಾಲಾದಂತಹ ವ್ಯವಹಾರಗಳ ಮೂಲಕ ಆಗಲೇ ಬಂಡವಾಳ ದೇಶದಿಂದ ಹೊರಗೆ ಹರಿದು ಹೋಗುತ್ತಿದೆ. ಬಂಡವಾಳಖಾತೆಯ ಪರಿವರ್ತನೀಯತೆಯಿಂದ ಈ ಕಳ್ಳ ವ್ಯವಹಾರಕ್ಕೆ ಕಾನೂನಿನ ಮಂಜೂರಾತಿ ದೊರೆತಂತಾಗುತ್ತದೆ. ಹೆಚ್ಚು ರಾಜಾರೋಷವಾಗಿ ವ್ಯವಹಾರ ನಡೆಯುತ್ತದೆ.

ಐಕ್ಯರಂಗ: ನಮ್ಮ ವಿದೇಶೀ ಸಾಲ ಮರುಪಾವತಿಯ ಮೇಲೆ ಇದು ಎಂತಹ ಪರಿಣಾಮ ಬೀರುತ್ತದೆ?

❑ ವಿದೇಶೀ ಸಾಲ ಮರು ಪಾವತಿಯ ಮೇಲೆ ಇದು ದುಷ್ಪರಿಣಾಮ ಬೀರುತ್ತದೆ. ಭಾರತಕ್ಕೆ ಇಂತಹ ಪರಿಸ್ಥಿತಿ ನಿಭಾಯಿಸುವುದು ಸುಲಭದ ಕೆಲಸವಾಗುವುದಿಲ್ಲ. ತಾರಾಪುರೆ ಸಮಿತಿಯೇ ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ತರುವ ಮೊದಲು ಅದು ಹಣಕಾಸು ಕೊರತೆಯನ್ನು ಬಿಟ್ಟು ಆಂತರಿಕ ಉತ್ಪಾದನೆಯ ಶೇ. 3.5ಕ್ಕೆ ಇಳಿಸಬೇಕೆಂದು ಹೇಳಿದೆ.

ಐಕ್ಯರಂಗ: ತಾರಾಪುರೆ ಸಮಿತಿಯ ವರದಿಯ ಬಗ್ಗೆ ಸಿಪಿಐ(ಎಂ)ನ ನಿಲುವೇನು?

❑ ವರದಿಯನ್ನು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವುದನ್ನು ನಾವು ವಿರೋಧಿಸುತ್ತೇವೆ. ಇದು ದೇಶದ ಭವಿಷ್ಯವನ್ನೇ ನಿರ್ಧರಿಸುವ ಮಹತ್ವದ ವಿಷಯವಾದ್ದರಿಂದ ಸಂಸತ್ತಿನಲ್ಲಿ ಈ ಬಗ್ಗೆ ದೀರ್ಘ ಚರ್ಚೆಯಾಗಬೇಕು.

ಆರ್ಥಿಕ ಉದಾರೀಕರಣ ಮತ್ತು ರೂಪಾಯಿ ಪರಿವರ್ತನೀಯತೆ

ನರಸಿಂಹರಾಯರ ನೇತೃತ್ವದ ಕಾಂಗ್ರೆಸ್ ಸರಕಾರ 1991ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಉದಾರೀಕರಣದ ತೀವ್ರತೆ ಹೆಚ್ಚಿತು ತಾನೆ. ಆಗ ಹಣಕಾಸು ಸಚಿವರಾದ ಡಾ.ಮನಮೋಹನಸಿಂಗ್‌ರು 1992-93ರ ಬಜೆಟ್ಟಿನಲ್ಲಿ ಲರ್ಮ್ಸ್ (LERMS-Leberalised Exchange Rate Mechanism) ಎಂಬ ಭಾಗಶಃ ಪರಿವರ್ತನೀಯತೆಯನ್ನು ಚಾಲ್ತಿ ಖಾತೆಗೆ ತಂದರು. ಇದರ ಪ್ರಕಾರ ರಫ್ತುದಾರರು ತಮ್ಮ ರಫ್ತಿನಿಂದ ಬಂದ ವಿದೇಶೀ ಹಣದ ಶೇ. 60ರಷ್ಟನ್ನು ಮಾರುಕಟ್ಟೆ ದರದಲ್ಲಿ(ಮಾರುಕಟ್ಟೆ ದರ ಹೆಚ್ಚು) ರೂಪಾಯಿಗೆ ಪರಿವರ್ತನೆ ಮಾಡಿಕೊಳ್ಳುವಂತಾಯಿತು. ಉಳಿದ ಶೇ. 40ರಷ್ಟನ್ನು ಅಧಿಕೃತ ದರದಲ್ಲಿ ಪರಿವರ್ತನೆ ಮಾಡಬಹುದಾಗಿತ್ತು.

ನಂತರ 1993-94ರ ಬಜೆಟ್ಟಿನಲ್ಲಿ (Unified Exchange Rate Mechanism) ಅಂದರೆ ಏಕೀಕೃತ ವಿನಿಮಯ ದರ ಪದ್ಧತಿಯನ್ನು ಜಾರಿಗೆ ತರಲಾಯಿತು.ಈ ಪದ್ಧತಿಯಡಿ ರಫ್ತುದಾರರು ರಫ್ತಾದ ಪೂರ್ತಿ ವಿದೇಶೀ ಹಣವನ್ನು ಮಾರುಕಟ್ಟೆ ದರದಲ್ಲಿ ರೂಪಾಯಿಗೆ ಪರಿವರ್ತಿಸಿಕೊಳ್ಳುವಂತಾಯಿತು. ಇದರಿಂದ ಚಾಲ್ತಿ ಖಾತೆ ಪೂರ್ಣ ಪರಿವರ್ತನೀಯವಾದಂತಾಯಿತು.

ಬಂಡವಾಳ ಖಾತೆ ಪರಿವರ್ತನೀಯತೆ

ಉಳಿದದ್ದು ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ. ಇದು ಬೇಗ ಆಗಬೇಕೆಂಬುದೇ ಐಎಂಎಫ್, ವಿಶ್ವ ಬ್ಯಾಂಕ್‌ಗಳ ಒತ್ತಡ. ಈ ಒತ್ತಡಕ್ಕೆ ಮಣಿದ ಸಂಯುಕ್ತರಂಗ ಸರಕಾರ ಬೇಗ ಬಂಡವಾಳ ಖಾತೆಯ ಪರಿವರ್ತನೀಯತೆ ತರುವ ಕಾತುರ ತೋರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಉಪ ಗವರ್ನರ್ ಎಸ್.ಎಸ್. ತಾರಾಪುರೆಯವರ ಅಧ್ಯಕ್ಷತೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ ತನ್ನ ಶಿಫಾರಸ್ಸುಗಳನ್ನು ಸಲ್ಲಿಸಿದೆ. ಈ ಭಾರತೀಯ ರಿಸರ್ವ್ ಬ್ಯಾಂಕ್‌ನ ಆಂತರಿಕ ಸಮಿತಿಯ ಕಿರು ವರದಿಯ ಆಧಾರದ ಮೇಲೆ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳುವ ಹುನ್ನಾರ ನಡೆದಿರುವಂತಿದೆ. ಈ ಸಮಿತಿಯ ವರದಿಗೆ ಬಂಡವಾಳಶಾಹಿ ಸಮೂಹ ಮಾಧ್ಯಮಗಳು ಮತ್ತು ಸರಕಾರಿ ಮಾಧ್ಯಮಗಳು ಬಹಳ ಮಹತ್ವ ನೀಡಿದವು.

ಈ ವರದಿ ಬಂಡವಾಳ ಖಾತೆಗೆ ಪರಿವರ್ತನೀಯತೆಗೆ ಕೆಲವು ಪೂರ್ವ ಶರತ್ತುಗಳನ್ನು ವಿಧಿಸಿದೆ.ಮೂರು ಹಂತಗಳಲ್ಲಿ 2000 ಇಸವಿಯ ವೇಳೆಗೆ ಪೂರ್ಣ ಪರಿವರ್ತನೀಯತೆ ತರಬೇಕೆಂದು ಅದು ಶಿಫಾರಸ್ಸು ಮಾಡಿದೆ. ◆

ವರದಿಯ ಮುಖ್ಯಾಂಶಗಳು

● ಪೂರ್ವ ಶರತ್ತುಗಳು

- ಒಟ್ಟಾರೆ ಹಣಕಾಸು ಕೊರತೆ ಒಟ್ಟುತ್ಪಾದನೆಯ ಶೇ. 4.5 ರಿಂದ ಶೇ. 3.5ಕ್ಕೇ ಇಳಿಯಬೇಕು.

- ಸರಕಾರಿ ಸಾಲಗಳ ಮರುಪಾವತಿಗಾಗಿ ಒಂದು ಕ್ರೋಢೀಕೃತ ನಿಧಿಯನ್ನು ಸ್ಥಾಪಿಸಿ ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಲಾಭ ಮತ್ತು ಶೇರು ಹಿಂಪಡೆತದ ಹಣ ತುಂಬಬೇಕು.

- ಜಾಗತಿಕವಾಗಿ ಸ್ವೀಕೃತವಾಗುವ ಪಾರದರ್ಶಕ ಹಣಕಾಸು ಲೆಕ್ಕ ಪದ್ಧತಿ.

- ಹಣದುಬ್ಬರದ ದರ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಶೇ. 3ರಿಂದ ಶೇ. 5ರ ಒಳಗಿರಬೇಕು.

-ಸರಕಾರಿ ಬ್ಯಾಂಕುಗಳ ಪ್ರತಿಫಲ ತಾರದ ಸಾಲಗಳ ಪ್ರಮಾಣ ಈಗಿನ ಶೇ. 13.7ರಿಂದ ಶೇ. 5ಕ್ಕೆ ಇಳಿಯಬೇಕು. ಇದೇ ಸಮಯದಲ್ಲಿ ಹಣಕಾಸು ಶಿಲ್ಕು ಅನುಪಾತವನ್ನು ಈಗಿನ ಶೇ. 9.3ರಿಂದ ಶೇ. 3ಕ್ಕಿಳಿಸಬೇಕು.

- ಭಾರತೀಯ ರಿಸರ್ವ್ ಬ್ಯಾಂಕಿನ ಶೇ. 5ರಷ್ಟು ಹೆಚ್ಚು ಕಡಿಮೆ ಆಗುವ ಪರಿಣಾಮಕಾರಿವಿನಿಮಯ ದರವಿರಬೇಕು.

- ವಿದೇಶೀ ನೀತಿ ಹೇಗಿರಬೇಕೆಂದರೆ ಚಾಲ್ತಿ ಸ್ವೀಕೃತಿ ಹೆಚ್ಚಾಗುತ್ತಿದ್ದು ಸಾಲ ಮರುಪಾವತಿ ಅನುಪಾತ ಈಗಿನ ಶೇ. 25ರಿಂದ ಶೇ. 20ಕ್ಕಿಳಿಯಬೇಕು.

- ವಿದೇಶೀ ಹಣಕಾಸು ಸಂಪತ್ತಿಗೆ ಸಂಬಂಧಿಸಿ ಅಂತರಿಕ ನಾಣ್ಯದ ಪ್ರಮಾಣ ಇರಬೇಕು.

ಮೂರು ಹಂತಗಳು

● ಒಂದನೇ ಹಂತ(1997-98)

- ಕಂಪನಿಗಳು ವಿದೇಶೀ ಬಾಂಡುಗಳನ್ನು ಬಿಡುಗಡೆ ಮಾಡಲು ಅನುಮತಿ

- ಅಮೇರಿಕನ್ ಠೇವಣಿ ರಶೀತಿ/ADR/ಜಾಗತಿಕ ಠೇವಣಿ ರಶೀತಿಗಳಿಗೆ ರಿಸರ್ವ್ ಬ್ಯಾಂಕ್ ಅನುಮತಿಯ ಅಗತ್ಯವಿರಬಾರದು.

- ಅನಿವಾಸಿ ಭಾರತೀಯರಿಂದ ಕಂಪನಿಯೊಂದು 250000 ಡಾಲರುಗಳ ಸಾಲ ಪಡೆಯಬಹುದು. ಈ ಹಣವನ್ನು ಹೇಗೆ ಬೇಕಾದರೂ ಬಳಸಬಹುದು.

- ಜಂಟಿ ಸಹಯೋಗ ಅಥವಾ ಪೂರ್ಣ ಮಾಲಿಕತ್ವ ಇರುವೆಡೆ ಐವತ್ತು ದಶಲಕ್ಷ ಡಾಲರುಗಳವರೆಗಿನ ಹೂಡಿಕೆ ಮುಕ್ತವಿರಬೇಕು.

- ಬ್ಯಾಂಕುಗಳು ವಿದೇಶೀ ನಾಣ್ಯದ ಸಾಲ ನೀಡಬಹುದು.

ಇತ್ಯಾದಿ.

● ಎರಡನೇ ಹಂತ(1998-99)

- ಕಂಪನಿಗಳು 50000 ಡಾಲರುಗಳಷ್ಟು ಮೊತ್ತದ ಚಾಲ್ತಿ ಖಾತೆಗಳನ್ನು ವಿದೇಶಗಳಲ್ಲಿ ತೆರೆಯಬಹುದು.

- ಕಂಪನಿಗಳು ಅನಿವಾಸಿ ಭಾರತೀಯರಿಂದ 500000 ಡಾಲರುಗಳಷ್ಟು ಸಾಲ ಪಡೆಯಬಹುದು.

- ಬ್ಯಾಂಕುಗಳು ವಿದೇಶಗಳಿಂದ ಸಾಲ ಪಡೆಯುವುದರ ಮೇಲಿನ ನಿಬಂಧನೆಗಳ ಸಡಿಲಿಕೆ.

- ವ್ಯಕ್ತಿಗಳು ವಿದೇಶದಲ್ಲಿನ ಬ್ಯಾಂಕುಗಳಲ್ಲಿ 50000 ಡಾಲರುಗಳಷ್ಟು ಇಡಬಹುದು.

- ಕಂಪನಿಗಳು ಅಧಿಕೃತ ವ್ಯವಹಾರಸ್ಥರ ಮೂಲಕವಲ್ಲದೆ ನೇರವಾಗಿ ವಿದೇಶಗಳಿಂದ ಹಣ ಎತ್ತಬಹುದು.

● ಮೂರನೇ ಹಂತ(1999-2000)

- ಕಂಪನಿಗಳು ಒಂದು ಲಕ್ಷ ಡಾಲರುಗಳವರೆಗೆ ಚಾಲ್ತಿ ಖಾತೆಯನ್ನು ವಿದೇಶಗಳಲ್ಲಿ ತೆರೆಯಬಹುದು.

- ಕಂಪನಿಗಳು ಅನಿವಾಸಿ ಭಾರತೀಯರಿಂದ 10 ಲಕ್ಷ ಡಾಲರುಗಳವರೆಗೆ ಸಾಲ ಪಡೆಯಬಹುದು.

- ವ್ಯಕ್ತಿಗಳು 1 ಲಕ್ಷ ಡಾಲರುಗಳವರೆಗೆ ವಿದೇಶಗಳಲ್ಲಿ ಚಾಲ್ತಿ ಖಾತೆ ತೆರೆಯಬಹುದು.

- ವಿದೇಶೀ ವಿನಿಮಯ ಮಾರುಕಟ್ಟೆಯಲ್ಲಿ ಭಾಗವಹಿಸುವುದಕ್ಕೆ ಯಾವುದೇ ನಿಬಂಧನೆಯಿಲ್ಲ.

- ಭಾರತೀಯ ರಿಸರ್ವ್ ಬ್ಯಾಂಕ್ ಸರಕಾರೀ ಬಾಂಡುಗಳ ಪ್ರಾಥಮಿಕ ಮಾರುಕಟ್ಟೆಯಿಂದ ಪೂರ್ತಿ ಹಿಂತೆಗೆಯುವುದು.

ಇತ್ಯಾದಿ. □

ತುರ್ಕಿಯಲ್ಲಿ ರಾಜಕೀಯ ಬಿಕ್ಕಟ್ಟು

ತುರ್ಕಿಯಲ್ಲಿ ಪ್ರಸ್ತುತ ಪ್ರಧಾನ ಮಂತ್ರಿ ಮುಸ್ಲಿಂ ಮೂಲಭೂತವಾದಿವೇಲ್‌ಫೇರ್ ಪಾರ್ಟಿಯ ಎರ್ಬಾಕಾನ್ ರಾಜೀನಾಮೆಗೆ ಬಲವಾದ ಒತ್ತಡ ಬರುತ್ತಿದೆ. ಸಮ್ಮಿಶ್ರ ಸರಕಾರದಲ್ಲಿ ಭಾಗವಹಿಸುತ್ತಿರುವ ಟ್ರೂಪಾಥ್ ಪಾರ್ಟಿಯ ವಿದೇಶ ಮಂತ್ರಿ ಸಿಲ್ಲರ್, ಪ್ರಧಾನ ಮಂತ್ರಿ ರಾಜೀನಾಮೆ ನೀಡದಿದ್ದರೆ ತಮ್ಮಪಕ್ಷ ಸರಕಾರದಿಂದ ಹೊರನಡೆಯುವುದೆಂದು ಬೆದರಿಸಿದ್ದಾರೆ. ತುರ್ಕಿಯ ರಾಜಕೀಯದಲ್ಲಿ ಹಿಂದಿನಿಂದಲೂ ಪ್ರಬಲ ಪಾತ್ರವಹಿಸುತ್ತಿರುವ ಮಿಲಿಟರಿ ಜನರಲ್‌ಗಳು ಪ್ರಧಾನ ಮಂತ್ರಿ ಎರ್ಬಾಕಾನ್‌ರ ರಾಜೀನಾಮೆ ಕೇಳಿದ್ದಾರೆ. ವಿರೋಧ ಪಕ್ಷದಲ್ಲಿರುವ ಮದರ್‌ಲ್ಯಾಂಡ್ ಪಾರ್ಟಿ ಟ್ರೂಪಾಥ್ ಪಾರ್ಟಿ ಜತೆ ಮೈತ್ರಿಕೂಟ ರಚಿಸಲು ನಿರಾಕರಿಸಿದೆ. ಈ ಎರಡೂ ಪಾರ್ಟಿಗಳು ಮೈತ್ರಿಕೂಟ ರಚಿಸದ್ದರಿಂದ ಮುಸ್ಲಿಂ ಪಕ್ಷ ವೇಲ್‌ಫೇರ್ ಪಾರ್ಟಿ ಜತೆ ಮೈತ್ರಿಕೂಟ ರಚಿಸಬೇಕಾಯಿತು. ಈ ಮೂರು ಪಕ್ಷಗಳು ತಲಾ ಶೇಕಡಾ 20 ಮತ ಗಳಿಸಿದ್ದು, ಯಾವುದಾದರೂ ಎರಡು ಪಕ್ಷ ಸಹಕರಿಸದೆ ತುರ್ಕಿ ಇನ್ನಷ್ಟು ತೀವ್ರ ರಾಜಕೀಯ ಬಿಕ್ಕಟ್ಟಿಗೆ ಒಳಗಾಗಲಿದೆ.

ಈಗ ಇನ್ನೊಂದು ಚುನಾವಣೆ ನಡೆದರೂ ಮೂರು ಪಕ್ಷಗಳ ಬಲಾಬಲ ಹೆಚ್ಚುಕಡಿಮೆ ಅದೇ ಇರುವ ಸಾಧ್ಯತೆ ಇರುವುದರಿಂದ ಹೊಸ ಚುನಾವಣೆ ತುರ್ಕಿಯಲ್ಲಿ ಸಮಸ್ಯೆಯ ಸಮಾಧಾನವಾಗಲಾರದು. ವೇಲ್‌ಫೇರ್ ಪಾರ್ಟಿ ನಡೆಸುತ್ತಿರುವ ಧಾರ್ಮಿಕ ಶಾಲೆಗಳು ವಿವಾದದ ವಸ್ತುವಾಗಿದೆ. ತುರ್ಕಿಯಲ್ಲಿ ಜಾತ್ಯಾತೀತ ಶಿಕ್ಷಣ, ಸರಕಾರದ ವ್ಯವಸ್ಥೆ ತಂದ ಕೆಮಾಲ್ ಅತಾತುರ್ಕ್‌ನ ನೀತಿಗಳನ್ನು ಮುಂದುವರೆಸಲು ಮದರ್‌ಲ್ಯಾಂಡ್ ಹಾಗೂ ಟ್ರೂಪಾಥ್ ಪಾರ್ಟಿಗಳು ಬದ್ಧವಾಗಿವೆ. ಆದರೆ ಈ ಪಕ್ಷಗಳ ಅಮೇರಿಕ-ಪರ ಶ್ರೀಮಂತ-ಪರ ನೀತಿಗಳು ಜನರಿಗೆ ಅಪಥ್ಯವಾಗಿದ್ದು, ಜನತೆಯ ಈ ಅತೃಪ್ತಿಯನ್ನು ವೆಲ್‌ಫೇರ್ ಪಾರ್ಟಿ ಮೂಲಭೂತವಾದಿ ಹಾದಿಯಲ್ಲಿ ಸೆಳೆಯುತ್ತಿದೆ.

ಲೋಕಸಂಚಾರ



ಶರತ್‌ಚಂದ್ರ

39 ಕಮ್ಯುನಿಸ್ಟ್, ಎಡಪಕ್ಷಗಳ ಸಮ್ಮೇಳನ ಸೈಪ್ರಸ್‌ನಲ್ಲಿ

27 ದೇಶಗಳ 39 ಕಮ್ಯುನಿಸ್ಟ್ ಹಾಗೂ ಎಡಪಕ್ಷಗಳು ಇತ್ತೀಚೆಗೆ ಸೈಪ್ರಸ್‌ನಲ್ಲಿ ಸಭೆ ಸೇರಿದ್ದವು. ರಶ್ಯಾ, ಕ್ಯೂಬಾ, ಗ್ರೀಸ್, ಪೋರ್ಚುಗಲ್, ವಿಯೆಟ್ನಾಂ ಮತ್ತು ಸೂಡಾನ್‌ನ ಪಕ್ಷಗಳು ಇದರಲ್ಲಿ ಸೇರಿವೆ. ಸಮ್ಮೇಳನದಲ್ಲಿ ಭಾಗವಹಿಸಿದ ಪಕ್ಷಗಳಲ್ಲಿ ಏಳು ಪಕ್ಷಗಳು ಆಳುವ ಕಮ್ಯುನಿಸ್ಟ್ ಪಕ್ಷಗಳು ಎರಡು ದಿನಗಳ ಈ ಸಮ್ಮೇಳನವನ್ನು, ಸೈಪ್ರಸ್‌ನ ಕಮ್ಯುನಿಸ್ಟ್ ಪಕ್ಷ ಅಕೇಲ್ ಪಕ್ಷ ಏರ್ಪಡಿಸಿತ್ತು. 'ಹೊಸ ವಿಶ್ವ ವ್ಯವಸ್ಥೆಯಲ್ಲಿ ನವ-ಲಿಬರಲ್ ವಾದದ ವಿರುದ್ಧ ಹೋರಾಟದ ಅಗತ್ಯ ಹಾಗೂ ಎಡ ಚಳುವಳಿಯ ಪ್ರಸ್ತುತ ನಿಲುವು' ಎಂಬ ವಿಷಯದ ಸುತ್ತ ಸೈಪ್ರಸ್‌ನ ದಕ್ಷಿಣ-ಪೂರ್ವದಲ್ಲಿರುವ ಸಮುದ್ರತೀರದ ಲಾರ್ನಾಕ ಎಂಬ ಪಟ್ಟಣದಲ್ಲಿ ಏರ್ಪಡಿಸಲಾಗಿತ್ತು.

ಸೈಪ್ರಸ್ ಕಮ್ಯುನಿಸ್ಟ್ ಪಕ್ಷದ 70ನೇ ಸ್ಥಾಪನಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಅಂತರ್ರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿತ್ತು. 1941ರಲ್ಲಿ ಸೈಪ್ರಸ್ ಕಮ್ಯುನಿಸ್ಟ್ ಪಕ್ಷವನ್ನು ಬ್ರಿಟಿಷ್ ವಸಾಹತುಶಾಹಿ ನಿಷೇಧಿಸಿದಾಗ ಅಕೇಲ್ ಪಕ್ಷ ಎಂದು ಪಕ್ಷದ ಹೆಸರು ಬದಲಾಯಿಸಲಾಗಿತ್ತು.

ಸಮ್ಮೇಳನ ಜನಾಂಗೀಯವಾದ, ರಾಷ್ಟ್ರೀಯವಾದ, ಧಾರ್ಮಿಕ ಮೂಲಭೂತವಾದ, ಸಂಕುಚಿತವಾದಗಳ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿತು.

ಹೈತಿಯಲ್ಲಿ ಸಾರ್ವತ್ರಿಕ ಮುಷ್ಕರ

ಹೈತಿಯಲ್ಲಿ ಮೇ19ರಂದು ಭಾರೀ ಸಾರ್ವತ್ರಿಕ ಮುಷ್ಕರ ನಡೆಯಿತು. ಶಾಲೆಗಳು, ಅಂಗಡಿಗಳು, ಕಾರ್ಖಾನೆಗಳನ್ನು ಮುಚ್ಚಲಾಯಿತು. ಸರಕಾರಿ ಕಾರ್ಖಾನೆಗಳನ್ನು ಖಾಸಗೀಕರಿಸುವ ಸರಕಾರದ ನೀತಿಯ ವಿರುದ್ಧ ಇದು ಇತ್ತೀಚೆಗೆ ನಡೆದ ಭಾರೀ ಪ್ರತಿಭಟನೆಯಾಗಿತ್ತು. ತಿಂಗಳುಗಟ್ಟಲೆ ಸಂಬಳ ಸಿಗದ ಸಾರ್ವಜನಿಕ ಸ್ಕೂಲುಗಳ ಅಧ್ಯಾಪಕರ ಮುಷ್ಕರದಿಂದ ಆರಂಭವಾದ ಈ ಪ್ರತಿಭಟನೆ ದೇಶವ್ಯಾಪೀ ಸಾರ್ವತ್ರಿಕ ಮುಷ್ಕರದಲ್ಲಿ ಕೊನೆಗಂಡಿತು.

ಅಮೇರಿಕನ್ ಕಂಪನಿಗಳ ಆಸ್ತಿ, ಶ್ರೀಮಂತರ ಆಸ್ತಿ ಪಾಸ್ತಿ ಜನರ ಕ್ರೋಧಕ್ಕೆ ಆಹುತಿಯಾಗಿತ್ತು. ಹಲವು ಕಡೆ ದಂಗೆ ಹತ್ತಿಕ್ಕಲು ಬಂದ ಅಮೇರಿಕನ್, ಕೆನೆಡಿಯನ್ ಸೈನ್ಯದ ಮೇಲೂ ಜನ ಧಾಳಿ ಮಾಡಿದರು. ಹೈತಿಯಲ್ಲಿ 'ಮಾನವೀಯ' ಬೆಂಬಲಕ್ಕೆ ಬಂದ ಅಂತರ್ರಾಷ್ಟ್ರೀಯ ಸೈನ್ಯ(ಅಮೇರಿಕಾ, ಕೆನೆಡಾ ಮುಖ್ಯವಾಗಿ) ಈಗ ಜನರನ್ನು ಹತ್ತಿಕ್ಕುತ್ತಿದೆ. ಮಾಜಿ ಸರ್ವಾಧಿಕಾರಿ, ಸೈನ್ಯಪರ ಗುಂಪುಗಳು ರಾಜಾರೋಷವಾಗಿ ಯಾವುದೇ ಪ್ರತಿಬಂಧವಿಲ್ಲದೆ ತಮ್ಮ ಚಟುವಟಿಕೆಗಳಲ್ಲಿ ತೊಡಗಿವೆ. ಆದರೆ ಜನತೆಯ ಸಾಮೂಹಿಕ ಸಂಘಟನೆಗಳು ಕೆಲಸ ಮಾಡದಂತೆ ಈ 'ಮಾನವೀಯ' ಪಡೆಗಳು ತಡೆಯುತ್ತಿವೆ. WMFನ ನೀತಿಗಳಿಂದ ಬಡತನದ ಬೇಗೆಯಿಂದ ಬೆಂದ ಜನರು ಎಲ್ಲಾ ಕಡೆ ಸ್ಫೋಟಗೊಳ್ಳುತ್ತಿದ್ದಾರೆ ಎಂದು ಈ ದಂಗೆಯಲ್ಲಿ ಪಾಲುಗೊಂಡ ಪೋಲೀಸ್ ಅಧಿಕಾರಿ ಹೇಳಿದನಂತೆ.

ಅಲ್ಬೇನಿಯಾದ ಕಮ್ಯುನಿಸ್ಟರಿಗೆ ರಾಜಕೀಯ ಬಹಿಷ್ಕಾರ ಹಾಕುವ ಸನ್ನಾಹ

ಅಲ್ಬೇನಿಯಾದಲ್ಲಿ ಸದ್ಯದಲ್ಲೇ ನಡೆಯಲಿರುವ ಚುನಾವಣೆಯಲ್ಲಿ ಕಮ್ಯುನಿಸ್ಟರು ಭಾಗವಹಿಸದಂತೆ ಆರು ಅಂಶಗಳ 'ರಾಜಕೀಯ ಕಾಂಟ್ರಾಕ್ಟ್'ನ್ನು ಅಲ್ಬೇನಿಯಾದ 10 ರಾಜಕೀಯ ಪಕ್ಷಗಳು ಮಾಡಿಕೊಂಡಿವೆ. ಈ ರಾಜಕೀಯ ಕಾಂಟ್ರಾಕ್ಟಿಗೆ ಸಾಮ್ರಾಜ್ಯಶಾಹಿ ಕುಮ್ಮಕ್ಕು ಇದೆ ಎಂದು ಬೇರೆ ಹೇಳಬೇಕಾಗಿಲ್ಲ ತಾನೇ? ಈ ಒಪ್ಪಂದಕ್ಕೆ ಸಹಿಯನ್ನು ಯುರೋಪಿಯನ್ ಒಕ್ಕೂಟದ ಪ್ರತಿನಿಧಿಯ ಸಮ್ಮುಖದಲ್ಲಿ ಹಾಕಲಾಯಿತು. ಈ ಒಪ್ಪಂದಕ್ಕೆ ಸಹಿ ಹಾಕಿದ ರಾಜಕೀಯ ಪಕ್ಷಗಳಲ್ಲಿ ಆಳುವ ಡೆಮಾಕ್ರಟಿಕ್ ಪಕ್ಷ ಹಾಗೂ ಸೋಶಲಿಸ್ಟ್ ಪಕ್ಷ ಪ್ರಮುಖವಾಗಿದ್ದವು. ಸೋಶಲಿಸ್ಟ್ ಪಕ್ಷ ಹಿಂದೆ ಕಮ್ಯುನಿಸ್ಟ್ ಪಕ್ಷದಲ್ಲಿದ್ದ ಸಂದರ್ಭ ಸಾಧಕ ಶಕ್ತಿಗಳ ಪಕ್ಷ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಮಾಜಿ ಆಳುವ ಪಕ್ಷ ಲೇಬರ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರನ್ನು ಕ್ರಿಮಿನಲ್‌ಗಳ ತರಹ ಕಾಣಲಾಗುತ್ತಿದ್ದು ಅವರನ್ನು ಈಗಾಗಲೇ ರಾಜಕೀಯದಿಂದ ಹೊರಗಿಡಲಾಗಿದೆ. ಈಗ ಇಡೀ ಪಕ್ಷವನ್ನು ಮುಂಬರುವ ಚುನಾವಣೆಯ ಹೊರಗಿಡಲಾಗಿದೆ.

ಇತ್ತೀಚೆಗೆ ಅಲ್ಬೇನಿಯಾದ ಭ್ರಷ್ಟ ಸರಕಾರದ ವಿರುದ್ಧ ಜನತೆಯ ದಂಗೆಯ ಸಮಯದಲ್ಲಿ ರಚಿಸಲಾದ ವಿಮೋಚನಾ ಸಮಿತಿಗಳು ಹಾಗೂ ನಾಗರಿಕ ಸಮಿತಿಗಳನ್ನು ಬರ್ಖಾಸ್ತು ಮಾಡಬೇಕೆಂಬುದು ಈ 'ಕಾಂಟ್ರಾಕ್ಟ್'ನ ಕರಾರು. ಈ ದಂಗೆಯಲ್ಲಿ ಭೂಗತರಾಗಿರುವ ಕಮ್ಯುನಿಸ್ಟರು ನಾಯಕತ್ವ ವಹಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಭಾರೀ ದಂಗೆಯನ್ನು ಇಟಲಿಯ ಸೈನ್ಯದ ಸಹಾಯದಿಂದ ಹತ್ತಿಕ್ಕಲಾಯಿತು.

ಈ 'ಕಾಂಟ್ರಾಕ್ಟ್' ಅಲ್ಬೇನಿಯಾವನ್ನು ಯುರೋಪಿಯನ್‌ರ ಒಕ್ಕೂಟದ ಸಾಮ್ರಾಜ್ಯಶಾಹಿ ಹಿಡಿತಕ್ಕೆ ಒಳಪಡಿಸಲು ಎಂಬುದು ಸ್ಪಷ್ಟವಲ್ಲವೇ?

ಒಕ್ಲಾಹಾಮಾ ಬಾಂಬ್ ಧಾಳಿ - ಕೊಲ್ಲಿ ಯುದ್ಧದ ಯೋಧನಿಗೆ ಗಲ್ಲು

1995ರಲ್ಲಿ ಅಮೇರಿಕಾದ ಒಕ್ಲಾಹಾಮಾ ನಗರದಲ್ಲಿ ಬಾಂಬ್ ಧಾಳಿ ನಡೆಸಿ 168 ಜನರ ಸಾವಿಗೆ ಕಾರಣವಾದ ಪ್ರಕರಣದಲ್ಲಿ ತಪ್ಪಿತಸ್ಥನಿಗೆ ಗಲ್ಲು ಶಿಕ್ಷೆಯಾಗಿದೆ. ಮುಖ್ಯ ಆಪಾದಿತ ಕೊಲ್ಲಿ ಯುದ್ಧದಲ್ಲಿ ಭಾಗವಹಿಸಿದ ಅಮೇರಿಕನ್ ಸೈನಿಕ ಟಿಮೊಟೆ ಮೆಕ್‌ವೈಗ್(25 ವರ್ಷ).

ಭೂಗತ ಬಲಪಂಥೀಯ ಫ್ಯಾಸಿಸ್ಟ್ ಗುಂಪು ಒಂದಕ್ಕೆ ಸೇರಿದ ಟಿಮೋತಿ, ಈ ಬಾಂಬ್ ಧಾಳಿಯನ್ನು ಫೆಡರಲ್ ಸರಕಾರದ ರಾಜಕೀಯ ಪ್ರತಿಭಟನೆಯಾಗಿ ಮಾಡಿದ್ದ. ಆಗ ಈ ಬಾಂಬ್ ಧಾಳಿ ಇಡೀ ಅಮೇರಿಕಾವನ್ನೇ ನಡುಗಿಸಿತ್ತು. □

ಅಮೇರಿಕನ್ ಸೇನಾ ನೆಲೆ ಕಡಿತಕ್ಕೆ ಜಪಾನಿಯರ ಒಲವು

ಜಪಾನಿನಲ್ಲಿರುವ ಅಮೇರಿಕಾದ ಸೇನಾ ನೆಲೆಗಳನ್ನು ಕ್ರಮೇಣಾ ಕಡಿತ ಮಾಡುತ್ತಾ ಕಮ್ಮಿ ಮಾಡಬೇಕೆಂದು, ಶೇಕಡಾ 72 ಜಪಾನಿಯರು ಅಭಿಪ್ರಾಯಪಟ್ಟಿದ್ದಾರೆ. ಶೇಕಡಾ 15 ಮಂದಿ ತಕ್ಷಣ ಅಮೇರಿಕ ಸೇನಾ ನೆಲೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಅಮೇರಿಕಾದಲ್ಲಿ ಇದೇ ವಿಷಯದ ಬಗ್ಗೆ ಮಾಡಿದ ಸಮೀಕ್ಷೆಯೊಂದರಲ್ಲಿ ಶೇಕಡಾ 44 ಜನ ಕ್ರಮೇಣ ಸೇನಾ ನೆಲೆಗಳ ಬಲಾಬಲದಲ್ಲಿ ಕಡಿತ ಮಾಡಬೇಕೆಂದರೆ, ಶೇಕಡಾ 5 ಅಮೇರಿಕನ್ನರು ಅಮೇರಿಕಾದ ಪಡೆಗಳು ತಕ್ಷಣ ವಾಪಸ್ಸಾಗಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಶೇಕಡಾ 48 ಜನ ಅಮೇರಿಕಾದ ಸೇನಾ ನೆಲೆಗಳು ಜಪಾನಿನಲ್ಲಿ ಮುಂದುವರೆಯಬೇಕೆಂದಿದ್ದಾರೆ.

ಜಪಾನಿನ ಒಕಿನಾವಾದಲ್ಲಿರುವ ಸೇನಾ ನೆಲೆಗಳನ್ನು ಕಡಿಮೆಮಾಡಬೇಕೆಂಬ ನಿಲುವಿಗೆ ಶೇಕಡಾ 86 ಜಪಾನಿಯರು ಬೆಂಬಲಿಸುತ್ತಿದ್ದಾರೆ. ಒಕಿನಾವಾದಲ್ಲಿ ಈ ಬೆಂಬಲ ಇನ್ನೂ ಹೆಚ್ಚು - ಶೇಕಡಾ 91.

ಆಫ್ರಿಕಾದ ಸಾಲದ ಭಾರ=ಒಟ್ಟಾರೆ ಉತ್ಪನ್ನ

ಆಫ್ರಿಕಾದ ಸಾಲದ ಹೊರೆ ಎಷ್ಟಾಗಿದೆಯೆಂದರೆ ಈಗ ಇಡೀ ಖಂಡದ ಒಟ್ಟು ಉತ್ಪನ್ನದಷ್ಟು ಈ ಖಂಡಕ್ಕೆ ಸಾಲದ ಹೊರೆ ಇದೆ. ಇಡೀಖಂಡದ ರಫ್ತಿನ ಕಾಲು ಭಾಗ, ಸಾಲದ ಕಂತು ತೀರಿಸಲು ವೆಚ್ಚವಾಗುತ್ತಿದೆ. ಆಫ್ರಿಕನ್ ಐಕ್ಯತಾ ಸಂಘಟನೆಯ(OAU) ಮಹಾ ಕಾರ್ಯದರ್ಶಿ ಸಲೀಂ ಅಹಮದ್ ಸಲಾಂ ಈ ವಿಷಯವನ್ನು ಎಲಿಎನ 20ನೇ ಸಮ್ಮೇಳನದ ಕಾರ್ಮಿಕ ಹಾಗೂ ಸಾಮಾಜಿಕ ವಿಷಯಗಳ ಕಮಿಶನ್‌ನಲ್ಲಿ ಮಾತನಾಡುತ್ತಾ ಹೊರಗೆಡವಿದರು. OAUನ 20ನೇ ಸಮ್ಮೇಳನ ಆಡಿಸ್ ಅಬಾಬಾದಲ್ಲಿ ನಡೆಯುತ್ತಿದೆ.

ಆಫ್ರಿಕಾಖಂಡದ ಒಟ್ಟು ಸಾಲದ ಹೊರೆ ಈಗ 340 ಶತಕೋಟಿ ಡಾಲರು. ವಾರ್ಷಿಕ ಸಾಲದ ಕಂತಿನ ಹೊರೆ 24 ಶತ ಕೋಟಿ ಡಾಲರು ಪ್ರತಿವರ್ಷಕ್ಕೆ. ಅಭಿವೃದ್ಧ ದೇಶಗಳು, ಸಾಲ ಮನ್ನಾ ಹಾಗೂ ಇತರ ತೀವ್ರ ಕ್ರಮಗಳನ್ನು ಕೈಗೊಳ್ಳದಿದ್ದರೆ ಪರಿಸ್ಥಿತಿ ತೀರಾ ಹದಗೆಡಲಿದೆ ಎಂದು ಅವರು ಎಚ್ಚರಿಸಿದರು.

ಐಡಿಪಿಎಲ್ ಕೊನೆಗೂ ಉಳಿಯುವುದೇ?

ದೇಶದ ಸಾರ್ವಜನಿಕ ವಲಯದ ಬೃಹತ್ ಔಷಧಿ ತಯಾರಿಕಾ ಕಂಪನಿ ಐಡಿಪಿಎಲ್‌ನ್ನು ಪುನರುಜ್ಜೀವನಗೊಳಿಸ ಬೇಕು ಎಂದು ಕೊನೆಗೂ ರಾಸಾಯನಿಕಗಳು ಮತ್ತು ರಸಗೊಬ್ಬರ ಮಂತ್ರಾಲಯ ಶಿಫಾರಸು ಮಾಡಿದ.

ಏಶ್ಯಾದಲ್ಲೇ ಅತಿದೊಡ್ಡ ಔಷಧಿ ಕಂಪೆನಿಯೆನಿಸಿದ ಇದನ್ನು ಲಾಭಕರವಾಗಿ ನಡೆಸಲು ಸಾಧ್ಯವಿಲ್ಲ ಎಂದು ಸಾಬೀತು ಮಾಡಿ ಅದನ್ನು ಬಹುರಾಷ್ಟ್ರೀಯ ಔಷಧಿ ಕಂಪನಿಗಳಿಗೆ ಮಾರುವ, ಅಥವಾ ಅವುಗಳೊಂದಿಗೆ ಜಂಟಿ ವಲಯದಲ್ಲಿ ನಡೆಸುವಂತೆ ಮಾಡುವ ಹುನ್ನಾರ ಇದುವರೆಗೆ ನಡೆದಿತ್ತು. ಸರಕಾರೀ ವಲಯದಿಂದಲೂ ಈ ಹುನ್ನಾರದಲ್ಲಿ ಕೆಲವರು ಶಾಮೀಲಾಗಿದ್ದರು. ಆದರೆ ಕಾರ್ಮಿಕ ಸಂಘಗಳು 'ಐಡಿಪಿಎಲ್ ಉಳಿಸಿ ಸಮಿತಿ' ರಚಿಸಿಕೊಂಡು ನಡೆಸಿದ ಸತತ ಹೋರಾಟದ ಫಲವಾಗಿ ರಾಸಾಯನಿಕಗಳ ಮಂತ್ರಾಲಯ ಈಗ ಈ ಶಿಪಾರಸ್ಸು ಮಾಡಿದೆ.

ಈ ಹಿಂದೆ 4500 ಕಾರ್ಮಿಕರನ್ನು ಕಡ್ಡಾಯ ನಿವೃತ್ತಿಗೊಳಿಸಿ, ಕಾರ್ಮಿಕರ ವೇತನ, ಮತ್ತಿತರ ಸೌಲಭ್ಯಗಳನ್ನು ಸ್ತಂಭನಗೊಳಿಸಿ ಮೂರು ವರ್ಷಗಳ ನಂತರ ಇದನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲ ಎನ್ನಲಾಯಿತು. 12000 ಇದ್ದ ಕಾರ್ಮಿಕರ ಸಂಖ್ಯೆಯನ್ನು 7400ಕ್ಕೆ ಇಳಿಸಲಾಯಿತೇ ಹೊರತು ಅದನ್ನು ಆಧುನೀಕರಿಸಲು ಏನೂ ಕ್ರಮ ಕೈಗೊಳ್ಳಲಿಲ್ಲ. ಬದಲು ಅದನ್ನು ಮುಚ್ಚುವ ನಿರ್ಧಾರವನ್ನು ಕೇಂದ್ರ ಸಂಪುಟ ಕೈಗೊಂಡಿತು.

ಈ ಹಿನ್ನೆಲೆಯಲ್ಲಿ 'ಐಡಿಪಿಎಲ್ ಉಳಿಸಿ ಸಮಿತಿ' ಖಾಸಗಿ ರಚನೆಗೊಂಡಿತು. 'ಸಲಹೆಗಾರ' ಕಂಪನಿಯೊಂದು ಸೂಚಿಸಿದ ಖರ್ಚಿಗಿಂತಲೂ ಬಹಳ ಕಮ್ಮಿ ಖರ್ಚಿನಲ್ಲಿ ಹಾಗೂ ಆ 'ಸಲಹೆಗಾರ' ಸೂಚಿಸಿದಂತೆ ಇನ್ನೂ 5200 ಕಾರ್ಮಿಕರಲ್ಲಿ ಒಬ್ಬರನ್ನು ರಿಟ್ರೆಂಚ್ ಮಾಡದೆಯೇ ಇದನ್ನು ಪುನರುಜ್ಜೀವನಗೊಳಿಸಲು ಸಾಧ್ಯ ಎಂದು ಸಿಐಟಿಯು ಮತ್ತು ಐಎನ್‌ಟಿಯುಸಿ ತಂತಮ್ಮ ಪರ್ಯಾಯ ಯೋಜನೆಗಳನ್ನು ಮುಂದಿಟ್ಟರು.

ಕಾರ್ಮಿಕರ ಸತತ ಪ್ರತಿಭಟನೆಗಳು, ಹೋರಾಟಗಳ ನಂತರ ಏಪ್ರಿಲ್ 18 ರಂದು ಸಂಸತ್ತಿನ ಸ್ಥಾಯೀ ಸಮಿತಿ ಐಡಿಪಿಎಲ್‌ನ್ನು ಪುನರುಜ್ಜೀವನಗೊಳಿಸುವ ಯೋಜನೆಯೊಂದನ್ನು ಒಂದು ತಿಂಗಳೊಳಗೆ ಸಿದ್ಧಪಡಿಸಬೇಕು ಎಂದು ಸರಕಾರಕ್ಕೆ ಹೇಳಿತು. ಕಾರ್ಮಿಕ ಸಂಘಗಳು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದರು. ಇದರಿಂದ ರಾಸಾಯನಿಕ ಮಂತ್ರಾಲಯ, ತನ್ನ ಅಧಿಕಾರಿಗಳು ಹಿಂದೆ ನೀಡಿದ ಕಂಪನಿಯನ್ನು ಮುಚ್ಚಬೇಕೆಂಬ ಟಿಪ್ಪಣಿಯನ್ನು ಬದಿಗೊತ್ತಿ ಪರಿಷ್ಕೃತ ಟಿಪ್ಪಣಿ ಮಂಡಿಸಿತು. ಸರಕಾರ ನಾಲ್ಕು ಮಂತ್ರಿಗಳ ಉಪಸಮಿತಿಯೊಂದನ್ನು ರಚಿಸಿತು. ಅದು ಆಡಳಿತ ಮತ್ತು ಕಾರ್ಮಿಕ ಸಂಘಗಳು ಸೇರಿ ಒಂದು ಪುನರುಜ್ಜೀವನ ಯೋಜನೆಯನ್ನು ತಯಾರಿಸಿ ಸಲ್ಲಿಸಲು ಹೇಳಿತು.

ಈ ಯೋಜನೆಯ ಬಗ್ಗೆ ಚರ್ಚಿಸಲು ಜೂನ್ 5 ರಂದು ನಡೆದ ಸಭೆಯಲ್ಲಿ ಇಲಾಖೆಯ ಕೆಲವು ಅಧಿಕಾರಿಗಳು ಮತ್ತೊಮ್ಮೆ ಕಂಪನಿ ಪುನರುಜ್ಜೀವನಗೊಳ್ಳದಂತೆ ಮಾಡಲು ಪ್ರಯತ್ನಿಸಿದರು. ಅವರು ತಯಾರಿಸಿದ್ದ ಯೋಜನೆಯ ಪ್ರಕಾರ ಮುಂದಿನ ಹತ್ತು ವರ್ಷ ಈ ಕಂಪನಿ ಲಾಭ ತರುವಂತಿರಲಿಲ್ಲ. ಕಾರ್ಮಿಕ ಮುಖಂಡರು ಇದಕ್ಕೆ ಒಪ್ಪಲಿಲ್ಲ. ಕೊನೆಗೆ ಜೂನ್ 5 ಹಾಗೂ 6 ರಂದು ದೀರ್ಘ ಚರ್ಚೆ ಹಾಗೂ ಕಂಪನಿಯ ಮಾರುಕಟ್ಟೆ ನಿರ್ದೇಶಕರ ವರದಿಯ ಮೇಲೆ ಅಭಿಪ್ರಾಯ ವಿನಿಮಯ ದ ನಂತರ ಜೂನ್ 9 ರಂದು ಸಂಪುಟ ಕಾರ್ಯದರ್ಶಿಯವರಿಗೆ ಒಂದು ವರದಿ ಸಲ್ಲಿಸಲಾಯಿತು. ಈ ಹಂತದಲ್ಲೂ ಪುನರುಜ್ಜೀವನ ಯೋಜನೆಯನ್ನು ಬುಡಮೇಲು ಮಾಡುವ ಪ್ರಯತ್ನ ನಡೆಯಿತು.

ಈ ನಡುವೆ ಮಂತ್ರಿಗಳು ಬದಲಾಗಿದ್ದಾರೆ. ಹೊಸ ಮಂತ್ರಿ ಅರುಣಾಚಲಂ ಈ ಪುನರುಜ್ಜೀವನ ಯೋಜನೆಯನ್ನು ಮತ್ತೆ ಬದಲಿಸುತ್ತಾರೋ ಎಂದು ಕಾದು ನೋಡಬೇಕಾಗಿದೆ. ಆದರೆ ಐಡಿಪಿಎಲ್‌ನ್ನು ಉಳಿಸುವ ಹೋರಾಟವನ್ನು ಮುಂದುವರೆಸಲು ಕಾರ್ಮಿಕ ಸಂಘಗಳು ನಿರ್ಧರಿಸಿವೆ.

ಹೀಗೊಂದು 'ಅಭಿಪ್ರಾಯ ಸಂಗ್ರಹಣೆ'

ಪಶ್ಚಿಮ ಬಂಗಾಳದಲ್ಲಿ ಎಡ ರಂಗದ ನಿರಂತರ ಎರಡು ದಶಕಗಳ ಆಳ್ವಿಕೆ ಹಲವರ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿದೆ. ಅಭಿಪ್ರಾಯಗಳಲ್ಲಿ, ನಿಲುವುಗಳಲ್ಲಿ ಬದಲಾವಣೆ ತಂದಿದೆ. ಜ್ಯೋತಿ ಬಸುರವರ ಬಗ್ಗೆಯಂತೂ 'ಜೀವನ ಚರಿತ್ರೆ' ಗಳ ಮಹಾಪೂರವೇ ಬರಲಾರಂಭಿಸಿದೆ. ದಿಲ್ಲಿಯ ಮ್ಯಾಗಝಿನ್ 'ಔಟ್ ಲುಕ್' ಎಡರಂಗ ಇಪ್ಪತ್ತು ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಒಂದು 'ಅಭಿಪ್ರಾಯ ಸಂಗ್ರಹಣೆ' ನಡೆಸಿದೆಯಂತೆ. ಅದರ ಫಲಿತಾಂಶಗಳನ್ನು ತನ್ನ ಸಂಚಿಕೆಯಲ್ಲಿ ಪ್ರಕಟಿಸಿದೆ. ಎರಡು ನಗರ ಪ್ರದೇಶಗಳಾದ ಕಲ್ಕತ್ತ ಮತ್ತು ಸಿಲಿಗುರಿಯಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಾದ ಮಾಲ್ಡಾ, 24 ಪರಗಣ, ಮಿಡ್ನಾಪುರ, ಬಾಂಕುರಾಗಳಲ್ಲಿ 804 ವಯಸ್ಕರಿಂದ ಅದು ಸಂಗ್ರಹಿಸಿದ 'ಅಭಿಪ್ರಾಯ ಸಂಗ್ರಹಣೆ'ಯ ಫಲಿತಾಂಶ ಹೀಗಿದೆ.



● ಎಡರಂಗದ 20 ವರ್ಷಗಳ ಆಳ್ವಿಕೆಗೆ ಕಾರಣ

❖ ಒಳ್ಳೆಯ ಕಾರ್ಯನಿರ್ವಹಣೆಯಿಂದಾಗಿ	67%
❖ ಬೇರೆ ಪರ್ಯಾಯವಿಲ್ಲದ್ದರಿಂದಾಗಿ	14%
❖ ಚುನಾವಣೆಗಳ ಮೋಸದಿಂದ	15%
❖ ಜ್ಯೋತಿ ಬಸು ಹೆಸರಿನಿಂದ	9%

● ಪಶ್ಚಿಮ ಬಂಗಾಳದ ಜನರ ಪರಿಸ್ಥಿತಿ ಸುಧಾರಣೆಯಾಗಿದೆಯೇ?

❖ ಆಗಿದೆ	64%
❖ ಆಗಿಲ್ಲ	35%
❖ ಹೇಳಲು ಸಾಧ್ಯವಿಲ್ಲ	1%

● ರಾಜ್ಯದ ಆರ್ಥಿಕ ಕಳೆದ 20 ವರ್ಷಗಳಲ್ಲಿ ಉತ್ತಮಗೊಂಡಿದೆಯೇ?

❖ ಹೌದು	50%
❖ ಇಲ್ಲ	48%
❖ ಹೇಳಲು ಸಾಧ್ಯವಿಲ್ಲ	2%

● ಸರಕಾರ ರಾಜ್ಯದ ನಗರ ಪ್ರದೇಶಗಳನ್ನು ನಿರ್ಲಕ್ಷಿಸಿದೆಯೇ?

❖ ಇಲ್ಲ	63%
❖ ಹೌದು	32%
❖ ಗೊತ್ತಿಲ್ಲ	5%

● ಎಡ ರಾಜಕಾರಣಿಗಳು ಭ್ರಷ್ಟರಾಗಿದ್ದಾರೆಯೇ?

❖ ಇಲ್ಲ	64%
❖ ಹೌದು	33%
❖ ಗೊತ್ತಿಲ್ಲ	3%

● ಜ್ಯೋತಿಬಸು ವೈಯುಕ್ತಿಕವಾಗಿ ಭ್ರಷ್ಟರೇ?

❖ ಇಲ್ಲ	71%
❖ ಹೌದು	22%
❖ ಗೊತ್ತಿಲ್ಲ	7%

● ಮುಖ್ಯಮಂತ್ರಿಯಾಗಿ ಜ್ಯೋತಿಬಸುವರವರ ಸಾಧನೆ ಹೇಗೆ?


❖ ಅತ್ಯುತ್ತಮ	22%
❖ ಉತ್ತಮ	45%
❖ ಸಾಧಾರಣ	28%
❖ ಚೆನ್ನಾಗಿಲ್ಲ	5%

● ಪಶ್ಚಿಮ ಬಂಗಾಳ ಎಡರಂಗ ಸರಕಾರ ಎಡ ಪಂಥೀಯ ಆದರ್ಶಗಳನ್ನು ಬೀರುತ್ತಿದೆಯೇ?

❖ ಹೌದು	60%
❖ ಇಲ್ಲ	25%
❖ ಗೊತ್ತಿಲ್ಲ	5%

ನಿರೀಕ್ಷೆಯಂತೆಯೇ ಈ ಪತ್ರಿಕೆ ಈ ಕೊನೆಯ ಪ್ರಶ್ನೆಯ ಉತ್ತರವನ್ನು ಈ 'ಅಭಿಪ್ರಾಯ ಸಂಗ್ರಹ' ತಲೆಬರಹವಾಗಿ ಕೊಟ್ಟಿದೆ. ಅದರ ಸಂಪಾದಕೀಯ ಪೂರ್ವಗ್ರದ ಸಂಕೇತವದು. ಇಂತಹ ಪತ್ರಿಕೆಗಳಲ್ಲಿ ಪೂರ್ವಗ್ರಹ ಪೀಡಿತ ಪ್ರಶ್ನೆಗಳಿಗೆ ದೊರೆತ ಉತ್ತರಗಳು ಇವು ಎಂಬುದನ್ನು ವಸ್ತುನಿಷ್ಟವಾಗಿ ಇದನ್ನು ಪರಿಶೀಲಿಸುವವರು ಗಮನಿಸಬೇಕಾಗುತ್ತದೆ.

ಉತ್ತರ ಪ್ರದೇಶದಲ್ಲಿ



ಜೈಲಿನಲ್ಲೂ ಟಿ.ವಿ. ಫೋನು.......!

18.6.97ರ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಮುಖಪುಟದಲ್ಲಿ ಸೋಜಿಗದ ಸಂಗತಿಯೊಂದು ಪ್ರಕಟವಾಗಿತ್ತು. ಮೇವು ಹಗರಣಕ್ಕೆ ಸಂಬಂಧಪಟ್ಟು ಜೈಲಿಗೆ ಕಳುಹಿಸಿದ ಆರೋಪಿಗಳ ಕೈಯಲ್ಲಿ ಸೆಲ್ಯೂಲರ್ ಫೋನ್-ಬೇಕಾದವರೊಂದಿಗೆ ಮಾತನಾಡಲು ಅನುಕೂಲವಾಗುವಂತೆ. ಜತೆಯಲ್ಲಿ ಟಿ.ವಿ. ಸೆಟ್ಟುಗಳು - ಮನರಂಜನೆಗಾಗಿ. ಹೀಗಿರುವಾಗ ಮೃಷ್ಟಾನ್ನ ಭಕ್ಷ ಭೋಜನಗಳೂ ಜೈಲಿಗೆ ಹೋಗಿರಲೇಬೇಕು.

ಒಟ್ಟಿನಲ್ಲಿ ಮನೆಯಲ್ಲಿ ಸಿಗುವಷ್ಟೇ ಆದರಾತಿಥ್ಯಗಳು ಜೈಲಿನಲ್ಲಿ..........!

ಬಡಪಾಯಿ ಬಡಜನರನ್ನು ಬಟ್ಟೆ ಕಳಚಿ ಥಳಿಸುವ ಪೋಲೀಸ್ ಮಂದಿ ಶ್ರೀಮಂತರಿಗೆ ಎಷ್ಟೊಂದು ಆತಿಥ್ಯ.

ಎಲ್ಲವುಕ್ಕಿಂತಲೂ ಆಶ್ಚರ್ಯದ ಸಂಗತಿಯೆಂದರೆ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ಸೇರಿದ 3 ಎಂಎಲ್‌ಎಗಳಲ್ಲಿ ಒಬ್ಬೊಬ್ಬರೂ ಒಂದೊಂದು ಪಕ್ಷಕ್ಕೆ ಸೇರಿದವರು. ಅವರಲ್ಲಿ ಜಗದೀಶ್ ಶರ್ಮ ಕಾಂಗ್ರೆಸ್ಸಿನವರಾದರೆ, ಧ್ರುವ ಭಗತ್ ಬಿಜೆಪಿಗೂ, ಆರ್.ಕೆ.ರಾಣಾ ಜನತಾದಳಕ್ಕೂ ಸೇರಿದವರಾಗಿದ್ದಾರೆ.

ಜನರ ತೋರಿಕೆಗೆ ಅವರು ರಾಜಕೀಯ ವಿರೋಧಿಗಳಾಗಿದ್ದರೂ ಹಣ ಲಪಟಾಯಿಸುವುದರಲ್ಲಿ ಶಾಮೀಲು!

KRNM/BGS-405 MAG (2) PRB DECR 319-79/79

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ.
2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು